# ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

**ತಿಂಗಳ ವೈಚಾರಿಕ ಡೈಜೆಸ್ಟ್**

ಸಂಪುಟ - ೧೫ ಸೆಪ್ಟೆಂಬರ್ - ೨೦೧೪ ಸಂಚಿಕೆ - ೦೨

## ದೇಶವನ್ನು ಪದೇಪದೇ ಕಟ್ಟಲಾಗುವುದಿಲ್ಲ!

## ಮೊದಲ ಮಹಾಯುದ್ಧದ ಕರಾಳ ನೆನಪುಗಳು

## ಹೆಸರಿಗೆ ಅನ್ವರ್ಥವಾಗಿ ಬಾಳಿದ ಸುಮನಾ ವಿಶ್ವನಾಥ್

## ಗ್ರಾಮೀಣ ಜೀವನದ ಇಂದಿನ ಸ್ಥಿತಿ -ಗತಿ

# ಜನಪದ ವಿಚಾರದಲ್ಲಿ

ಸೆಪ್ಟೆಂಬರ್– 2014

**1) ದೇಶವನ್ನು ಪದೇ ಪದೇ ಕಟ್ಟಲಾಗುವುದಿಲ್ಲ**

**– ಸುರೇಂದ್ರ ಕೌಲಗಿ**

ದೇಶ ಕಟ್ಟುವುದೆಂದರೆ ಅದರ ಭೌತಿಕ ಸಂರಚನೆಯೇ ಎಂದೂ ಭಾವಿಸಲಾಗುತ್ತದೆ. ಆದರೆ ದೇಶವೆಂಬುದು ಅದರೊಳಗಿರುವ ಬೃಹತ್ ಮಾನವ ಸಮಾಜ. ಸಮಾಜ ಜೀವನ ಎಲ್ಲ ದೃಷ್ಟಿಯಿಂದಲೂ ಸುಸ್ಥಿರವಾಗಿ ಇರುವಂತೆ ಸರ್ಕಾರಗಳು ಯೋಚನೆ ಮಾಡುತ್ತಿಲ್ಲವೆಂಬ ಸಂಗತಿಯತ್ತ ಈ ಲೇಖನ ಗಮನ ಸೆಳೆಯುತ್ತದೆ.

**2) ಮೊದಲ ಮಹಾಯುದ್ಧದ ಕರಾಳ ನೆನಪುಗಳು**

**– ಮೂಲ – ಸಲೀಲ್ ಮಿಶ್ರಾ – ಅನು – ಸುಕೌ**

ಮೊದಲ ಮಹಾಯುದ್ಧವಾಗಿ ನೂರು ವರ್ಷಗಳಾದವು. ಆ ಯುದ್ಧದ ಹೊಟ್ಟೆಯಿಂದ ಎರಡನೇ ಮಹಾಯುದ್ಧ ಹುಟ್ಟಿತು. ಯುದ್ಧದ ಭೀತಿ ಉಂಟಾಗುತ್ತಿರುವ ಸಂದರ್ಭದಲ್ಲಿ ಆಗಿ ಹೋದ ಯುದ್ಧದ ಪರಿಣಾಮಗಳನ್ನು ಈ ಲೇಖನ ಜ್ಞಾಪಿಸುತ್ತದೆ.

**3) ಜೆ.ಪಿ.ಯವರೊಂದಿಗೆ ಐದು ವರ್ಷಗಳು – ಸುರೇಂದ್ರ ಕೌಲಗಿ**

ದೇಶದ ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದ ಲೋಕನಾಯಕ ಜಯಪ್ರಕಾಶ್ ನಾರಾಯಣರೊಂದಿಗಿನ ಐದು ವರ್ಷಗಳ ಬಾಂಧವ್ಯ ಇಲ್ಲಿ ಚಿತ್ರಿತವಾಗಿದೆ.

**4) ಗ್ರಾಮೀಣ ಜೀವನದ ಇಂದಿನ ಸ್ಥಿತಿ –ಗತಿ**

**– ಡಾ.ಬೋರೇಗೌಡ ಚಿಕ್ಕಮರಳಿ**

ಗ್ರಾಮದಲ್ಲಿ ಹುಟ್ಟಿ, ವಿದ್ಯಾಭ್ಯಾಸ ಮಾಡಿ "ಕುಮಾರವ್ಯಾಸ ಒಂದು ಅಧ್ಯಯನ" ವೆಂಬ ಗ್ರಂಥ ಬರೆದ ಗ್ರಾಮೀಣ ಯುವಕರೋರ್ವರ ಗ್ರಾಮ ಬದುಕಿನ ವಿಚಾರಗಳು ಇಲ್ಲಿವೆ.

**5) ಕೂಡಂಕುಳಂ : ಸತ್ಯಾಗ್ರಹ ಅಹಿಂಸೆಯ ಹೊಸ ಅಂಕ**

**– ಕೋಡಿಬೆಟ್ಟು ರಾಜಲಕ್ಷ್ಮಿ**

ಸ್ವತಂತ್ರ ಭಾರತದಲ್ಲಿ ಉಂಟಾದ ಹಲವಾರು ಬಗೆಯ ಸಮಸ್ಯೆಗಳ ವಿರುದ್ಧ ನಡೆದ ಜನತಾ ಹೋರಾಟಗಳ ಸಂಕೇತವಾಗಿ ಕೂಡಂಕುಳಂ ಸತ್ಯಾಗ್ರಹವಿದೆ. ಅದರ ಪರಿಚಯ ಈ ಲೇಖನದಲ್ಲಿದೆ.

**6) ಹೆಸರಿಗೆ ಅನ್ವರ್ಥವಾಗಿ ಬಾಳಿದ ಸುಮನಾ ವಿಶ್ವನಾಥ್**

**– ಸುಮನಾ ಅಭಿಮಾನಿ ಬಳಗ, ಮೈಸೂರು**

**7) ಸರ್ವೋದಯ ಆಂದೋಲನದ ಮುನ್ನಡೆ**

**8) ಜನಪದ ಸೇವಾ ಟ್ರಸ್ಟ್ ಸಮಾಚಾರ**

**9) ಜನಪದ ನಿಲಯದ ಅಂತರಂಗದಲ್ಲಿ – 125**

## ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟೆಂಬರ್ - ೨೦೧೪
ಸಂಪುಟ - ೧೫
ಸಂಚಿಕೆ - ೦೨



ಸಂಪಾದಕ
ಸುರೇಂದ್ರ ಕೌಲಗಿ





ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-



ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 08236 - 316344
08236 - 299854
email :
janapada@yahoo.com
Web: janapada.net


# ಮತಿ- ಧೃತಿ

ಬರಿ ಮತಿ ಸಾಲದು ನಾಡಿದನೆತ್ತೆ
ಬರಿ ಧೃತಿಯೂ ಸಾಕಾಗದು ಮತ್ತೆ
ಧೃತಿಯಿಲ್ಲದ ಮತಿವಂತಗೆ ಜೋಲು ಮುಖ
ಮತಿಯಿಲ್ಲದ ಧೃತಿವಂತನಿಗೇನು ಸುಖ?
ಧೃತಿ ಮತಿಗಳನುಳ್ಳವನೇ ಧೀರ
ಆತನ ಕೊರಳಿಗೆ ವಿಜಯದ ಹಾರ.

ಈ ನೆಲದೊಳೊ ಮತಿವಂತರೆ
ಬಹಳ ಅದರಿಂದಾರಿಗೆ ಏನು ಸುಖ?
ಕಾಲಕಾಲಕೂ ಬರುವನು ದುರುಳ
ಆ ಬಕಗಿದಿರಹುದಾದ ಮುಖ?
ಭೀಮರಿದ್ದರೂ ಕುಂತಿಯರೆಲ್ಲಿ?
ಮಣಿಮಣಿಯುತಲೇ ಗಲ್ಲವ ಬಡಿವ
ದೇವರೆ ಗತಿ ಎಂಬವರೇ ಇಲ್ಲಿ!

ಭಾರತೀಯ, ನೀ ಭಾರತೀಯನಾಗುಳಿದೀ
ಬಾಳನು ಹಸಗೊಳಿಸು
ಪರುಷದ ಮಣಿಯೆನೆ ಹರುಷದ
ಗಣಿಯೆನೆ ಪುರುಷನಾಗಿ ನಾಡಿದ ಮೆರಸು
ಸ್ವತಂತ್ರ ಭಾರತ ಸೂರ್ಯನಿದಿರು ಸಿರಿ
ಜೀವನದಮೃತದ ಮಳೆಗರೆಸು
ಆ ತೇಜದಿ ಮೂಡುವ ಮಳೆಬಿಲ್ಲೊಳು
ತಾಯ್ನಾಡಿನ ಬಣ್ಣವ ಬಿಡಿಸು.

– ಪು.ತಿ.ನ

# ಚಿಂತನೆಗೊಂದು ಸಂಗತಿ

ಯಾವುದೇ ರಾಜಕೀಯ ಪಕ್ಷದಿಂದ ದೇಶದ ಸರ್ವಜನರ ಸರ್ವತೋಮುಖ ಏಳಿಗೆಯಾಗಲು ಸಾಧ್ಯವಿಲ್ಲ. ಈ ವಿಷಯ ಜಗತ್ತಿನ ಎಲ್ಲ ದಾರ್ಶನಿಕರ ಸಂತರ ಅಭಿಪ್ರಾಯ. ಲೋಕಾನುಭವದಿಂದಮೂಡಿ ಬಂದ ವಿಚಾರ. ಭಾರತದ ಮಟ್ಟಿಗಂತೂ ಹೆಚ್ಚು ಅನ್ವಯವಾಗುವಂಥ ವಿಚಾರ. ಸ್ವಾತಂತ್ರ್ಯವನ್ನು ತಂದುಕೊಡಲು ಬಹುವಾಗಿ ಹೋರಾಟ ನಡೆಸಿ ಅಮರರಾದ ಮಹಾತ್ಮ ಗಾಂಧೀ ಪ್ರಾರಂಭದಲ್ಲಿ ಅಂದಿನ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಕಾಂಗ್ರೆಸ್ ಪಕ್ಷದ ಹಿತೈಷಿ ಮತ್ತು ಮಾರ್ಗದರ್ಶಿಯಾಗಿದ್ದರೂ ಕೂಡ ನಾಲ್ಕಣೆಯ ಸದಸ್ಯತ್ವವನ್ನು ಪಡೆದಿರಲಿಲ್ಲ. ಸ್ವಾತಂತ್ರ್ಯದಿನದಂದು ದಿಲ್ಲಿಯಿಂದ ದೂರದ ನೌಖಾಲಿಯಲ್ಲಿ ಸತತವಾಗಿ ಐದು ತಿಳಗಳ ಕಾಲ ಹಿಂದೂ ಮುಸ್ಲಂ ಐಕ್ಯತೆಗಾಗಿ ಬರಿಗಾಲಿನಲ್ಲಿ ಓಡಾಡಿದರು. ರಾಜಧಾನಿಯಲ್ಲಿ ನಡೆದ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಅವರು ಪಾಲ್ಗೊಂಡಿರಲಿಲ್ಲ. ಆದರೆ ಸ್ವಾತಂತ್ರ್ಯ ಬಂದ ನಂತರ ಸ್ವರಾಜ್ಯ, ಗ್ರಾಮರಾಜ್ಯಗಳ ಮೂಲಕ ಸರ್ವೋದಯ ಸಮಾಜ ರಚನೆಯ ಕಲ್ಪನೆಯನ್ನು ದೇಶದ ಮುಂದೆ ಇಟ್ಟಿದ್ದರು. ಮೊದಲ ಏಕ ವ್ಯಕ್ತಿ ಸತ್ಯಾಗ್ರಹಿಯಾಗಿ ವಿನೋಬಾಭಾವೆ ಚಳುವಳಿಯಲ್ಲಿ ಭಗವಹಿಸಿದ್ದರು ಕೂಡ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿರಲಿಲ್ಲ. ತಮ್ಮ ಭೂದಾನ ಯಜ್ಞದ ಮೂಲಕ ಜನಶಕ್ತಿ ಉಂಟುಮಾಡಿ ರಾಜ್ಯಶಕ್ತಿಯ ಮೇಲೆ ನಿಯಂತ್ರಣ ಸಾಧಿಸುವುದರ ಮೂಲಕ ಸರ್ವೋದಯ ಸಮಾಜ ಕಟ್ಟಲು ಪ್ರಾರಂಭಿಸಿದರು. ಉಗ್ರ, ಸೌಮ್ಯವಾದಿ, ಸಮಾಜವಾದಿ, ರಾಯ್‌ವಾದಿಯಾಗಿದ್ದ ಜಯಪ್ರಕಾಶ್ ನಾರಾಯಣರು ಆ ಎಲ್ಲ ರಾಜಕೀಯ ಪಕ್ಷಗಳಿಗೆ ರಾಜೀನಾಮೆ ಕೊಟ್ಟು ರಾಜ್ಯಶಕ್ತಿ ಮತ್ತು ದಂಡಶಕ್ತಿಗಳಿಗಿಂತ ಮಿಗಿಲಾದ ಲೋಕಶಕ್ತಿಯನ್ನು ನಿರ್ಮಾಣ ಮಾಡುವುದರ ಮೂಲಕ ಸರ್ವೋದಯ ಸಮಾಜದ ಕನಸನ್ನು ಕಂಡಿದ್ದರು. ಅದಕ್ಕಾಗಿ ಜೀವದಾನ ಮಾಡಿದರು.

ಆದರೆ ಕರ್ನಾಟಕದಲ್ಲಿ ಸರ್ವೋದಯದ ಹೆಸರಿನಲ್ಲಿ ರಾಜಕೀಯ ಪಕ್ಷ ಸ್ಥಾಪಿತಗೊಂಡಿರುವುದು ತೀವ್ರ ವಿಚಾರಕ್ಕೊಂದು ಸಂಗತಿಯಾಗಿದೆ. ರಾಜಕೀಯೇತರ ಸಂಘಟನೆಯಾಗಿದ್ದ ರೈತ ಸಂಘದಲ್ಲಿ ಇದ್ದಷ್ಟು ಆತ್ಮಬಲ, ನೈತಿಕ ಶಕ್ತಿ, ಜನರ ವಿಶ್ವಾಸ ಅದು ಕರ್ನಾಟಕ ಸರ್ವೋದಯ ಪಕ್ಷವೆಂದು ರೂಪಾಂತರಗೊಂಡ ಮೇಲೆ ಕಳೆದುಕೊಂಡಂತೆ ಕಾಣುತ್ತದೆ. "ಸರ್ವೋದಯ ಪಕ್ಷ" ಎಂಬ ನಾಮಕರಣ ಉಚಿತವೇ ಎಂದು ಸಂಬಂಧಿಸಿದವರು ಚಿಂತನೆ ಮಾಡಬೇಕು.

# ದೇಶವನ್ನು ಪದೇಪದೇ ಕಟ್ಟಲಾಗುವುದಿಲ್ಲ!

ದೇಶ ಕಟ್ಟುವುದೆಂದರೆ ಅದರ ಭೌತಿಕ ಸಂರಚನೆಯೇ ಎಂದೂ ಭಾವಿಸಲಾಗುತ್ತದೆ. ಆದರೆ ದೇಶವೆಂಬುದು ಅದರೊಳಗಿರುವ ಬೃಹತ್ ಮಾನವ ಸಮಾಜ. ಸಮಾಜ ಜೀವನ ಎಲ್ಲ ದೃಷ್ಟಿಯಿಂದಲೂ ಸುಸ್ಥಿರವಾಗಿ ಇರುವಂತೆ ಸರ್ಕಾರಗಳು ಯೋಚನೆ ಮಾಡುತ್ತಿಲ್ಲವೆಂಬ ಸಂಗತಿಯತ್ತ ಈ ಲೇಖನ ಗಮನ ಸೆಳೆಯುತ್ತದೆ.

– ಸುರೇಂದ್ರ ಕೌಲಗಿ

ನರೇಂದ್ರ ಮೋದಿ ಸರ್ಕಾರ ಬರುತ್ತಿದ್ದಂತೆ ದೇಶದಲ್ಲಿ ಇದುವರೆಗಿದ್ದ ಕೈಗಾರಿಕಾ ನೀತಿ, ಆರ್ಥಿಕ ನೀತಿ, ಶೈಕ್ಷಣಿಕ ನೀತಿ, ಅಭಿವೃದ್ಧಿ ನೀತಿ ಇತ್ಯಾದಿಗಳೆಲ್ಲವೂ ತೀವ್ರಗತಿಯಲ್ಲಿ ಬದಲಾಗುತ್ತಿವೆ. 64 ವರ್ಷಗಳ ಹಿಂದೆ ರಚಿತವಾಗಿದ್ದ ಯೋಜನಾ ಆಯೋಗ ಹೊಸ ರೂಪ ಪಡೆಯುವುದರಲ್ಲಿದೆ. ವಿದೇಶೀ ಕಂಪನಿಗಳಷ್ಟೇ ಅಲ್ಲ ವಿದೇಶಿ ಸರ್ಕಾರಗಳಿಗೂ ಕೂಡ ಭಾರತದ ಕೈಗಾರಿಕೋದ್ಯಮದಲ್ಲಿ ಬಂಡವಾಳ ತೊಡಗಿಸುವಂತೆ ಕರೆ ಕೊಡಲಾಗಿದೆ. ಇಂಗ್ಲೆಂಡ್ ತನ್ನ ಕೈಗಾರಿಕೀಕರಣದ ಬೆಳವಣಿಗೆಗಾಗಿ ಭಾರತವನ್ನು ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು ಆಕ್ರಮಿಸಿಕೊಂಡಿತು. ಬಲವಂತವಾಗಿ ಮತ್ತು ನಿಸ್ಸಾಹಯಕತೆಯ ಕಾರಣದಿಂದಾಗಿ ಭಾರತ ಪಾರತಂತ್ರಕ್ಕೊಳಗಾಯಿತು. ಆದರೆ ಈಗ ಸ್ವತಂತ್ರ ಭಾರತದ ಸರ್ಕಾರವೇ ಹೊರ ದೇಶಗಳನ್ನು ಆಹ್ವಾನಿಸಿ ದೇಶದ ಸ್ವತಂತ್ರ ಆರ್ಥಿಕತೆ ವ್ಯವಸ್ಥೆಯ ಮೇಲೆ ದಾಳಿ ಉಂಟಾಗುವಂತೆ ಮಾಡುತ್ತಿದೆ. ಬಡತನ, ನಿರುದ್ಯೋಗ, ಅಜ್ಞಾನ, ರೋಗರುಜಿನ ಮುಂತಾದ ಸಮಸ್ಯೆಗಳಿಂದ ತುಂಬಿದ್ದ ಭಾರತ ಸಹಜವಾಗಿ ಪರಾಧೀನವಾಯಿತು. ಸ್ವಾತಂತ್ರ್ಯ ಬಂದಾದ ನಂತರ 1949ರಲ್ಲಿ ರಚಿತವಾದ ಸಂವಿಧಾನ ಸಭೆ ಸ್ವತಂತ್ರ ಭಾರತಕ್ಕನುಗುಣವಾದ ಸಂವಿಧಾನವನ್ನು ರಚಿಸಿತು; ಸಮಾಜವಾದಿಸಮಾಜದ ರಚನೆಯ ಮಾತನ್ನೂ ಆಡಿತು. ಸಂವಿದಾನಕ್ಕನುಸಾರವಾಗಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಆಯ್ಕೆಯಾಗಿ ಬಂದ ಕಾಂಗ್ರೆಸ್ ಪಕ್ಷದ ಸರ್ಕಾರ ಹತ್ತು ವರ್ಷಗಳ ಕಾಲ ತನ್ನ ವಿಚಾರಕ್ಕನುಗುಣವಾಗಿ ದೇಶ ಕಟ್ಟಲು ಮುಂದಾಯಿತು. ಅದು ಜಾರಿಗೆ ತಂದ ಎಲ್ಲ ಕ್ಷೇತ್ರಗಳಲ್ಲಿಯ ರೀತಿ ನೀತಿಗಳಿಂದಾಗಿ ದೇಶ ಒಂದು ರೀತಿಯಲ್ಲಿ ಕಟ್ಟಲ್ಪಟ್ಟಿತು. ಆದರೆ ಯಾವ ಮಾದರಿಯ ಸಮಾಜವೆಂಬುದು ಮಾತ್ರ ಅಸ್ಪಷ್ಟವಾಗಿಯೇ ಉಳಿಯಿತು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಬಹು ಸಂಖ್ಯಾತ ಸಮಸ್ಯೆಗಳು ಹಾಗೇ ಉಳಿದುಕೊಂಡವು. ನಂತರ ಅಧಿಕಾರಕ್ಕೆ ಬಂದಿರುವ ಬಿ.ಜೆ.ಪಿ ಸರ್ಕಾರ ತನ್ನದೇ

ಆದ ರೀತಿ ನೀತಿಗನುಗುಣವಾಗಿ ದೇಶವನ್ನು ಕಟ್ಟಲು ಉದ್ಯುಕ್ತವಾಗಿದೆ. 2019ರಲ್ಲಿ ನಡೆಯಬಹುದಾದ ಚುನಾವಣೆಯಲ್ಲಿ ಆಯ್ಕೆಯಾಗಿ ಅಧಿಕಾರಕ್ಕೆ ಬರುವ ರಾಜಕೀಯ ಪಕ್ಷ ತನ್ನದೇ ಆದ ರೀತಿಗನುಗುಣವಾಗಿ ದೇಶವನ್ನು ಕಟ್ಟಬಹುದು. ಇಲ್ಲಿ ದೇಶ ಕಟ್ಟುವುದೆಂದರೆ ದೇಶದ ಭೌತಿಕ ಸಂರಚನೆಯೇ ಎಂದು ಭಾವಿಸಲಾಗುತ್ತದೆ. ಆದರೆ ದೇಶವೆಂಬುದು ಅದರೊಳಗಿರುವ ಬೃಹತ್ ಮಾನವ ಸಮಾಜ. ಮಾನವ ಸಮಾಜದ ರಚನೆ ಹೇಗಿರಬೇಕು ಮತ್ತು ಅದಕ್ಕನುಗುಣವಾದ ರಚನಾ ಕಾರ್ಯಕ್ರಮ ಹೇಗಿರಬೇಕು ಎಂಬ ಕಲ್ಪನೆಯೇ ಇಲ್ಲವಾಗಿದೆ. ಸಮಾಜ ಚಲನಶೀಲವಾದದ್ದು. ಹಳೆಯ ನೀರು ಹೋಗಿ ಹೊಸ ನೀರು ಬರುತ್ತಲೇ ಇರುತ್ತದೆ. ಆದರೂ ಕೂಡ ಧಾರೆ ಒಂದೇ. ಹಣತೆಯಲ್ಲಿಯ ದೀಪ ಬೆಳಗುತ್ತ ಕರಗುತಲಿದ್ದರೂ ಬತ್ತಿಯಲ್ಲಿ ಹರಿಯುವ ಎಣ್ಣೆಯ ಧಾರೆ ಒಂದೇ. ಅದೇ ರೀತಿ ಸದಾ ಚಲನಶೀಲವಾಗಿರುವ ಸಮಾಜದಲ್ಲಿರುವ ಮಾನವ ಒಂದೆ. ಆ ಮಾನವನ ಉದಯವೇ ಇಡೀ ಸಮಾಜದ ಉದಯ ಮತ್ತು ದೇಶದ ಉದಯ. ಆದರೆ ದೇಶ ಕಟ್ಟುವ ಕಾಯಕದಲ್ಲಿ ತೊಡಗಿರುವ ಸರ್ಕಾರಗಳು ಮಾನವ ಸಮಾಜದ ಸುಸ್ಥಿರ ಏಳಿಗೆಯ ಮಾತನ್ನು ಯೋಚಿಸುತ್ತಿಲ್ಲ. ವಿಜ್ಞಾನ, ತಂತ್ರಜ್ಞಾನ ಮತ್ತು ಅಂತರರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳನ್ನು ಆಧರಿಸಿ ದೇಶವನ್ನು ಕಟ್ಟಲು ಪ್ರಯತ್ನಿಸುತ್ತವೆಯೇ ಹೊರತು ದೇಶದೊಳಗಿನ ಮಾನವ ಸಮಾಜ ಸುಸ್ಥಿರ ಜೀವನ ವಿಧಾನ ನಡೆಸಲು ಸಹಾಯಕವಾಗುವ ರೀತಿಯಲ್ಲಿ ದೇಶ ಕಟ್ಟಲು ಪ್ರಯತ್ನಿಸುತ್ತಿಲ್ಲ. ಇದರಿಂದಾಗಿ ಅಭಿವೃದ್ಧಿ ಎಂಬ ತಪ್ಪು ಮಂತ್ರದಂಡವನ್ನು ಹಿಡಿದು ದೇಶಕಟ್ಟಲು ಪ್ರಯತ್ನಿಸಲಾಗುತ್ತಿದೆ. ಅಭಿವೃದ್ಧಿ ಎಂಬ ಮಂತ್ರಕ್ಕೆ ಯಾವ ಜಿ.ಡಿ.ಪಿ ಎಂಬ ತಂತ್ರ ಮುಖ್ಯವಾಗಿದೆಯೋ ಆ ಜಿ.ಡಿ.ಪಿಯೇ ಅರ್ಥವಿಹೀನವಾದದ್ದು. ಅದು ಅಭಿವೃದ್ಧಿಯ ನಿಜವಾದ ಅಲತೆಗೋಲಾಗಲಾರದು ಎಂಬ ವಿಚಾರ ಪ್ರಪಂಚದ ಎಲ್ಲ ಅರ್ಥಶಾಸ್ತ್ರಜ್ಞರು ಹೇಳುತ್ತಿರುವಾಗ ನಮ್ಮ ಸರ್ಕಾರಗಳು ಜಿ.ಡಿ.ಪಿಯನ್ನೇ ಸಕಲ ಸಮಸ್ಯೆಗಳ ಪರಿಹಾರಕ್ಕೆ ಔಷಧಿ ಎಂಬಂತೆ ಭಾವಿಸುತ್ತಿರುವುದು ದುರ್ದೈವದ ಸಂಗತಿ. ದೇಶವನ್ನು ಕಟ್ಟುವುದೆಂದರೆ ಕೇವಲ ಭೌತಿಕವಾಗಿ ಅಲ್ಲ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಮೂಲಭೂತ ಮೌಲ್ಯಗಳ ಆಧಾರವಾಗಿ ಕಟ್ಟುವುದು ಎಂಬ ಹೊಸ ವ್ಯಾಖ್ಯೆಯೊಂದಿಗೆ ದೇಶ ಕಟ್ಟುವ ಕೆಲಸ ನಡೆಯಬೇಕು. ದೇಶವನ್ನು ಭೌತಿಕವಾಗಿ ಪದೇ ಪದೇ ಕಟ್ಟಬಹುದು. ಹೆದ್ದಾರಿಯ ಮೇಲೆ ಹೆದ್ದಾರಿ ರಚಿಸಬಹುದು, ಬುಲೆಟ್ ರೈಲ ತರಬಹುದು, ಏರೋಡ್ರೋಮುಗಳನ್ನು ನವೀಕರಿಸುತ್ತಾ ಹೋಗಬಹುದು, ರಕ್ಷಣಾ ಬಲವನ್ನು ಹೆಚ್ಚಿಸುತ್ತಾ ಹೋಗಬಹುದು, ವಿಶ್ವವಿದ್ಯಾನಿಲಯಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗಬಹುದು. ಈ ರೀತಿ ದೇಶದ ಭೌತಿಕ ಬೆಳವಣಿಗೆ ಒಂದು ರೀತಿ ಮುಖ್ಯವಾದರೆ ಅದಕ್ಕಿಂತಲೂ ಅತೀ ಹೆಚ್ಚು

ಮುಖ್ಯ ಕೆಲಸ ದೇಶದೊಳಗಿನ ಸಮಾಜದ ನಿರ್ಮಾಣ. ಸುಸ್ಥಿರ ಜೀವನದ ಸಮಾಜ ನಿರ್ಮಾಣದೊಂದಿಗೆ ಕಟ್ಟಲಾಗುವ ದೇಶದ ನಿರ್ಮಾಣವೆ ನಿಜವಾದ ನಿರ್ಮಾಣ. ಅದನ್ನು ಪದೇ ಪದೇ ಕಟ್ಟಲಾಗುವುದಿಲ್ಲ. ಈ ಅಂಶವನ್ನು ಸರ್ಕಾರಗಳು ಗಮನದಲ್ಲಿ ಇರಿಸಿಕೊಳ್ಳಬೇಕಾದುದು ಅಗತ್ಯ. ಮಹಿಳೆಯರ ಮೇಲಿನ ಅತ್ಯಾಚಾರ, ಆಡಳಿತದಲ್ಲಿಯ ಭ್ರಷ್ಟಾಚಾರ, ಆತ್ಮಹತ್ಯಾ ಪ್ರಕರಣಗಳು, ಪ್ರಾಕೃತಿಕ ವಿಕೋಪಗಳು, ನಿರುದ್ಯೋಗ, ಹೆಣ್ಣು ಭ್ರೂಣ ಹತ್ಯೆ, ಹಿಂಸಾಚಾರ ಮುಂತಾದ ಸಾಮಾಜಿಕ ರೋಗಗಳನ್ನು ಒಡಲೊಳಗೆ ಇಟ್ಟುಕೊಂಡು ದೇಶವನ್ನು ಭೌತಿಕವಾಗಿ ಎಷ್ಟೇ ಸುಂದರವಾಗಿ ಕಟ್ಟಿದರೂ ಆ ದೇಶ ಅಸ್ಥಿರವಾಗಿ ಉಳಿಯುವುದೇ ಹೊರತು ಸಕಲಾರ್ಥದಲ್ಲಿ ಬಲಾಢ್ಯ ದೇಶವಾಗಿ ರೂಪುಗೊಳ್ಳಲಾರದು. ಅಸ್ಥಿರವಾದ, ಅಸತ್ಯವಾದ, ಅಪ್ರಮಾಣಿಕವಾದ, ಅಸಭ್ಯ ಸಮಾಜವನ್ನೊಳಗೊಂಡ ದೇಶವನ್ನು ಪದೇಪದೇ ಕಟ್ಟುವ ಬದಲು ಸುಸ್ಥಿರವಾದ, ನೆಮ್ಮದಿಯ, ಸಭ್ಯ ಮತ್ತು ಸತ್ಯದ ಮೇಲೆ ಆಧಾರಿತವಾಗಿರುವ ಸಮಾಜವನ್ನೊಳಗೊಂಡ ದೇಶ ನಮ್ಮದಾಗಬೇಕು. ಅಂಥ ಪ್ರಯತ್ನವನ್ನು ಇಂದಿನ ಸರ್ಕಾರ ಮಾಡಬೇಕೆ ಹೊರತು ಹಳೆಯದನ್ನು ಕಿತ್ತುಹಾಕಿ ಹೊಸದನ್ನು ನಿರ್ಮಿಸುವಂಥ ಕೆಲಸದಲ್ಲಿ ತನ್ನ ಸಮಯ, ಶಕ್ತಿ ಮತ್ತು ಹಣ ವ್ಯಯ ಮಾಡಬಾರದು.

ದೇಶದೊಳಗೆ ಸುಸ್ಥಿರ ಜೀವನ ವಿಧಾನದ ಸಮಾಜ ನಿರ್ಮಾಣಕ್ಕಾಗಿ ಪೂರಕವಾಗುವ ರೀತಿಯಲ್ಲಿ ವಿದೇಶಾಂಗ ನೀತಿಯನ್ನು ರೂಪಿಸಿಕೊಳ್ಳಬೇಕು. ಸಾರ್ಕ್ ದೇಶಗಳೊಂದಿಗಿನ ಸಂಬಂಧವನ್ನು ಮಧುರಗೊಳಿಸಿಕೊಳ್ಳಬೇಕು. ಪಾಕಿಸ್ತಾನದೊಂದಿಗೆ ಮೈತ್ರಿ ಹೆಚ್ಚಾಗುವಂತೆ ನೋಡಿಕೊಳ್ಳಬೇಕು. ಚೀನಾದೊಂದಿಗಿನ ಸಂಬಂಧ ಕ್ಷಿಪ್ರವಾಗಿ ಸುಧಾರಿತಗೊಳ್ಳುವಂತೆ ಮಾಡಬೇಕು. ನೆರೆಹೊರೆಯ ಎಲ್ಲ ದೇಶಗಳೊಂದಿಗೆ ಸ್ನೇಹ ಪೂರ್ಣ ಬಾಂಧವ್ಯ ಉಂಟಾದಲ್ಲಿ ದೇಶದ ರಕ್ಷಣಾವೆಚ್ಚ ಬಹುವಾಗಿ ಕಡಿಮೆಯಾಗಿ, ಉಳಿತಾಯವಾಗುವ ಹಣವನ್ನು ದೇಶದಲ್ಲಿಯ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಉಪಯೋಗಿಸಬಹುದಾಗಿದೆ.

# ಮೊದಲ ಮಹಾಯುದ್ಧದ ಕರಾಳ ನೆನಪುಗಳು



– ಸಲೀಲ್ ಮಿಶ್ರಾ

20ನೇ ಶತಮಾನ ಬಿಡಿಸಲಾರದ ವೈರುಧ್ಯಗಳ ಶತಮಾನ. ಒಂದು ಸಲ ಆ ಶತಮಾನ. ಒಂದು ಸಲ ಆ ಶತಮಾನ ಆಶಾದಾಯಕ ಮತ್ತು ಭರವಸೆಯ ಯುಗವನ್ನು ಪ್ರಾರಂಭಿಸಿತು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಅಮಿತವಾದ ಬೆಳವಣಿಗೆ ಮತ್ತು ಪ್ರಗತಿಯ ಸಾಧ್ಯತೆಯನ್ನು ತಂದಿತು. ಹೊಸ ಬಗೆಯ ಊರ್ವರ ಶಕ್ತಿ, ವಿದ್ಯುತ್ತೀಕರಣ, ಆಕಾಶಯಾನ ಮುಂತಾದವುಗಳೆಲ್ಲವೂ ಒಳ್ಳೆಯ ಭವಿಷ್ಯವನ್ನು ಸೂಚಿಸುತ್ತಿದ್ದವು. ಸಂತೋಷ ಮತ್ತು ಏಳಿಗೆ ಸನಿಹದ ಭವಿಷ್ಯದಲ್ಲಿ ದಕ್ಕುವ ಸಾಧ್ಯತೆಗಳನ್ನು ತಂದವು. ಮಾನವ ಕುಲಕ್ಕೆ ಆಶಾದಾಯಕ ಯುಗವೊಂದು ಬಂದಿತೆಂದು ಅನಿಸತೊಡಗಿತು.

ಆದರೆ ಆ ಶತಮಾನವು ಹಿಂದೆಂದೂ ಆಗದಂಥ ವಿನಾಶ ಮತ್ತು ಭಯದ ಯುಗವಾಗಿತ್ತು. ಮಾನವೊದ್ದೇಶದ ಕಾರಣದಿಂದಾಗಿಯೇ ಅಸಂಖ್ಯಾತ ಜನರು 20ನೇ ಶತಮಾನದಲ್ಲಿ ಸತ್ತರು. ಒಂದು ಅಂದಾಜಿನ ಪ್ರಕಾರ 20ನೇ ಶತಮಾನದಲ್ಲಿ ಸುಮಾರು 250 ಯುದ್ಧಗಳು ನಡೆದವು ಮತ್ತು ನೂರಹತ್ತು ದಶಲಕ್ಷ ಜನರು ಯುದ್ಧಗಳಲ್ಲಿ ಮತ್ತು ಜನಾಂಗ ಹತ್ಯೆ ಮತ್ತು ಇತರ ಕದನಗಳಲ್ಲಿ ಸತ್ತರು. ಹತ್ಯೆಯಾದವರ ಈ ಸಂಖ್ಯೆ ಹತ್ತೊಂಬತ್ತನೇ ಶತಮಾನದ ಪ್ರಾರಂಭದಲ್ಲಿದ್ದ ಜಾಗತಿಕ ಜನಸಂಖ್ಯೆಯ ಐದನೆಯ ಒಂದು ಭಾಗಕ್ಕಿಂತ ಹೆಚ್ಚಾಗಿತ್ತು. ಹಿಂದಿನ ಶತಮಾನದಲ್ಲಿ ಆಗಿದ್ದಂತೆ ಜನರು ಹಸಿವೆಯಿಂದ ಬಳಲಿ ಮತ್ತು ಯಾವ ಆಸರೆ ಇಲ್ಲದೆ ಸತ್ತಂತೆ ಸಾಯದೆ ಜನಾಂಗೀಯ ಮತ್ತು ಸೈದ್ಧಾಂತಿಕ ದ್ವೇಷದಿಂದ ಸತ್ತರು.

ಮೊದಲನೇ ಮಹಾಯುದ್ಧ ಈ ವೈರುಧ್ಯಗಳನ್ನು ಸಂಕೇತಿಸುತ್ತದೆ. ಜಗತ್ತಿನಲ್ಲಿ ಅತ್ಯಂತ ಸಂಪದ್ಭರಿತ ಪ್ರದೇಶವೆಂದು ಭಾವಿಸಲ್ಪಟ್ಟಿದ್ದ ಯೂರೋಪ್ ಖಂಡದಲ್ಲಿ ಇದು ನಡೆಯಿತು. ಯಾವ ದೇಶಗಳು ತಮ್ಮನ್ನು ಆಧುನಿಕತೆ ಮತ್ತು ನಾಗರೀಕತೆಯ ದೂತ ಎಂದು ಭಾವಿಸಿದ್ದವೊ ಮತ್ತು ಯಾವ ದೇಶಗಳು ತಮ್ಮನ್ನು ಮಾನವ ಕುಲವನ್ನು ಮಧ್ಯ ಯುಗದ ಕ್ರೂರತೆಯಿಂದ ಪಾರುಮಾಡುವುದಾಗಿ ವಚನಕೊಟ್ಟಿದ್ದವೊ ಆ ದೇಶಗಳೇ ರಾಕ್ಷಸೀಯ ಪರಸ್ಪರ ಹಿಂಸಾಚಾರದಲ್ಲಿ ತೊಡಗಿದವು. ಆ ಅಸಂಗತತೆಗೆ ಏನಾದರೂ ವಿವರಣೆ ಇದೆಯೆ.

18ನೇ ಮತ್ತು 19ನೇ ಶತಮಾನಗಳು ಜಗತ್ತನ್ನು ಮೂಲಭೂತವಾದ, ವ್ಯಾಪಕವಾದ ಮತ್ತು ಹಿಂದಕ್ಕೆ ಪಡೆಯಲಾಗದಂಥ ರೀತಿಗಳಲ್ಲಿ ಬದಲಾಯಿಸಿದವು. ಯುರೋಪಿನ ಕೆಲ ಚಿಕ್ಕ ರಾಷ್ಟ್ರಗಳು ಅಭೂತಪೂರ್ವವಾದ ಐಶ್ವರ್ಯವನ್ನು ಮತ್ತು ಉತ್ಕರ್ಷವನ್ನು ಸಂಪಾದಿಸಿಕೊಂಡವು. ಈ ಪ್ರಕ್ರಿಯೆ ಇಂಗ್ಲೆಂಡಿನಿಂದ 18ನೇ ಶತಮಾನದ ಕೊನೆಯ ಕಾಲುಭಾಗದಿಂದ ಪ್ರಾರಂಭವಾಯಿತು ಮತ್ತು ಕೊಡಲೆ ಯುರೋಪಿನ ಇತರ ಭಾಗಗಳಿಗೂ ಹಬ್ಬಿತು. ಕುತೂಹಲಕಾರಿಯಾದ ಸಂಗತಿ ಏನೆಂದರೆ ಕೈಗಾರಿಕೀಕರಣದಿಂದಾಗಿ ಪಡೆದ ಈ ಹೊಸ ಶ್ರೀಮಂತಿಕೆ ಜಗತ್ತಿನ ಇತರ ಪ್ರದೇಶವನ್ನು ಅದೀನಪಡಿಸಿಕೊಳ್ಳುವಂತೆಯೂ ಮತ್ತು ಪಾರುಪತ್ಯವನ್ನು ಸಾರುವಂತೆಯೂ ಮಾಡಲು ಪ್ರೇರೇಪಿಸಿತು. ಜಗತ್ತಿನ ಉಳಿದ ಎಲ್ಲ ಭಾಗವನ್ನು ಯೂರೋಪಿನ ನಿಂಯತ್ರಣಕ್ಕೆ ತೆಗೆದುಕೊಂಡರೆ ಮಾತ್ರ ಕೈಗಾರಿಕೀಕರಣದ ತೀವ್ರತೆಯನ್ನು ಉಳಿಸಿಕೊಳ್ಳಬಹುದೆಂದು ಅನಿಸಿತು. ಈ ರೀತಿ ಸಾಮ್ರಾಜ್ಯೀಕರಣ ಮತ್ತು ವಸಾಹತುಶಾಹಿಕರಣ ಪ್ರಾರಂಭವಾಯಿತು. ಈ ವಸಾಹತುಶಾಹಿಗೆ ಏಷ್ಯಾ ಮತ್ತು ಆಫ್ರಿಕಾ ಖಂಡದ ದೇಶಗಳು ಒಳಗಾದವು. ಅವು ಯುರೋಪ್ ದೇಶಗಳ ರಾಜಕೀಯ ನಿಂಯತ್ರಣಕ್ಕೆ ಒಲಪ್ಪಟ್ಟವು. ಆದ್ದರಿಂದ ಪ್ರಧಾನ ಸಾಮ್ರಾಜ್ಯಶಾಹಿ ಶಕ್ತಿಗಳು ವಿಸ್ತರಣಾಕಾಂಕ್ಷೆಯ ಮತ್ತಿನಿಂದ ಕೂಡಿದಂತಾದವು. ಪ್ರತಿಯೊಂದು ರಾಜ್ಯಶಕ್ತಿ ವಿಸ್ತರಿಸಲು ಬಯಸುತ್ತಿತ್ತು ಆದರೆ ಎಲ್ಲ ರಾಜ್ಯಶಕ್ತಿಗಳ ವಿಸ್ತರಣಾ ಮಹತ್ವಾಕಾಂಕ್ಷೆಯನ್ನು ಪೂರೈಸಲು ಸಾಧ್ಯವಾಗುವಷ್ಟು ಭೂಮಿ ದೊಡ್ಡದಾಗಿರಲಿಲ್ಲ. ಇದರಿಂದಾಗಿ ಅವುಗಳು ಪರಸ್ಪರ ತಿಕ್ಕಾಟಕ್ಕಿಳಿಯುವಂಥ ಅನಿವಾರ್ಯತೆ ಉಂಟಾಯಿತು. ಪ್ರತಿಯೊಂದು ಬೃಹತ್ ರಾಜ್ಯಶಕ್ತಿ ಇನ್ನೊಂದು ಶಕ್ತಿಗೆ ಭಯಪಡುತ್ತಿತ್ತು. ಬೇರೆ ಎಲ್ಲ ಶಕ್ತಿಗಳಿಂದ ಹೆದರಿಸಲ್ಪಡುತ್ತಿತ್ತು. ಪ್ರತಿಯೊಂದು ರಾಜ್ಯಶಕ್ತಿ ಇನ್ನೊಂದನ್ನು ಹೆದರಿಸುತ್ತಿತ್ತು ಮತ್ತು ತಾನು ಇನ್ನೊಂದು ಶಕ್ತಿಯಿಂದ ಹೆದರುತ್ತಿತ್ತು. ಈ ಪರಸ್ಪರರ ಹೆದರಿಕೆ ಯುರೋಪಿನ ಬೃಹತ್ ರಾಜ್ಯಶಕ್ತಿಗಳ ಅಭದ್ರತೆಯನ್ನು ಹೆಚ್ಚಿಸಿತು. ಅತ್ಯಂತ ಶ್ರೀಮಂತ ಮತ್ತು ಶಕ್ತಿದಾಯಕ ದೇಶಗಳು ಅತ್ಯಂತ ಹೆಚ್ಚು ಅಭದ್ರತೆಯನ್ನು ಅನುಭವಿಸುತ್ತಿರುವ ವಿಚಿತ್ರ

ಪರಿಸ್ಥಿತಿಯನ್ನು ಜಗತ್ತು ನೋಡಬೇಕಾಯಿತು. ಹೆಚ್ಚಿನ ಶ್ರೀಮಂತಿಕೆ ಮತ್ತು ಹೆಚ್ಚಿನ ರಾಜ್ಯಶಕ್ತಿ ಇನ್ನಷ್ಟು ಅಭದ್ರತೆಯನ್ನು ಯುರೋಪಿನಲ್ಲಿ ತಂದಿತು.

ಇಲ್ಲಿ ಕುತೂಹಲದ ವಿಷಯವೇನೆಂದರೆ ಅಭದ್ರತೆಯು ಯುರೋಪಿನ ಹೋರಗಿನಿಂದ ಬಂದುದಲ್ಲ ಬದಲಿಗೆ ಆ ದೇಶಗಳಲ್ಲಿದ್ದ ಪರಸ್ಪರರ ಭಯದಿಂದ. ಸಾಮ್ರಾಜ್ಯಶಾಹಿ ಶಕ್ತಿಗಳು ಮುಖ್ಯವಾಗಿ ವಸಾಹತುಗಳ ಕಾರಣಕ್ಕಾಗಿ ಪರಸ್ಪರ ಘರ್ಷಣೆಗೆ ಇಳಿದವು. ರಷ್ಯಾ, ಜಪಾನ್, ಚೈನಾದ ಮೇಲೆಯೂ ಫ್ರಾನ್ಸ್ ಮತ್ತು ಜರ್ಮನಿ ಮೊರಕ್ಕೊದ ಮೇಲೆಯೂ ಎಲ್ಲ ಬೃಹತ್ ರಾಜ್ಯ ಶಕ್ತಿಗಳು ಬಾಲ್ಕನ್ಸ ಮೇಲೆಯೂ ಘರ್ಷಣೆಗೆ ಇಳಿದವು. ಪ್ರತಿಯೊಂದು ರಾಜ್ಯಶಕ್ತಿ ತನ್ನ ವಸಾಹತುಗಳನ್ನು ರಕ್ಷಿಸಿಕೊಳ್ಳಲು ಮತ್ತು ಬೇರೆ ರಾಷ್ಟ್ರಗಳ ವಸಾಹತುಗಳಲ್ಲಿ ಅಕ್ರಮ ಪ್ರವೇಶ ಮಾಡಲು ಬಯಸಿದವು. ಇಷ್ಟೊಂದು ದುರಾಸೆ ವಸಾಹತುಗಳಿಗಾಗಿ ಅವುಗಳಲ್ಲಿ ಇತ್ತು. 19ನೇ ಶತಮಾನದ ಕೊನೆಯ ವೇಳೆಗೆ ಯುರೋಪ್ ಮತ್ತು ಅಮೇರಿಕಾದ ಹೊರಗಿರುವ ಯಾವುದೇ ದೇಶವು ಸ್ವತಂತ್ರವಾಗಿ ಇರಲಿಲ್ಲ.

ಹೀಗೆ ಭೂ ಕಂಡದ ಮೇಲೆ ಯಜಮಾನಿಕೆಯನ್ನು ಸಾಧಿಸುವುದಕ್ಕಾಗಿ ಉಂಟಾದ ಪರಸ್ಪರ ಘರ್ಷಣೆ ಹೊಸ ಬಗೆಯ ಭಯ, ಆತಂಕ ಮತ್ತು ಅವಿಶ್ವಾಸಗಳ್ನು ಉಂಟುಮಾಡಿತು. ಎಲ್ಲ ಬೃಹತ್ ರಾಜ್ಯಶಕ್ತಿಗಳು ಒಂದೇ ಬಗೆಯ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಪ್ರತಿಯೊಂದು ರಾಜ್ಯಶಕ್ತಿ ಶಸ್ತ್ರಾಸ್ತ್ರಗಳನ್ನು ಗುಡ್ಡೆಹಾಕಿಕೊಂಡಿತು ಮತ್ತು ಒಳ ಒಪ್ಪಂದ ಮಾಡಿಕೊಂಡಿತು. ಇದರ ಅನಿವಾರ್ಯ ಪರಿಣಾಮ ಏನಾಯಿತಂದರೆ ಶಸ್ತ್ರಾಸ್ತ್ರ ತಯಾರಿಕೆಯ ಬಹುದೊಡ್ಡ ಕೈಗಾರಿಕೆ. ಎಲ್ಲ ಐರೋಪ್ಯ ದೇಶಗಳು ಟ್ಯಾಂಕ್‌ಗಳನ್ನು, ಜಲಂತರ್‌ಗಾಮಿಗಳನ್ನು, ವಿಮಾನಗಳನ್ನು ಸಂಗ್ರಹಿಸಿದವು. ಜವಹರಲಾಲ್ ನೆಹರು 1933ರಲ್ಲಿ ಕಾರಾಗೃಹದಿಂದ ತಮ್ಮ ಮಗಳು ಇಂದಿರಾಗೆ ಬರೆದ ಕಾಗದದಲ್ಲಿ ಈ ರೀತಿ ಹೇಳಿದ್ದಾರೆ " ಎಂಥ ಭಯಾನಕವಾಗಿದೆ ಈ ಶಸ್ತ್ರಾಸ್ತ್ರ ತಯಾರಿಕಾ ಕೈಗಾರಿಕೆ. ಅದು ಬೇರೆಯವರ ಸಾವಿನ ಪಕ್ಕದಲ್ಲಿ ಬೆಳೆಯುತ್ತದೆ ಮತ್ತು ಯುದ್ಧಗಳ ಭಯಾನಕತೆಯನ್ನು ಉಂಟುಮಾಡಲು ಸ್ವಲ್ಪವೂ ಹಿಂಜರಿಯುವುದಿಲ್ಲ. ತನ್ಮೂಲಕ ಅದು ಲಾಭ ಸಂಪಾದಿಸಲು ಪ್ರಯತ್ನಿಸುತ್ತದೆ! 1914ರಲ್ಲಿ ಯುದ್ಧ ಪ್ರಾರಂಭವಾಗಲು ಈ ಕೈಗಾರಿಕೆ ಬಹು ಮಟ್ಟಿಗೆ ತ್ವರಿತಗೊಳಿಸಲು ಕಾರಣವಾಯಿತು. ಇಂದಿಗೂ ಕೂಡ ಅದೇ ಆಟವನ್ನು ಆ ಕೈಗಾರಿಕೆ ಆಡುತ್ತಿದೆ". ಯುರೋಪ್ ದೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಯುದ್ಧವೆಂಬ ಕೈಗಾರಿಕೆಗಳು ಉದ್ಭವವಾದವು. ಇವು "ಸಾವಿನ ವ್ಯಾಪಾರಿ" ಕಂಪನಿಗಳೆಂದು ಸರಿಯಾಗಿಯೇ ಕರೆಯಲ್ಪಟ್ಟಿವೆ.ಅಭದ್ರತೆಯ ವಾತಾವರಣವಿದ್ದಾಗ ರಾಜ್ಯಶಕ್ತಿಗಳು ಬೇರೆ ದೇಶಗಳೊಂದಿಗೆ ತಮ್ಮ ವೈರಿ ದೇಶಗಳ ವಿರುದ್ಧ ಒಪ್ಪಂದ ಮಾಡಿಕೊಳ್ಳುವುದು ಅನಿವಾರ್ಯವಾಯಿತು.

ಜಪಾನ್ ರಷ್ಯಾಕ್ಕೆ ಭಯಪಟ್ಟಿತು; ಜರ್ಮನಿ ತನ್ನ ಪೂರ್ವ ದಿಕ್ಕಿನಲ್ಲಿ ರಷ್ಯಾದಿಂದಲೂ ಪಶ್ಚಿಮ ದಿಕ್ಕಿನಲ್ಲಿ ಫ್ರಾನ್ಸಿನಿಂದಲೂ ಸುತ್ತುವರೆಯಲ್ಪಟ್ಟಿದೆಯೆಂದು ಜರ್ಮನಿಗೆ ಅನಿಸಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಜರ್ಮನಿಯ ಭೂದಾಹದ ಬಗ್ಗೆ ಭಯಪಟ್ಟವು.

ಈ ಎಲ್ಲ ಪರಸ್ಪರ ಭಯ ಮತ್ತು ಅಪನಂಬಿಕೆಗಳ ಕಾರಣದಿಂದಾಗಿ ಜರ್ಮನಿ, ಆಸ್ತ್ರಿಯ - ಹಂಗರಿ, ಜಪಾನ್ ಮತ್ತು ಟರ್ಕಿ ಬೃಹತ್ ಸ್ವರೂಪದ ಒಪ್ಪಂದ ಮಾಡಿಕೊಂಡವು. ಫ್ರಾನ್ಸ್, ರಷ್ಯಾ ಮತ್ತು ಇಂಗ್ಲೆಂಡ್ ಇವು ಜರ್ಮನ್ ಒಪ್ಪಂದದ ವಿರುದ್ಧ ಒಪ್ಪಂದ ಮಾಡಿಕೊಂಡವು. ಹೀಗೆ 20ನೇ ಶತಮಾನದ ಪ್ರಾರಂಭದಲ್ಲಿ ಯುರೋಪ್ ಎರಡು ಗುಂಪುಗಳಲ್ಲಿ ವಿಭಜಿತಗೊಂಡಿತು. ಈ ಎರಡೂ ಗುಂಪುಗಳು ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಮತ್ತು ಗುಂಡುಗಳನ್ನು ಹೊಂದಿದ್ದವು. ಯುದ್ಧವಾಗುವುದಕ್ಕೆ ನಿರ್ಮಾಣವಾದಂಥ ಪರಿಸ್ಥಿತಿ ಇದಾಗಿತ್ತು. ಯುದ್ಧವಾಗುವುದಕ್ಕೆ ಬೇಕಾಗಿದ್ದದ್ದು ಒಂದು ಕಿಡಿ. ಸರಿಯಾಗಿ 100 ವರ್ಷಗಳ ನಂತರ ಜುಲೈ 1914ರಂದು ಆ ಕಿಡಿ ಹಾರಿತು. ಬೋಸ್ನಿಯಾದ ರಾಜಧಾನಿ ಸರ್‌ಜೆವೋಗೆ ಆಸ್ಟ್ರಿಯಾದ ರಾಜಕುಮಾರ ಅಧಿಕೃತ ಭೇಟಿಗೆ ಬಂದಾಗ ಪಕ್ಕದ ಸರ್ಬಿಯಾದ ರಾಷ್ಟ್ರೀಯವಾದಿಯೊಬ್ಬನು ರಾಜಕುಮಾರನನ್ನು ಕೊಂದನು. ಆತನಿಗೆ ತನ್ನ ದೇಶ ಸರ್‌ಜೇವೋದಿಂದ ಆಸ್ಟ್ರಿಯನ್ನರನ್ನು ಹೊರಹಾಕಬೇಕಿತ್ತು. ತತ್‌ಪರಿಣಾಮವಾಗಿ ಆಸ್ಟ್ರಿಯ ಸರ್ಬಿಯಾದ ಮೇಲೆ ಯುದ್ಧವನ್ನು ಸಾರಿತು. ರಷ್ಯಾಕ್ಕೆ ಆಸ್ಟ್ರಿಯ ಭೀತಿ ಉಂಟಾಯಿತು. ಆದ್ದರಿಂದ ಆ ದೇಶದ ಮೇಲೆ ಯುದ್ಧ ಸಾರಿತು. ಜರ್ಮನಿ ಆಸ್ಟ್ರಿಯಾದೊಂದಿಗೆ ಮಾಡಿಕೊಂಡ ಒಪ್ಪಂದಕ್ಕೆ ಬದ್ಧವಾಗಿ ನಿಂತು ರಷ್ಯಾದ ಮೇಲೆ ದಾಳಿಸಾರಿತು, ಫ್ರಾನ್ಸಿಗೆ ಜರ್ಮನಿಯಿಂದ ಭೀತಿ ಉಂಟಾಯಿತು. ಮತ್ತು ಅದು ರಷ್ಯಾ ದೇಶವನ್ನು ಸೋಲಿಸಿ ಬಲಿಷ್ಠ ರಾಷ್ಟ್ರವಾಗಬಾರದೆಂದು ಬಯಸಿತು. ಅದಕ್ಕಾಗಿ ಇಂಗ್ಲೆಂಡ್ ಫ್ರಾನ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿತ್ತಾದ್ದರಿಂದ ಅದು ಜರ್ಮನಿಯ ಮೇಲೆ ಯುದ್ಧ ಸಾರಿತು. ಯುರೋಪ್ ಯುದ್ಧಮಯವಾಯಿತು.

ಇದುವರೆಗೆ ಆದ ಯಾವುದೇ ಯುದ್ಧಕ್ಕಿಂತ ಈ ಯುದ್ಧ ಅಸಾಧಾರಣವಾದುದು ಮತ್ತು ಗಮನಿಸಬೇಕಾದುದು ಆಗಿದೆ. ಭೂಮಿ, ಸಮುದ್ರ ಮತ್ತು ಆಕಾಶದಲ್ಲಿ ಏಕ ಕಾಲಕ್ಕೆ ನಡೆದಂಥ ಯುದ್ಧ ಅದಾಗಿತ್ತು. ಅಲ್ಲದೆ ಇದು ಕೇವಲ ಸೈನಿಕರ ಮಧ್ಯೆ ನಡೆದ ಯುದ್ಧವಾಗಿರದೆ ಇಡೀ ಜನಸಮುದಾಯವನ್ನೇ ಯುದ್ಧದಲ್ಲಿ ತೊಡಗಿಸಲಾಗಿತ್ತು. ಈ ಮೊದಲು ನಡೆದಂಥ ಯುದ್ಧಗಳು ಎರಡು ದೇಶಗಳ ಮಧ್ಯೆ ನಡೆದ ಯುದ್ಧವಾಗಿರದೆ ಇಡೀ ಜನಸಮುದಾಯವನ್ನೇ ಯುದ್ಧದಲ್ಲಿ ತೊಡಗಿಸಲಾಗಿತ್ತು. ಈ ಮೊದಲು ನಡೆದಂಥ ಯುದ್ಧಗಳು ಎರಡು ದೇಶಗಳ ಮಧ್ಯೆ ಸೀಮಿತವಾಗಿದ್ದ ಯುದ್ಧಗಳಾಗಿದ್ದವು ಮತ್ತು ಉದ್ದೇಶವು ಕೂಡ ಸೀಮಿತವಾಗಿತ್ತು.

ಆದರೆ ಮೊದಲನೇ ಮಹಾಯುದ್ಧ ಒಂದು ಪೂರ್ಣ ಪ್ರಮಾಣದ ಯುದ್ಧವಾಗಿತ್ತು. ಆ ಯುದ್ಧದಲ್ಲಿ ವೈರಿ ದೇಶದ ಅರ್ಥಶಾಸ್ತ್ರ ಮತ್ತು ಜನ ಎಲ್ಲ ಗುರಿಯಾಗಿದ್ದವು. ಈ ಯುದ್ಧದ ಉದ್ದೇಶ ಕೇವಲ ವೈರಿ ದೇಶದ ಸೈನ್ಯವನ್ನು ಸೋಲಿಸುವುದಷ್ಟೇ ಆಗಿರಲಿಲ್ಲ. ಬದಲಿಗೆ ಆ ದೇಶದ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರವನ್ನು ಹಾಳು ಮಾಡುವುದಾಗಿತ್ತು. ಆನರ ಕಗ್ಗೊಲೆ ಮಾಡುವುದು,ವೈರಿ ದೇಶವನ್ನು ನಾಶಮಾಡುವುದು ಈ ಯುದ್ಧದ ಭಾಗವಾಗಿತ್ತು. ಹೀಗೆ ಅಂತಿಮವಾಗಿ ವಿನಾಶದ ಅಪಾರ ಸಾಮರ್ಥ್ಯವುಳ್ಳ ಅಣು ಅಸ್ತ್ರಗಳನ್ನು ತಯಾರಿಸುವಲ್ಲಿ ಪರ್ಯವಸಾನಗೊಂಡಿತು. ಈ ಯುದ್ಧವು ಮುಖ್ಯವಾಗಿ ಯುರೋಪಿಯ ಯುದ್ಧವಾಗಿದ್ದರೂ ಕೂಡ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲೂ ಕೂಡ ಯುದ್ಧ ನಡೆಯಿತು. ಆದರೆ ಯುರೋಪ್ ಜಗತ್ತನ್ನು ಆಕ್ರಮಿಸಿ ಕೊಂಡಿದ್ದರಿಂದ ಮತ್ತು ಭಾರತ ಬ್ರಿಟೀಷರ ವಸಾಹತು ಆಗಿದ್ದರಿಂದ ಭಾರತವು ಕೂಡ ಯುದ್ಧದ ಅಂಗವಾಯಿತು. ಯುರೋಪ್ ಖಂಡದ ಈ ಯುದ್ಧದಲ್ಲಿ ಭಾರತ ಸಿಕ್ಕಿಹಾಕಿಕೊಂಡಿತು. ಭಾರತೀಯ ಜನರನ್ನು ಮತ್ತೆ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಯಿತು. ಎಲ್ಲ ಅಗತ್ಯ ವಸ್ತುಗಳನ್ನು, ಆಹಾರದಿಂದ ಹಿಡಿದು ಇನ್ನಿತರ ಎಲ್ಲ ಪದಾರ್ಥಗಳನ್ನು ಯುದ್ಧದ ಅಗತ್ಯಕ್ಕಾಗಿ ಸಾಗಿಸಲಾಯಿತು. ಕದರಿಂದಾಗಿ ಭಾರತದಲ್ಲಿ ಆಹಾರದ ಕೊರತೆ ಉಂಟಾಯಿತು ಮತ್ತು ಪದಾರ್ಥಗಳ ಬೆಲೆ ಗಗನಕ್ಕೆ ಹೋಯಿತು. ರೈತರು, ಕಾರ್ಮಿಕರು ಮತ್ತು ಮಧ್ಯಮ ವರ್ಗದವರು ಈ ರೀತಿ ಎಲ್ಲರು ಯುದ್ಧದಿಂದ ಕಷ್ಟಕ್ಕೊಳಗಾದರು. ತಮ್ಮದಲ್ಲದ ಯುದ್ಧದ ಕಾರಣದಿಂದಾಗಿ ಜನಸಂಖ್ಯೆಯ ಬಹುಪಾಲು ಜನರು ಅನೇಕ ಕಷ್ಟಕೋಟಲೆಗಳನ್ನು ಅನುಭವಿಸಬೇಕಾಯಿತು. ಅಸಂತೋಷ ಹೆಚ್ಚಾಯಿತು. ಬ್ರಿಟೀಷರ ವಿರುದ್ಧ ಉಂಟಾದ ಈ ಅಸಂತೋಷ ಭಾರತದಲ್ಲಿಯ ರಾಷ್ಟ್ರೀಯತೆಗೆ ಇಂಬುಕೊಟ್ಟಿತು. ರಾಷ್ಟ್ರೀಯತೆಯ ತೀವ್ರತರ ಭಾವನೆ ಮತ್ತು ಚುರುಕಾದ ರಾಜಕೀಯ ಭಾವನೆ ಒಂದು ದೊಡ್ಡ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿ ಮುಂದಿನ ಕೆಲ ದಶಕಗಳಲ್ಲಿ 1947ರಲ್ಲಿ ಭಾರತದ ಬಿಡುಗಡೆಯೊಂದಿಗೆ ಕೊನೆಗೊಂಡಿತು.

1918ರಲ್ಲಿ ಒಂದು ಕೋಟಿ ಸೈನಿಕರ ಮರಣದೊಂದಿಗೆ ಮತ್ತು ಸರಿಸುಮಾರು ಅಷ್ಟೇ ಸಂಖ್ಯೆಯ ನಾಗರೀಕರು ಕೊಲಲ್ಪಟ್ಟ ನಂತರ 1918 ರಲ್ಲಿ ಯುದ್ಧ ಮುಗಿಯಿತು. ಯುದ್ಧದ ಕಾರಣದಿಂದಾಗಿ ಅನೇಕ ರೀತಿಯಲ್ಲಿ ಜಗತ್ತು ಬದಲಾಯಿಸಲಾಗದಂಥ ರೀತಿಯಲ್ಲಿ ಬದಲಾವಣೆ ಹೊಂದಿತ್ತು. ಯಾವ ಸಮಸ್ಯೆಗಳ ಪರಿಹಾರಕ್ಕಾಗಿ ಈ ಯುದ್ಧವನ್ನು ಹೂಡಲಾಗಿತ್ತೊ ಆ ಯಾವ ಸಮಸ್ಯೆಯು ಬಗೆ ಹರಿಯದೆ ಉಳಿಯಿತು. ಯುದ್ಧ ಕೆಲ ಹೊಸ ಸಮಸ್ಯೆಗಳನ್ನು ಉಂಟುಮಾಡಿತು. ಯುದ್ಧಕ್ಕಿಂತ ಮುನ್ನ ಇಪ್ಪತ್ತನೇ ಶತಮಾನ ಆರು ಪ್ರಮುಖ ಬೃಹತ್ ರಾಜ್ಯ ಶಕ್ತಿಗಳನ್ನು ಹೊಂದಿತ್ತು. ಆ

ಪ್ರತಿಯೊಂದು ಶಕ್ತಿಯೂ ಜಗತ್ತನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂಬ ಉದ್ದೇಶ ಹೊಂದಿತ್ತು. ಯುರೋಪಿನ ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ಮತ್ತು ಜರ್ಮನಿ ಹಾಗೂ ಯುರೋಪಿಯನೇತರ ಅಮೇರಿಕ ಮತ್ತು ಜಪಾನ್ ಈ ಆರು ಬೃಹತ್ ರಾಜ್ಯ ಶಕ್ತಿಗಳು ಜಗತ್ತಿನ ಮೇಲೆ ಹಿಡಿತ ಸಾಧಿಸಲು ಬಯಸಿದ್ದವು. ಯುದ್ಧ ಮೂಲಭೂತ ಬದಲಾವಣೆಯನೇನೂ ಮಾಡಲಿಲ್ಲ. ಬದಲಿಗೆ ಆ ಆರು ಬೃಹತ್ ಶಕ್ತಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿತು. ಯುದ್ಧಾನಂತರ ಯುರೋಪ್ ಖಂಡ ಮೂರು ದೊಡ್ಡ ಕೂಟಗಳಲ್ಲಿ ವಿಂಗಡಣೆಯಾಯಿತು. ಇದಕ್ಕೆ ಕಾರಣ ಅವು ಹೊಂದಿದ್ದ ತಮ್ಮದೇ ಆದ ರಾಜಕಾರಣ, ಅರ್ಥವ್ಯವಸ್ಥೆ, ರಾಜ್ಯಶಕ್ತಿ ಮತ್ತು ಸಿದ್ಧಾಂತ.

ಮುಕ್ತ ಪ್ರಜಾಸತ್ತಾತ್ಮಕ ಕೂಟಕ್ಕೆ ಅಮೇರಿಕಾ, ಇಂಗ್ಲೆಂಡ್ ಮತ್ತು ಫ್ರಾನ್ಸ್ ನಾಯಕ ದೇಶಗಳಾಗಿದ್ದವು. ಈ ದೇಶಗಳು ರಾಜಕೀಯವಾಗಿ ಪ್ರಜಾಪ್ರಭುತ್ವಕ್ಕೆ ಬದ್ಧವಾಗಿದ್ದವು, ಆರ್ಥಿಕವಾಗಿ ಬಂಡವಾಳಶಾಹಿಗೆ ಬದ್ಧವಾಗಿದ್ದವು. ಈ ಕೂಟಕ್ಕೆ ವಿರುದ್ಧವಾಗಿ ಸಮಾಜವಾದಿ ಕೂಟ ಉಂಟಾಯಿತು. ಈ ಕೂಟದ ಉದ್ಭವಕ್ಕೆ ಕಾರಣ 1917ರಲ್ಲಿ ರಷ್ಯಾದಲ್ಲಿ ನಡೆದ ಸಮಾಜವಾದಿ ಕ್ರಾಂತಿ. ಮಾನವಕುಲದ ಬಿಡುಗಡೆಯ ದಾರಿಯೆಂದು ಕಲ್ಪಿಸಿಕೊಳ್ಳಲಾಗಿದ್ದ 19ನೇ ಶತಮಾನದ ಸಮಾಜವಾದಿ ಕಲ್ಪನೆಗೆ ಸಮಾಜವಾದಿ ಕ್ರಾಂತಿಯಿಂದ ಅದಕ್ಕೆ ರಾಜ್ಯಶಕ್ತಿಯ ಬೆಂಬಲ ದೊರೆತಂತಾಯಿತು. ಸಮಾಜವಾದಿ ಅರ್ಥಶಾಸ್ತ್ರಕ್ಕೆ ಸರ್ವಾಧಿಕಾರಿ ಯೋಜನೆ ಆಧಾರವಾಯ್ತು. ಅಲ್ಲದೆ ನಿರಂಕುಶ ಪ್ರಭುತ್ವದ ಕೂಟವೊಂದು ಇತ್ತು. ಈ ಕೂಟದಲ್ಲಿ ಜರ್ಮನಿ ಮತ್ತು ಇಟಲಿಗಳಿದ್ದವು. ಬಂಡವಾಳಶಾಹಿಗೆ ಬದ್ಧವಾಗಿದ್ದರೂ ಕೂಡ ರಾಜಕೀಯ ವಿಚಾರದಲ್ಲಿ ಜಪಾನ್ ಸರ್ವಾಧಿಕಾರಿಶಾಹಿ ರಾಜಕೀಯ ಪದ್ಧತಿಯಲ್ಲಿ ಬಲವಾದ ನಂಬಿಕೆ ಇರಿಸಿಕೊಂಡಿದ್ದರಿಂದ ಅದು ಕೂಡ ಈ ಕೂಟದಲ್ಲಿ ಸೇರಿಕೊಂಡಿತು. ಈ ಮೂರು ದೇಶಗಳ ನಿರಂಕುಶ ಪ್ರಭುತ್ವ ಕೂಟ ಸಮಾಜದ ಎಲ್ಲ ಬಗೆಯ ಸಂಸ್ಥೆಗಳನ್ನು ಒಂದೇ ಒಂದು ಅಧಿಕಾರಕ್ಕೆ ಒಳಪಡಿಸುವುದಕ್ಕೆ ಬದ್ಧವಾಗಿದ್ದವು. ಮಾನವ ಕುಲದ ಇತಿಹಾಸದಲ್ಲಿ ಮೊದಲ ಬಾರಿಗೆ ಇಡೀ ಜಗತ್ತು ನಿರಂಕುಶ ಪ್ರಭುತ್ವಕ್ಕೆ ಒಳಗಾಯಿತು. ಈ ಎಲ್ಲ ಮೂರು ಶಕ್ತಿಗಳು ತಮ್ಮನ್ನು ಪರಸ್ಪರವಾಗಿ ಸಮಾನಾಂತರ ದೂರದಲ್ಲಿ ಇರಿಸಿಕೊಂಡಿದ್ದರೂ ಕೂಡ ಜಗತ್ತನ್ನು ರಾಜಕೀಯ ಸಿದ್ಧಾಂತಕ್ಕನುಸಾರವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂದು ಬಯಸಿದ್ದವು. ಒಂದು ರೀತಿಯಲ್ಲಿ ಮೊದಲನೇ ಮಹಾಯುದ್ಧದ ಸಮಯದಲ್ಲಿದ್ದ ಪರಿಸ್ಥಿತಿಯಂತೆಯೆ ಇದಾಗಿತ್ತು.

ಪರಸ್ಪರರಲ್ಲಿ ಅವಿಶ್ವಾಸ ಮತ್ತು ಜಾಗತಿಕ ಹಿಡಿತಕ್ಕಾಗಿದ್ದ ತೃಷೆ ಮೊದಲಿನಂತೆಯೆ ಉಳಿದುಕೊಂಡವು. ಬದಲಾದದ್ದು ಪ್ರಮುಖ ಪಾತ್ರಧಾರಿಗಳ

ಬಾಹ್ಯ ಸ್ವರೂಪ ಮಾತ್ರ. ಆಂತರ್ಯದಲ್ಲಿ ಅವು ಇಟ್ಟುಕೊಂಡಿದ್ದ ರಣನೀತಿ ಬದಲಾಗಿರಲಿಲ್ಲ. ಆ ಎಲ್ಲ ಮೂರು ಶಕ್ತಿಗಳು ಈ ಮೊದಲಿದ್ದ ಶಸ್ತ್ರಾಸ್ತ್ರಗಳಿಗಿಂತ ಹೆಚ್ಚು ಮಾರಕವಾದ ಶಸ್ತ್ರಾಸ್ತ್ರಗಳನ್ನು ಗುಡ್ಡೆಹಾಕಿಕೊಳ್ಳುವುದರ ಮೂಲಕ ಯುದ್ಧಕ್ಕೆ ಸನ್ನದ್ಧವಾದವು. ವಿಷಯವನ್ನು ಬಗೆಹರಿಸುವುದಕ್ಕಾಗಿ ಪ್ರಜಾಸತ್ತಾತ್ಮಕ ವಿಚಾರವಿದ್ದ ಎರಡು ದೇಶಗಳು ಮತ್ತು ಒಂದು ಸಮಜವಾದಿ ದೇಶ ಸರ್ವಾಧಿಕಾರಿ ಮನೋಭಾವದ ದೇಶಗಳ ಕೂಟದ ವಿರುದ್ಧ ಒಪ್ಪಂದ ಮಾಡಿಕೊಂಡವು. ಇದರಿಂದಾಗಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು (1939 – 45). ಈ ಯುದ್ಧ ಮೊದಲನೇ ಮಹಾಯುದ್ಧಕ್ಕಿಂತಲೂ ಭಯಾನಕವೂ ಮತ್ತು ವಿನಾಶಕಾರಿಯಾ ಆಗಿತ್ತು. ಆ ಯುದ್ಧದಲ್ಲಿ 40 ರಿಂದ 55 ದಶಲಕ್ಷ ಸೈನಿಕರು ಮತ್ತು ನಾಗರಿಕರು ಸತ್ತರು. ಅಲ್ಲದೆ 35 ದಶಲಕ್ಷ ಜನರು ಗಾಯಗೊಂಡರು ಮತ್ತು 3 ದಶಲಕ್ಷ ಜನರು ಕಣ್ಮರೆಯಾದರು. ನಿರಂಕುಶ ಪ್ರಭುತ್ವದ ಭಯಾನಕತೆಯಿಂದ ಜಗತ್ತನ್ನು ಉಳಿಸಲು ತೆತ್ತ ಅಗಾಧ ಬೆಲೆ ಇದಾಗಿತ್ತು.


1945ರಲ್ಲಿ ಯುದ್ಧ ಮುಕ್ತಾಯವಾಯಿತು. ನಿರಂಕುಶ ಪ್ರಭುತ್ವವಾದಿ ರಾಷ್ಟ್ರಗಳ ಕೂಟದ ಬಲವನ್ನು ಇಲ್ಲವಾಗಿಸಿತು. ನಿರಂಕುಶ ಪ್ರಭುತ್ವವಾದಿ ಕೂಟದ ನಿರ್ನಾಮದೊಂದಿಗೆ ಪ್ರಜಾಸತ್ತಾತ್ಮಕ ಸಮಾಜವಾದಿ ರಾಷ್ಟ್ರಗಳ ಕೂಟಗಳು ಕೂಡ ನಿಲುಗಡೆಗೆ ಬಂದವು. ಒಟ್ಟಾರೆ ಎರಡನೇ ಮಹಾಯುದ್ಧದ ಪರಿಣಾಮವೇನೆಂದರೆ ಮೊದಲನೇ ಮಹಾಯುದ್ಧದ ಮುಂದೆ ಇದ್ದ ಎಜೆಂಡಾದ ಮುಂದುವರೆಯುವಿಕೆ. ಆದ ಒಂದೇ ಒಂದು ಬದಲಾವಣೆ ಏನೆಂದರೆ ಜಗತ್ತನ್ನೇ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂದಿದ್ದ ಪಾತ್ರಧಾರಿಗಳ ಸಂಖ್ಯೆ ಕಡಿಮೆಯಾಯಿತು. ಅದು ಮೂರರಿಂದ ಎರಡಕ್ಕೆ ಇಳಿಯಿತು. ಉನ್ನತಕ್ಕೇರಿದ್ದ ಪರಸ್ಪರರಲ್ಲಿಯ ಅವಿಶ್ವಾಸ ಮತ್ತು ಜಾಗತಿಕ ಹಿಡಿತದ ಆಕಾಂಕ್ಷೆ ಮೊದಲಿನಂತೆಯೇ ಉಳಿದವು.

ದುರ್ದೈವದ ಸಂಗತಿಯೇನೆಂದರೆ ಜಗತ್ತಿನಲ್ಲಿರುವ ಅಭಿವೃದ್ಧಿ ಹೊಂದಿದ ಮತ್ತು ನಾಗರೀಕತೆ ಹೊಂದಿರುವ ಪ್ರದೇಶಗಳಲ್ಲಿಯ ಜನರು ವಿವಾದಗಳನ್ನು ಬಗೆಹರಿಸಲು ಯುದ್ಧವೊಂದೆ ಮಾರ್ಗವೆಂದು ತಿಳಿದಿರುವುದು. ಆದರೆ ಕಳೆದುಹೋದ ಎರಡು ಮಹಾಯುದ್ಧಗಳು ವಿವಾದವನ್ನು ಬಗೆಹರಿಸಲು ವಿಫಲವಾದವು ಎಂಬುದು ಕೂಡ ಸ್ಪಷ್ಟವಾಗಿದೆ. ಯುದ್ಧಗಳ ನಂತರ ಉಳಿದಿರುವ ಎರಡು ಬೃಹತ್ ಶಕ್ತಿಗಳಾದ ಅಮೇರಿಕಾ ಮತ್ತು ರಷ್ಯಾ ಯುದ್ಧದ ಭಯಾನಕತೆಯಿಂದ ಎಚ್ಚರಗೊಂಡಿವೆ. ಇದು ಮಾನವ ಕುಲಕ್ಕೆ ಸಂತೋಷದ ಸಂಗತಿ. ಆ ಶಕ್ತಿಗಳು ಜಾಗತಿಕ ಹಿಡಿತದ ವಿಷಯವನ್ನು ಬೆಂಕಿ ಉಗುಳುವ ಯುದ್ಧದ ಮೂಲಕ ಬಗೆಹರಿಸದೆ ಅಂತರರಾಷ್ಟ್ರೀಯ ರಾಜನೀತಿ ತಂತ್ರದ ಆಧಾರದ ಮೇಲೆ, ಪರೋಕ್ಷ ಯುದ್ಧದ ಮೂಲಕ, ಹೊಂದಾಣಿಕೆಗಳ ಮೂಲಕ ಮತ್ತು ತಾತ್ವಿಕ ವಿರೋಧದ ಮೂಲಕ ಬಗೆ ಹರಿಸಬೇಕೆಂದು ತೀರ್ಮಾನಿಸಿವೆ.

ಎರಡು ಪ್ರತಿಸ್ಪರ್ಧಿ ದೇಶಗಳ ಮಧ್ಯ ನೇರ ಸಂಘರ್ಷವನ್ನು ತಪ್ಪಿಸಲಾಯಿತು. ಭಿನ್ನ, ವಿರೋಧಾತ್ಮಕ ತತ್ವಶಾಸ್ತ್ರ, ಜಾಗತಿಕ ದೃಷ್ಟಿ ಮತ್ತು ಮಾನವ ಸಮುದಾಯಗಳನ್ನು ಹೇಗೆ ವ್ಯವಸ್ಥಿತಗೊಳಿಸಬೇಕು, ಎಂಬುದರ ನೀಲ ನಕ್ಷೆಗೆ ಸಂಬಂಧಿಸಿದ್ದಾಗಿದೆ ಈ ಶೀತಲ ಯುದ್ಧ. ಶೀತಲ ಯುದ್ಧದ ಎರಡು ಪ್ರತಿಸ್ಪರ್ಧಿ ದೇಶಗಳಾದ ಅಮೇರಿಕ ಮತ್ತು ರಷ್ಯ ಆಧುನಿಕ ಜಗತ್ತಿನ ರಾಜಕೀಯ ಮತ್ತು ಆರ್ಥಿಕ ಜೀವನವನ್ನು ಯಾವ ರೀತಿ ಸಂಘಟಿಸಬೇಕೆಂಬ ಎರಡು ವಿರೋಧಾತ್ಮಕ ಪರ್ಯಾಯಗಳನ್ನು ಪ್ರತಿನಿಧಿಸುತ್ತವೆ. 1991ರಲ್ಲಿ ರಷ್ಯಾದ ವಿಘಟನೆಯೊಂದಿಗೆ ಶೀತಲ ಯುದ್ಧ ಮುಗಿಯಿತು. ಆದರೆ ಒಂದು ಶತಮಾನದಷ್ಟು ದೀರ್ಘಾವಧಿಕಾಲದ ಜಾಗತಿಕ ಹಿಡಿತದ ಸ್ಪರ್ಧೆಯಲ್ಲಿ ಯಾರ ಗೆಲುವಾಯಿತೆಂಬುದು ಸ್ಪಷ್ಟವೂ ಆಯಿತು. 1991ರ ನಂತರದ ಜಗತ್ತನ್ನು ಏಕ ನಾಯಕತ್ವದ ಧ್ರುವೀಕರಣಗೊಂಡ ಜಗತ್ತು ಎಂದು ಕರೆಯಲ್ಪಡುತ್ತದೆ. ಆ ನಾಯಕ ಅಮೇರಿಕ. ಮೊದಲನೆ ಮಹಾಯುದ್ಧದ ನಂತರ ಬಹು ನಾಯಕತ್ವದ ದೇಶಗಳಿದ್ದವು. ಅವು ಪರಸ್ಪರ ಜಾಗತಿಕ ಪ್ರಭಾವಕ್ಕಾಗಿ ಹೋರಾಡುತ್ತಿದ್ದವು. 1914ರಲ್ಲಿ ಅನೇಕ ಘಟನಾವಳಿಗಳ ನಂತರ ಜಗತ್ತಿನಲ್ಲಿ ಬಹು ರಾಷ್ಟ್ರಗಳ ನಾಯಕತ್ವ, ತ್ರಿ ರಾಷ್ಟ್ರಗಳ ನಾಯಕತ್ವ, ದ್ವಿ ರಾಷ್ಟ್ರಗಳ ನಾಯಕತ್ವ ರೂಪುಗೊಳ್ಳುತ್ತ ಕೊನೆಗೆ ಏಕ ರಾಷ್ಟ್ರ ನಾಯಕತ್ವ ಉಂಟಾಯಿತು. ಅಂತಾ ಜಗತ್ತಿನಲ್ಲಿ ನಾವು ಇಂದು ಇದ್ದೇವೆ. ವಿರೋಧ ಪ್ರತಿರೋಧ ಮಾಡುತ್ತಿದ್ದ ರಾಷ್ಟ್ರಗಳ ಸಂಖ್ಯೆ ಕಡಿಮೆಯಾಗಿದ್ದರೂ ಕೂಡ ಜಾಗತಿಕ ಹಿಡಿತದ ಸ್ಪರ್ಧೆಯಲ್ಲಿಯ ಅಭದ್ರತೆ ಹೋಗಿಲ್ಲ. ಅತ್ಯಂತ ಬಲಿಷ್ಠ ಶಕ್ತಿಯೆಂದು ಪರಿಗಣಿತವಾಗಿರುವ ದೇಶ ಈ ಹಿಂದಿನಷ್ಟೆ ಅಭದ್ರವಾಗಿದೆ. ಈಗಿರುವ ಏಕೈಕ ಬಲಿಷ್ಠ ಶಕ್ತಿಗೆ ಎದುರಾಳಿಯಾಗಿ ಬೇರೊಂದು ಶಕ್ತಿ ಇಲ್ಲದಿರುವುದು ಬಹುಶಹ ಜಾಗತಿಕ ಶಾಂತಿಕೆ ಒಳ್ಳೆಯ ಸಮಾಚಾರವೇನಲ್ಲ. ಜಾಗತಿಕ ಹಿಡಿತದ ಸ್ಪರ್ಧೆ ಕೊನೆಗೊಂಡಿದ್ದರೂ ಸಹ ಮತ್ತು ಜಯಶಾಲಿಯಾದವರು ಯಾರು ಎಂಬುದು ಗೊತ್ತಾಗಿದ್ದರೂ ಸಹ ಜಗತ್ತಿನಲ್ಲಿ ಶಾಂತಿ ನೆಲೆಸಿಲ್ಲ ಮತ್ತು ಸರ್ವನಾಶದ ಸಾಧ್ಯತೆಯ ಭಯ ಹೆಡೆಯಾಡುತ್ತಲೇ ಇದೆ.

ನಾವು ಇಂದಿರುವ ಜಗತ್ತು ಅನೇಕ ರೀತಿಗಳಲ್ಲಿ ಮೊದಲ ಮಹಾಯುದ್ಧದ ಮುಂದುವರಿಕೆಯೇ ಆಗಿದೆ. ಕಳೆದು ಹೋದ ಶತಮಾನಗಳಿಗಿಂತ ಜಗತ್ತು ಈಗ ಹೆಚ್ಚು ಶ್ರೀಮಂತವೂ, ಸುಸಂಘಟಿತವೂ ಆಗಿದೆ. ಪ್ರಶ್ನಾತೀತವಾದ ಒಂದು ರಾಷ್ಟ್ರದ ಹಿಡಿತಕ್ಕೆ ಒಳಗಾಗಿದೆ. ಅಮೇರಿಕಾದ ಹಿಡಿತವಿದೆ. 20ನೇ ಶತಮಾನವು ಅಮೇರಿಕಾದ ಶತಮಾನವೆಂದು ಸರಿಯಾಗಿಯೇ ಕರೆಯಲ್ಪಟ್ಟಿದೆ. ಅನೇಕ ಅಳತೆ ಗೋಲುಗಳ ಪ್ರಕಾರ ಹೊಸ ಜಗತ್ತು ಹಳೆಯ ಜಗತ್ತಿಗಿಂತ ಉತ್ತಮವಾಗಿದೆಯೆಂದು ಕಾಣುತ್ತದೆ.

–ಅನು : ಸುಕೌ – (ಡೆಕ್ಕನ್ ಹೆರಾಲ್ಡ್ ಸಾಭಾರ)



# ಜೆ.ಪಿ.ಯವರೊಂದಿಗೆ ಐದು ವರ್ಷಗಳು

– ಸುರೇಂದ್ರ ಕೌಲಗಿ

ಜೆ.ಪಿ.ಯವರೊಂದಿಗಿನ ನನ್ನ ಅನುಭವಗಳ ಬಗ್ಗೆ ಹೊಸ ಮನುಷ್ಯನ ವಿಶೇಷ ಸಂಚಿಕೆಗೆ ಲೇಖನ ಬರೆದು ಕಳುಹಿಸಿ ಎಂದು ನಾಗಭೂಷಣ ರವರು ದೂರವಾಣಿಯಲ್ಲಿ ವಿನಂತಿಸಿಕೊಂಡಾದ ಮೇಲೆ ಆ ವಿಷಯದ ಬಗ್ಗೆ ನನ್ನ ನೆನಪಿನ ಸುರುಳಿ ಬಿಚ್ಚತೊಡಗಿತು. ನೆನಪು ೧೯೫೪ನೆಯ ಇಸವಿ ಮುಂಬಯಿಯ ಮಲಬಾರ್ ಹಿಲ್‌ನಲ್ಲಿ ಇದ್ದ ಡಾ//ದಿನ್‌ಷಾ ಕೆ.ಮೆಹೆತಾರವರ ನೇಚರ್ ಕ್ಯೂರ್ ಕ್ಲೀನಿಕ್‌ನಲ್ಲಿ ನಿಂತಿತು. ೨೦ ವರ್ಷದ ಯುವಕ, ಯಾವುದೇ ಪ್ರಕಾರದ ಸಾರ್ವಜನಿಕ ಜೀವನದ ಪರಿಚಯವಿಲ್ಲದ ಯುವಕ ತನಗಿಂತಲೂ ೩೨ವರ್ಷ ದೊಡ್ಡವರಾದ ವಿಪುಲ ಲೋಕಾನುಭವ ಮತ್ತು ರಾಜಕಾರಣದ ಅನುಭವ ಇದ್ದ ಒರ್ವ ವ್ಯಕ್ತಿಯ ಎದುರಿಗೆ ಮುಖಾಮುಖಿಯಾಗಿ ನಿಂತಿದ್ದು ಈಗಲೂ ನೆನಪಲ್ಲಿ ಹಸಿರಾಗಿದೆ. ಈ ಮುಖಾಮುಖಿಗೆ ಸಾಕ್ಷಿಯಾಗಿದ್ದವರು ಡಾ// ದಿನ್‌ಷಾ ಕೆ.ಮೆಹೆತಾ ಅಂದಿನಿಂದ ಅಂದಿನಕಾಲದ ಹಿರಿಯ ಸಮಾಜವಾದಿ ನಾಯಕ ಜಯಪ್ರಕಾಶ್ ನಾರಾಯಣ್‌ರವರೊಂದಿಗಿನ ನನ್ನ ಐದು ವರ್ಷಗಳ ಮಹತ್ವದ ದಿನಚರಿ ಪ್ರಾರಂಭವಾಯಿತು. ಅದು ೧೯೫೯ರವರೆಗೆ ಅಖಂಡವಾಗಿ ನಡೆಯಿತು. ಈ ಲೇಖನದಲ್ಲಿ ಆ ಐದು ವರ್ಷಗಳ ಅನುಭವದಲ್ಲಿಯ ಕೆಲವನ್ನು ಮಾತ್ರ ಹೇಳಲು ಸಾಧ್ಯವಾಗಿದೆ. ಇದಕ್ಕೊಂದು ಮುಖ್ಯ ಕಾರಣವಿದೆ. ಜೇ.ಪಿಯವರಿಗೂ ನನಗೂ ವಯಸ್ಸಿನ ಅಂತರ ಹೆಚ್ಚಾಗಿತ್ತಲ್ಲದೆ ನಾನು ಅದೇ ತಾನೆ ಕೇವಲ ಎಸ್.ಎಸ್.ಎಲ್.ಸಿ ಪರೀಕ್ಷೆ ಪಾಸಾಗಿ ಇಂಗ್ಲೀಷ್ ಟೈಪಿಂಗ್ ಕಲಿತಂಥ ಯುವಕನಾಗಿದ್ದೆಯಷ್ಟೇ. ಸಾಮ್ಯವಾದ, ಸಮಜವಾದ, ಬಂಡವಾಳವಾದ ಇತ್ಯಾದಿ ವಿಚಾರಗಳನ್ನು ಕೇಳಿದ್ದೆನೆ ಹೊರತು ಅವುಗಳನ್ನು ಆಳವಾಗಿ ಅಧ್ಯಯನ ಮಾಡಿರಲಿಲ್ಲ. ದೇಶದ ಸ್ವಾತಂತ್ರ್ಯದ ಚಳುವಳಿಯ ಶಾಖ ತಗಲಿತ್ತೆ ವಿನಃ ಆಂದೋಲನದಲ್ಲಿ ಸ್ವತಃ ಭಾಗವಹಿಸಿ ಕಾರಾಗೃಹವಾಸ ಇತ್ಯಾದಿ ಕಷ್ಟಗಳನ್ನು ಅನುಭವಿಸಿದ ಅನುಭವ ಇರಲಿಲ್ಲ. ರಾಜ್ಯದ ಹೊರಗೂ ಹೋಗುವ ಪ್ರಸಂಗ ಬಂದಿರಲಿಲ್ಲ. ಈ ಎಲ್ಲ ಮಿತಿಗಳೂ ಇದ್ದವು. ಇದಕ್ಕೆ ತದ್ವಿರುದ್ಧವಾದ ಜೀವನ ಜೇ.ಪಿಯವರದಾಗಿತ್ತು. ಅಮೇರಿಕಾದಲ್ಲಿ ಏಳು

ವರ್ಷಗಳ ಕಾಲ ವ್ಯಾಸಂಗ ಮಾಡಿದ್ದರು. ಸಾಮ್ಯವಾದ ಮತ್ತು ಸಮಾಜವಾದದ ಆಳವಾದ ಅಧ್ಯಯನ ಮಾಡಿದ್ದರು. ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಹಿರಿಯ ರಾಷ್ಟ್ರನಾಯಕರಲ್ಲಿ ಒಬ್ಬರಾಗಿದ್ದರು. ಗಾಂಧೀಜಿಯವರ ಸಹವಾಸದ ಲಾಭ ಪಡೆದಿದ್ದರು. ಕಾರ್ಮಿಕರ ಸಂಘಟನೆಗಳ ಮುಖಂಡರಾಗಿ ಅಪಾರವಾದ ಅನುಭವ ಪಡೆದಿದ್ದರು. ದೇಶದ ಕಾರ್ಮಿಕ ಜಗತ್ತಿನ ಕಣ್ಮಣಿಯಾಗಿದ್ದರು. ಇಂಥ ಮೇರು ಸದೃಶವಾದ ವ್ಯಕ್ತಿತ್ವವುಳ್ಳ ಜಯಪ್ರಕಾಶ್ ನಾರಾಯಣರೊಂದಿಗೆ ಇದ್ದು ಕೆಲಸ ಮಾಡುವಾಗ ಸಹಜವಾಗಿಯೇ ನನ್ನ ಸೇವೆ ವ್ಯವಹಾರಿಕವಾಗಿತ್ತೇ ಹೊರತು ವೈಚಾರಿಕವಾಗಿರಲು ಸಾಧ್ಯವಿರಲಿಲ್ಲ. ಅಲ್ಲದೆ ದಿನಚರಿ ಇಡಬೇಕು ಮತ್ತು ಅದರಲ್ಲಿ ಪ್ರಮುಖವೆನಿಸಬಹುದಾದ ಘಟನೆಗಳನ್ನು ದಾಖಲುಮಾಡಬೇಕೆಂಬ ಸಾಮಾನ್ಯ ತಿಳುವಳಿಕೆಯು ಆ ಸಮಯದಲ್ಲಿ ಇರಲಿಲ್ಲವೆಂಬುದು ದುರಾದೃಷ್ಟಕರ ಸಂಗತಿ. ಆದ್ದರಿಂದ ಈ ಲೇಖನದಲ್ಲಿ ನಾನು ಪ್ರಸ್ತಾಪಿಸುತ್ತಿರುವ ಸಂಗತಿಗಳು ಹೆಚ್ಚಾಗಿ ವ್ಯವಹಾರಿಕವಾದುದಾಗಿದೆ. ಅಲ್ಲಲ್ಲಿ ಕೆಲವು ವೈಚಾರಿಕ ಸಂಗತಿಗಳು ಬರಬಹುದು. ಆದ್ದರಿಂದ ಈ ಲೇಖನದಿಂದ ಸಮಾಜವಾದಿ ಆಂದೋಲನಕ್ಕೆ ಸಂಬಂಧಿಸಿದ ಹಾಗೆ ಇನ್ನು ಹೆಚ್ಚಿನ ಅಜ್ಞಾತ ವಿಷಯಗಳು ಜ್ಞಾತವಾಗುವುವೆಂದು ಅಪೇಕ್ಷಿಸಿದರೆ ತಪ್ಪಾಗಬಹುದೆಂದು ಹೇಳಲು ಬಯಸುತ್ತೇನೆ. ಆದರೆ ಒರ್ವ ಹಿರಿಯ ಸಮಾಜವಾದಿ ನಾಯಕನೊಂದಿಗೆ ಐದು ವರ್ಷಗಳಷ್ಟು ದೀರ್ಘಕಾಲ ಇದ್ದುದು ಸಾಮಾನ್ಯ ಸಂಗತಿಯಲ್ಲ ಎಂದೆನಿಸುತ್ತದೆ. ಆ ಅವಧಿಯಲ್ಲಿ ಅವರ ಜೀವನವನ್ನು ಹತ್ತಿರದಿಂದ ನೋಡುವ, ಕಾರ್ಯಕಲಾಪಗಳನ್ನು ವೀಕ್ಷಿಸುವ, ವಿಚಾರಗಳನ್ನು ತಿಳಿಯುವ, ದೇಶದ ತುಂಬಾ ಸುತ್ತಾಡುವ ಮತ್ತು ಸಮಾಜದ ವಿವಿಧ ಸ್ತರಗಳಲ್ಲಿಯ ಜನರನ್ನು ನೋಡುವ ಅವಕಾಶ ಸಿಕ್ಕಿದ್ದು ಒಂದು ಅಭೂತಪೂರ್ವ ಅನುಭವ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮುಂಬಯಿಯಲ್ಲಿ ಒಂದು ಸಲ ಸಮಾಜವಾದಿ ನಾಥ ಪೈ ಅವರೊಂದಿಗೆ ಮಾತನಾಡಿದಾಗ ಅವರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ನನ್ನ ವಿದ್ಯಾಭ್ಯಾಸದ ಬಗ್ಗೆ ಅವರು ಕೇಳಿ ತಿಳಿದುಕೊಂಡಾದ ಮೇಲೆ ಹೇಳಿದ್ದೇನಂದರೆ, " ನೀನು ವ್ಯಥೆಪಡುವ ಕಾರಣವಿಲ್ಲ ಜೇ.ಪಿ ಜೊತೆಗೆ ಇರುವುದೆಂದರೆ ಒಂದು ವಿಶ್ವವಿದ್ಯಾನಿಲಯದಲ್ಲಿ ಇದ್ದಂತೆ ಮತ್ತು ಪದವಿಯನ್ನು ಪಡೆದಂತೆ " ಪೈಯವರ ಈ ಮಾತು ಅಕ್ಷರಶಃ ನಿಜವೆಂದು ಈಗ ಅನಿಸುತ್ತದೆ.

ಜೆ.ಪಿ ಯವರೊಂದಿಗೆ ೧೯೫೪ರಲ್ಲಿ ಸೇರಿಕೊಂಡಾಗ ಆ ವರ್ಷ ಜೇ.ಪಿಯವರ ಜೀವನ ಹೊಸ ತಿರುವು ಪಡೆದ ವರ್ಷವಾಗಿತ್ತು. ಅವರ ೨೦ವರ್ಷಗಳ ಸಮಾಜವಾದಿ ಜೀವನದ ಹೋರಾಟ ಸರ್ವೋದಯ ಸಮಾಜ ರಚನೆಯ

ಆಂದೋಲನಕ್ಕೆ ಜೀವನದಾನದಲ್ಲಿ ಪರ್ಯಾವಸನಗೊಂಡಿತ್ತು. ಜೇ.ಪಿಯವರೆ ಸ್ವತಃ ಹೇಳಿದಂತೆ "ಕ್ರಾಂತಿಯ ಹಂಬಲ ನನ್ನನ್ನು ಮಾರ್ಕ್ಸವಾದದ ಕಡೆ ಕೊಂಡೊಯ್ದಿತು. ನಂತರ ರಾಷ್ಟ್ರೀಯ ಚಳುವಳಿಯ ಮೂಲಕ ಪ್ರಜಾಸತ್ತಾತ್ಮಕ ಸಮಾಜವಾದದ ಕಡೆ ತಿರುಗಿ ತದನಂತರ ವಿನೋಬಾಜಿಯವರ ಪ್ರೇಮಮಾರ್ಗದ ಅಹಿಂಸಾತ್ಮಕ ಕ್ರಾಂತಿಗೆ ನನ್ನನ್ನು ಮುಟ್ಟಿಸಿತು. ಅದನ್ನು ನಾನು ಮಾನವೀಯ ಕ್ರಾಂತಿಯ ಮೂಲಕ ಸಾಮಾಜಿಕ ಕ್ರಾಂತಿ ಎಂದು ವರ್ಣಿಸಿದೆ." ಈ ರೀತಿ ತಮ್ಮ ಕಾಲಾನುಭವ ಕಾರ್ಯಾನುಭವದ ದೀರ್ಘ ವೈಚಾರಿಕ ಯಾತ್ರೆಯ ಮೂಲಕ ಸರ್ವೋದಯ ಆಂದೋಲನ ತಲುಪಿದರು. ಅವರ ಜೀವನದ ಈ ಐತಿಹಾಸಿಕ ಘಟ್ಟದಲ್ಲಿ ನಾನು ಜೇ.ಪಿ ಯವರೊಂದಿಗೆ ಸೇರಿಕೊಂಡೆ. ಈ ಅದೃಷ್ಟ ಒದಗುವುದಕ್ಕೆ ಒಂದು ಕಾರಣ ಬೇಕಿತ್ತು. ಆ ಕಾರಣವೇನೆಂದರೆ, ಗಾಂಧೀಜಿಯವರಿಗೆ ಸ್ಟೆನೋ ಆಗಿ ಕೆಲಸ ಮಾಡುತ್ತಿದ್ದ ಕೇರಳದ ಪರಶುರಾಮ್ ಗಾಂಧೀಜಿಯವರ ಹತ್ಯೆಯ ನಂತರ ಒರ್ವ ಸಮಾಜವಾದಿಯಾಗಿ ಜಯಪ್ರಕಾಶ್ ನಾರಾಯಣರೊಂದಿಗೆ ಕೆಲಸಮಾಡಲು ಪ್ರಾರಂಭಿಸಿದರು. ಕೇರಳದಲ್ಲಿದ್ದ ಅವರ ತಾಯಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ ಅವರು ಅನಿವಾರ್ಯವಾಗಿ ಜೇ.ಪಿಯವರ ಸೇವೆಯಿಂದ ಬಿಡುಗಡೆ ಹೊಂದಿ ತಾಯಿಯವರ ಶುಶ್ರೂಷೆಗಾಗಿ ತಮ್ಮ ಊರಿಗೆ ಹೋಗಬೇಕಾಯಿತು. ಆಗ ಜೇ.ಪಿಯವರಿಗೆ ತಮ್ಮ ಕಾಗದ ಪತ್ರಗಳನ್ನು ನಿರ್ವಹಿಸುವ, ಪತ್ರ ವ್ಯವಹಾರಕ್ಕೆ ಸಹಾಯ ಮಾಡುವ ಮತ್ತು ಇತರೆ ಕೆಲಸಗಳಲ್ಲಿ ನೆರವಾಗಬಲ್ಲಂತಹ ಒಬ್ಬ ಯುವಕನ ಅಗತ್ಯವುಂಟಾಗಿತ್ತು. ಆ ಸಮಯದಲ್ಲಿಯೇ ನಾನು ಅಲ್ಲಿಯ ನೇಚರ್ ಕ್ಯೂರ್ ಕ್ಲಿನಿಕ್‌ಗೆ ಬರುತ್ತಿದ್ದ ಹರಿಜನ ವಾರಪತ್ರಿಕೆಯಲ್ಲಿ ವಿನೋಬಾರ ಭೂದಾನ ಆಂದೋಲನದ ವಿಷಯ ಓದಿ, ಜೇ.ಪಿಯವರ ಜೀವನದಾನದ ವಿಷಯ ಓದಿ ನಾನೂ ಕೂಡ ಭೂದಾನ ಆಂದೋಲನ ಸೇರಲು ಬಯಸಿದ್ದೆ. ಈ ವಿಷಯವನ್ನು ಡಾ//ದಿನ್‌ಷಾ ಕೆ.ಮೆಹೆತಾರ ಮುಂದೆ ಪ್ರಸ್ತಾಪಿಸಿದೆ. ಅವರು ನನ್ನ ಬಗ್ಗೆ ಹಾಗೂ ನನ್ನ ಅಭಿಲಾಷೆಯ ಬಗ್ಗೆ ಜೇ.ಪಿಯವರಲ್ಲಿ ಪ್ರಸ್ತಾಪಿಸಿದರು. ಡಾ//ದಿನ್‌ಷಾ ಮೆಹೆತಾ ಒರ್ವ ರಾಷ್ಟ್ರೀಯವಾದಿಯಾಗಿದ್ದರು. ಗಾಂಧೀಜಿಯವರ ಅನುಯಾಯಿಯಾಗಿದ್ದರು. ಗಾಂಧೀಜಿಯವರು ಉಪವಾಸ ಮಾಡಿದಾಗಲೆಲ್ಲ ಡಾ//ಮೆಹೆತಾ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈಗಾಗಲೇ ಅವರ ಕ್ಲಿನೀಕ್‌ನಲ್ಲಿ ಅನೇಕ ರಾಷ್ಟ್ರೀಯ ಮುಖಂಡರು ಚಿಕಿತ್ಸೆ ಪಡೆದುಕೊಂಡು ಹೋಗಿದ್ದರು. ಪ್ರಧಾನಮಂತ್ರಿ ಗುಲ್ಜಾರಿಲಾಲ್ ನಂದಾ ಕೂಡ ಪ್ರಾಕೃತಿಕ ಚಿಕಿತ್ಸೆ ಪಡೆದುಕೊಂಡು ಹೋಗಿದ್ದರು. ಈಗ ಜೇ.ಪಿಯವರೂ ಸಹ ತಮ್ಮ ಬಹು ಚಟುವಟಿಕೆಯ ರಾಜಕಾರಣದಿಂದ ಮುಕ್ತರಾಗಿ ಸರ್ವೋದಯ ಆಂದೋಲನಕ್ಕೆ ಬಂದು ವಿಶ್ರಾಂತಿಗಾಗಿ ಡಾ//ಮೆಹೆತಾರ ನೇಚರ್ ಕ್ಯೂರ್ ಕ್ಲಿನಿಕ್‌ನಲ್ಲಿ ತಂಗಿದ್ದರು. ನಾನು ಕ್ಲಿನಿಕ್‌ನಲ್ಲಿ

ಟೈಪಿಸ್ಟ್‌ನಾಗಿ ಕೆಲಸವಮಾಡುತ್ತಿದ್ದೆ. ಮೆಹತಾರವರು ನನ್ನ ಬಗ್ಗೆ ಸದಭಿಪ್ರಾಯವಿರಿಸಿಕೊಂಡಿದ್ದರು. ಆದ್ದರಿಂದ ನನ್ನ ವಿನಂತಿಯನ್ನು ಜೇ.ಪಿಯವರ ಮುಂದೆ ಪ್ರಸ್ತಾಪಿಸಿದಾಗ ಜೇ.ಪಿ ಸಹಜವಾಗಿಯೇ ಅದನ್ನು ಸ್ವಾಗತಿಸಿ ನನ್ನನ್ನು ತಮ್ಮ ಸೇವೆಗೆ ಇರಿಸಿಕೊಂಡರು. ಜೇ.ಪಿ ನನಗೆ ಸಮ್ಮತಿ ಕೊಟ್ಟ ಆ ಘಳಿಗೆಯನ್ನು ಮರೆಯಲಾರೆ.ಆಗಲೇ ನಾನು ಅವರನ್ನು ಮೊದಲ ಬಾರಿಗೆ ನೋಡಿದ್ದು. ಎತ್ತರದ ನಿಲುವಿನ ಸ್ಫುರದ್ರೂಪಿ ವ್ಯಕ್ತಿತ್ವ ಆ ವ್ಯಕ್ತಿತ್ವವನ್ನು ಇನ್ನೂ ಹೆಚ್ಚು ಅರಳಿಸಲೆಂದೋ ಎಂಬಂತೆ ಶುಭ್ರವಾದ ಖಾದಿ ಕಚ್ಚೆ ಪಂಚೆ ಮತ್ತು ಜುಬ್ಬ ಧರಿಸಿದ್ದರು. ಹಸನ್ಮುಖಿಯಾಗಿದ್ದರು. ಬಹಳ ವಿಶ್ವಾಸದಿಂದ ನನ್ನ ಪೂರ್ವಾಪರಗಳನ್ನು ಕೇಳಿದರು. ಅವರು ಮಾತಾಡಿದ್ದು ಎಷ್ಟು ಸಹಜವೂ, ಸ್ನೇಹ ಪೂರ್ಣವೂ ಆಗಿತ್ತೆಂದರೆ, ನಮ್ಮೀರ್ವರ ಮಧ್ಯೆ ಇದ್ದ ವ್ಯಕ್ತಿತ್ವದ ದೊಡ್ಡ ಅಂತರ ಮಾಯವಾಗಿತ್ತು. ಎಷ್ಟೋ ದಿನಗಳಿಂದ ಬಲ್ಲ ವ್ಯಕ್ತಿಯಂತೆ ನನಗವರನಿಸಿದರು.

ಜೇ.ಪಿಯವರೊಂದಿಗೆ ಸೇರಿದ ಮೇಲೆ ಅವರ ಕಾರ್ಯಕ್ರಮಗಳನ್ನು ತಿಳಿಯಲು ಬಹಳಷ್ಟು ಸಮಯವನ್ನು ಕಳೆಯಬೇಕಾಯಿತು. ಬಿಹಾರದ ಸೋಕೋದೇವ್ರ ಎಂಬಲ್ಲಿ ಇದ್ದ ಆಶ್ರಮಕ್ಕೆ ಹೋದಾದ ಮೇಲೆ ಅಲ್ಲಿದ್ದ ಅನೇಕ ಸಮಾಜವಾದಿ ಸರ್ವೋದಯ ಕಾರ್ಯಕರ್ತರ ಮೂಲಕ ಜೇ.ಪಿಯವರ ಸಾಧನೆ, ಹೋರಾಟ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಕ್ರಮೇಣ ಗೊತ್ತಾಯಿತು. ಯಂಥ ದೊಡ್ಡ ಮಹಾನುಭಾವರ ಸೇವೆ ಮಾಡಲು ನನಗೆ ದೇವರು ಅವಕಾಶ ಮಾಡಿಕೊಟ್ಟ ಎಂಬ ಜ್ಞಾನೋದಯವಾಯಿತು. ಕೆಲವಾರು ದಿನ ಜೇ.ಪಿಯವರೊಂದಿಗೆ ಆಶ್ರಮದಲ್ಲಿ ಇರುವುದು, ಇನ್ನೂ ಕೆಲವಾರು ದಿನ ವಿವಿಧ ಕಾರ್ಯಕ್ರಮಗಳಿಗಾಗಿ ದೇಶದ ಪ್ರಮುಖ ನಗರಗಳಿಗೆ ಪ್ರವಾಸ ಹೋಗುವುದು ಮುಂತಾದವು ನಡೆಯುತ್ತಿದ್ದವು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಮುಂಬಯಿಯಿಂದ ಕಲ್ಕತ್ತಾದವರೆಗೆ ದೇಶದ ಉದ್ದಗಲಕ್ಕೂ ಜೇಪಿಯವರ ಕಾರ್ಯಕ್ರಮಗಳು ಇರುತ್ತಿದ್ದವು. ಮಧ್ಯ ಮಧ್ಯ ವಿನೋಬಾರ ಪಾದಯಾತ್ರೆಯಲ್ಲಿಯೂ ಭಾಗವಹಿಸುತ್ತಿದ್ದರು. ಅಖಿಲ ಭಾರತ ಸರ್ವೋದಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. ಜೇ.ಪಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾರೆಂಬ ಕಾರಣಕ್ಕಾಗಿಯೇ ಸಮ್ಮೇಳನಗಳಲ್ಲಿ ಪ್ರತಿನಿಧಿಗಳ ಸಂಖ್ಯೆ ಅಪಾರವಾಗಿರುತ್ತಿತ್ತು. ಸರ್ವೋದಯ ಸಮ್ಮೇಳನಗಳಲ್ಲದೇ ಸರ್ವ ಸೇವಾ ಸಂಘದ ಕಾರ್ಯಕಾರಿ ಸಮಿತಿಯ ಸಭೆ ನಡೆದ ಊರುಗಳಿಗೆ ಹೋಗಬೇಕಾಗುತ್ತಿತ್ತು. ಇದಲ್ಲದೇ ಜೇ.ಪಿಯವರು ಇಂಡಿಯನ್ ಕಮಿಟಿ ಫಾರ್ ಕಲ್ಚರಲ್ ಫ್ರೀಡಮ್ ಎಂಬ ಸಂಸ್ಥೆಯ ಜೊತೆಗೆ ಸಂಪರ್ಕವಿರಿಸಿಕೊಂಡಿದ್ದರಿಂದ ಆ ಸಂಸ್ಥೆ ದೇಶದ ಬೇರೆ ಬೇರೆ ಭಾಗಗಳಲ್ಲಿ

ಏರ್ಪಡಿಸುತ್ತಿದ್ದ ಸಭೆಗಳಿಗೆ ಹೋಗಬೇಕಾಗುತ್ತಿತ್ತು. ನಾನು ಜೇ.ಪಿಯವರ ಬಳಿ ಇದ್ದಾಗಲೇ ಇನ್ನೆರಡು ಮಹತ್ವಪೂರ್ಣ ಘಟನೆಗಳು ನಡೆದವು. ಅವುಗಳಲ್ಲಿ ಒಂದು ಟಿಬೆಟನ್ನು ಚೀನಾ ಆಕ್ರಮಿಸಿಕೊಂಡದ್ದು, ಆಗ ದಲೈಲಾಮ ಭಾರತಕ್ಕೆ ಓಡಿ ಬಂದು ಹಿಮಾಲಯದ ಧರ್ಮಸ್ಥಳದಲ್ಲಿ ಆಶ್ರಯ ಪಡೆದದ್ದು ಮುಖ್ಯ. ಆಗ ಜೇ.ಪಿಯವರು ಒಂದು ಕಿರುಪುಸ್ತಕವನ್ನು ಬರೆದು ಪ್ರಕಟಿಸಿದರು. ಆ ಪುಸ್ತಕದ ಹೆಸರು " ಟ್ರಾಜಿಡಿ ಆಫ್ ಟಿಬೇಟ್". ಈ ಪುಸ್ತಕದ ಬಹು ಭಾಗವನ್ನು ಬರೆದುಕೊಳ್ಳುವ ಮತ್ತು ಟೈಪ್‌ಮಾಡುವ ಅವಕಾಶ ನನಗೆ ಸಿಕ್ಕಿತ್ತು. ದೇಶದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ದಿಲ್ಲಿ, ಮುಂಬೈ, ಕಲ್ಕತ್ತಾ, ಚೆನ್ನೈ ಮತ್ತು ಬೆಂಗಳೂರು ನಗರಗಳಲ್ಲಿ ಚೀನಾದ ಟಿಬೇಟ್ ಆಕ್ರಮಣದ ವಿರುದ್ಧ ಸಭೆಗಳು ಏರ್ಪಟ್ಟವು. ಅಲ್ಲೆಲ್ಲ ಜೇ.ಪಿಯವರನ್ನು ಬರಮಾಡಿಕೊಳ್ಳಲಾಗಿತ್ತು. ಜೇ.ಪಿಯವರ ಪುಸ್ತಕವೂ ತ್ವರಿತವಾಗಿ ಮಾರಾಟವಾಗುತ್ತಿತ್ತು. ಮುಂದೆ ಅವರು ದಲೈಲಾಮಾರವರನ್ನು ನೋಡಲು ಧರ್ಮಸ್ಥಳಕ್ಕೆ ಹೋದರು. ಆಗ ದಲೈಲಾಮಾಗೆ ಸುಮಾರು ೨೦ವರ್ಷ ವಯಸ್ಸು. ಜೇ.ಪಿ ಮತ್ತು ದಲೈಲಾಮಾ ಬಹಳ ಹೊತ್ತಿನವರೆಗೆ ಮಾತುಕತೆ ನಡೆಸಿದರು. ಆ ಇಬ್ಬ ಐತಿಹಾಸಿಕ ವ್ಯಕ್ತಿಗಳು ಭೇಟಿಯಾದದ್ದು, ಪರಸ್ಪರ ಆಲಂಗಿಸಿ ಸ್ವಾಗತಿಸಿದ್ದು ಮತ್ತು ಎದುರು ಬದುರು ಕುಳಿತು ಮಾತನಾಡಿದ್ದನ್ನು ನೋಡಿದ್ದು ಕೂಡ ಒಂದು ಸ್ಮರಣೀಯ ಘಟನೆಯಾಗಿ ಮನದಲ್ಲಿ ನಿಂತಿದೆ. ಮಾತುಕತೆಯನ್ನು ಕೇಳುವ ಭಾಗ್ಯಮಾತ್ರ ಸಿಗಲಿಲ್ಲ. ಜೇ.ಪಿಯವರು ಏನೆಲ್ಲಾ ದಲೈಲಾಮಾರೊಂದಿಗೆ ಮಾತನಾಡಿದರೆಂಬುದನ್ನು ಕೇಳಿ ದಾಖಲಿಸುವ ಅವಕಾಶವನ್ನು ಕಳೆದುಕೊಂಡುದಕ್ಕೆ ಈಗಲೂ ವ್ಯಥೆಯಾಗುತ್ತದೆ. ಎರಡನೇಯ ಮುಖ್ಯ ಘಟನೆಯಂದರೆ ಸಿ.ರಾಜಗೋಪಾಲಚಾರಿಯವರು ಸ್ವತಂತ್ರ ಪಕ್ಷವನ್ನು ಕಟ್ಟುವ ಮೊದಲು ಜೇ.ಪಿಯವರೊಂದಿಗೆ ಪರಾಮರ್ಶೆಮಾಡುವುದಕ್ಕಾಗಿ ಅವರನ್ನು ಮದ್ರಾಸಿಗೆ ಬರಮಾಡಿಕೊಂಡದ್ದು. ರಾಜಾಜಿಯವರಿದ್ದ ಮನೆಯಲ್ಲಿ ಜೇ.ಪಿ ಮತ್ತು ರಾಜಾಜಿಯವರು ಸ್ವತಂತ್ರ ಪಕ್ಷದ ರಚನೆಯ ಬಗ್ಗೆ ಮಾತನಾಡಿದರು. ಈ ಕಾರಣದಿಂದಾಗಿ ನನಗೆ ರಾಜಾಜಿಯುವರನ್ನು ಅವರ ಮನೆಯುಲ್ಲಿಯೇ ಜೇ.ಪಿಯವರೊಂದಿಗೆ ನೋಡುವ ಅವಕಾಶ ದೊರೆಯಿತು. ಅವರೀರ್ವರು ಏನೆಲ್ಲಾ ಮಾತನಾಡಿದರು ಎಂಬುದು ನನಗೆ ಗೊತ್ತಾಗದೇ ಹೋದರೂ ಜೇ.ಪಿಯವರ ಭೇಟಿಯ ನಂತರದ ಒಂದೆರಡು ದಿನಗಳಲ್ಲಿಯೇ ರಾಜಾಜಿಯವರಿಂದ ಸ್ವತಂತ್ರ ಪಕ್ಷದ ರಚನೆಯ ಘೋಷಣೆಯಾಯಿತು. ದೇಶದ ಈ ಐತಿಹಾಸಿಕ ಬೆಳವಣಿಗೆಯನ್ನು ನೋಡಿದ ಭಾಗ್ಯ ನನ್ನದಾಯಿತು.

ಇನ್ನೊಂದು ಮುಖ್ಯ ಘಟನೆ ನನ್ನ ಜ್ಞಾಪಕಕ್ಕೆ ಬರುವುದು ಡಾ//ರಾಮ

ಮನೋಹರ ಲೋಹಿಯ ಮತ್ತು ಜಯಪ್ರಕಾಶ್ ನಾರಾಯಣರ ಮಾತುಕತೆ. ಈ ಮತುಕತೆ ನಡೆದದ್ದು ಹೈದ್ರಾಬಾದಿನ ಹತ್ತಿರ ಇರುವ ಯಾವುದೋ ಒಂದು ಪ್ರಶಾಂತ ನಿಸರ್ಗಧಾಮದಲ್ಲಿ. ಮಾತುಕತೆಯ ವಿಷಯ ಸರ್ವೋದಯ ಮತ್ತು ಸಮಾಜವಾದ. ಪ್ರಖರ ಸಮಾಜವಾದಿ ಚಿಂತಕರಾಗಿದ್ದ ಜೇ.ಪಿ ಸರ್ವೋದಯ ಆಂದೋಲನಕ್ಕೆ ಬಂದದ್ದು ಮತ್ತು ಅದಕ್ಕಾಗಿ ಜೀವನದಾನ ಮಾಡಿದ್ದು ಜೇ.ಪಿಯವರಷ್ಟೇ ತೀವ್ರ ಸಮಾಜವಾದಿಯಾಗಿದ್ದ ಡಾ//ಲೋಹಿಯಾರವರಿಗೆ ಒಪ್ಪಿಗೆಯಾಗಿರಲಿಲ್ಲ. ಸಕ್ರಿಯ ರಾಜಕಾರಣದಿಂದ ದೂರ ಹೋಗಲು ತೀರ್ಮಾನಿಸಿದ ಜೇ.ಪಿಯವರ ನಿಲುವು ಲೋಹಿಯಾರವರಿಗೆ ಸಮ್ಮತವೆನಿಸಿರಲಿಲ್ಲ. ಸಕ್ರಿಯ ರಾಜಕಾರಣದಲ್ಲಿದ್ದ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಬೇಕೆಂಬುದು ಡಾ//ಲೋಹಿಯಾರ ನಿಲುವಾಗಿತ್ತು. ಆದ್ದರಿಂದ ಜೇ.ಪಿಯವರನ್ನು ಪುನಃ ಸಮಾಜವಾದದ ಕಾರ್ಯಕ್ರಮಗಳಿಗೆ ತರಬೇಕೆಂಬುದು ಲೋಹಿಯಾರ ಅಂತರಂಗದ ಆಸೆಯಾಗಿತ್ತು. ಅದಕ್ಕಾಗಿ ಸಮಾಜವಾದಿ ಸ್ನೇಹಿತರು ಲೋಹಿಯಾ ಮತ್ತು ಜೇ.ಪಿಯವರ ಮಾತುಕತೆಯನ್ನು ಏರ್ಪಡಿಸಿದ್ದರು. ಸುಮಾರು ಮೂರು ದಿನಗಳ ಕಾಲ ನಡೆದ ಈ ಮಾತುಕತೆಯ ಸಂದರ್ಭದಲ್ಲಿ ಲೋಹಿಯಾರವರು ಜೇ.ಪಿಯವರ ನಿಲುವನ್ನು ಬದಲಾಯಿಸಲು ಬಹಳಷ್ಟು ಪ್ರಯತ್ನಿಸಿದರು. ಜೇ.ಪಿಯವರು ಸರ್ವೋದಯ ವಿಚಾರ ಬೇರೆಲ್ಲಾ ರಾಜಕೀಯ ವಾದಗಳಿಗಿಂತ ಹೇಗೆ ಶ್ರೇಷ್ಠವಾಗಿದೆ ಎಂಬುದನ್ನು ಲೋಹಿಯಾರವರಿಗೆ ಮನವರಿಕೆಮಾಡಿಕೊಡಲು ಪ್ರಯತ್ನಿಸುತ್ತಿದ್ದರು. ಆದರೆ ಈರ್ವ ನಾಯಕರೂ ತಮ್ಮ ವಿಚಾರದ ಕಟ್ಟಾ ಅಭಿಮಾನಿಗಳಾಗಿದ್ದುದರಿಂದ ಸಂಧಾನ ಸಫಲವಾಗದೇ ಹೋಯಿತು. ಮುಂದಿನದೆಲ್ಲವೂ ಇತಿಹಾಸ. ಈ ಐತಿಹಾಸಿಕ ಘಟನೆಯನ್ನು ನೋಡಿದ, ಕೇಳಿದ ಮತ್ತು ಲೋಹಿಯಾರವರನ್ನು ನಿಕಟವಾಗಿ ಕಂಡು ಮಾತನಾಡಿದ ಅವಕಾಶವಿದಾಗಿತ್ತು. ಈ ಘಟನೆ ನನ್ನ ಮನಸ್ಸಿನಲ್ಲಿ ಅವಿಸ್ಮರಣೀಯವಾಗಿ ಉಳಿದಿದೆ.

ಇನ್ನು ಜವಹರಲಾಲ್‌ರೊಂದಿಗೆ ಪತ್ರ ವ್ಯವಹಾರ ಮತ್ತು ಬಿಹಾರದ ಮುಖ್ಯಮಂತ್ರಿ ಶ್ರೀಕೃಷ್ಣ ಸಿನ್ಹಾ ರೊಂದಿಗಿನ ಪತ್ರ ವ್ಯವಹಾರ, ಪತ್ರಿಕೆಗಳಿಗೆ ಬರೆದ ಲೇಖನ ಮತ್ತು ಪತ್ರಿಕಾ ಹೇಳಿಕೆಗಳು ಅದೆಷ್ಟೋ, ಇವುಗಳ ಪ್ರಕಟನೆಯಲ್ಲಿ ನನ್ನ ಪಾತ್ರ ಕಿರಿದಾಗಿದ್ದರೂ ತನ್ಮೂಲಕ ತಿಳಿದುಕೊಂಡ ಸಂಗತಿ ಅಪಾರ.

ಜೇ.ಪಿಯವರೊಂದಿಗೆ ಐದು ವರ್ಷಗಳ ಕಾಲ ಇದ್ದದ್ದು ಐದು ದಿನಗಳಿಗೆ ಸಮವಾಗಿತ್ತೆಂದು ಅನಿಸುತ್ತದೆ. ಜೇ.ಪಿಯವರೊಂದಿಗೆ ಸಂಪರ್ಕ ಬರದೇ ಹೋಗಿದ್ದರೆ ಸರ್ವೋದಯ ವಿಚಾರದ ನೆಲೆ ಸಿಗದೇ ಹೋಗಿದ್ದರೆ ಜೀವನವೆಲ್ಲಾ ಬರಡಾಗುತ್ತಿತ್ತು. ಜನ್ಮ ಪಡೆದು ಮರಣ ಹೊಂದಿದ ಸ್ಥಿತಿಗೆ ಮಾತ್ರ ಸೀಮಿತವಾಗಿದ್ದಂತಹ

ಬದುಕಾಗಿರುತ್ತಿತ್ತು. ಜೇ.ಪಿಯವರು ಮೇಲುಕೋಟೆಯಲ್ಲಿಯ ನನ್ನ ಮನೆಗೂ ಬಂದದ್ದು, ಮೇಲುಕೋಟೆಯಲ್ಲಿ ಸಾರ್ವಜನಿಕ ಸಭೆ ನಡೆಸಿದ್ದು, ಜೇ.ಪಿಯವರೊಂದಿಗಿನ ನನ್ನ ಸಂಬಂಧದ ಚಿನ್ನದ ಮೆರುಗಿನ ಸಂಗತಿಯಾಗಿದೆ. ಸ್ಥಳಾಬಾವದ ಕಾರಣದಿಂದಾಗಿ ಬರೆಯಬಹುದಾಗಿದ್ದ ಇನ್ನೂ ಅನೇಕ ಅನುಭವಗಳ ವಿಷಯ ಬಿಟ್ಟುಹೋದುದಕ್ಕಾಗಿ ವಿಷಾದಿಸುತ್ತೇನೆ, ಸ್ನೇಹಿತರ ಕ್ಷಮೆ ಕೋರುತ್ತೇನೆ.

ಜಯಪ್ರಕಾಶರೊಂದಿಗಿನ ಐದು ವರ್ಷಗಳ ಅವಧಿಯಲ್ಲಿ ಅವರು ತಮ್ಮ ಸುತ್ತಮುತ್ತಲಿದ್ದ ಯಾರ ಮೇಲಾದರೂ ಕೋಪಿಸಿಕೊಂಡದ್ದನ್ನು ಕಾಣಲಿಲ್ಲ. ಯಾವಾಗಲೂ ಹಸನ್ಮುಖದಿಂದಲೇ ಮಾತನಾಡುತ್ತಿದ್ದರು. ಎದಿರಿಗಿರುವ ಮನುಷ್ಯ ಒಬ್ಬ ಹಳ್ಳಿಯವನೇ ಆಗಿದ್ದಿರಬಹುದು, ಸಾಮಾನ್ಯ ಕಾರ್ಯಕರ್ತನೇ ಆಗಿದ್ದಿರಬಹುದು, ಎಲ್ಲರೊಂದಿಗೆ ಸ್ನೇಹಪೂರ್ಣವಾಗಿ ಮಾತನಾಡುತ್ತಿದ್ದರು. ಪರರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವ ಗುಣ ಅವರದ್ದಾಗಿತ್ತು. ಹಾಗಿದ್ದುದರಿಂದಲೇ ಹಿಂದಿ ಭಾಷೆಯನ್ನು ಸ್ವಲ್ಪವೂ ಅರಿಯದಿದ್ದ ನಾನು ಹಿಂದಿ ಕಲಿತು ಅವರ ಕೆಲಸವನ್ನು ಮಾಡುವಷ್ಟರ ಮಟ್ಟಿಗೆ ಸಮರ್ಥನಾಗುವಂತಾಯಿತು. ಅನೇಕ ಸಲ ಹಿಂದಿ ವ್ಯಾಕರಣದ ಪರಿಚಯ ಮಾಡಿಕೊಟ್ಟದುಂಟು. ಹಿಂದಿ ಶೀಘ್ರಲಿಪಿ ಕಲಿಯಲು ನನ್ನನ್ನು ಆರು ತಿಂಗಳ ಮಟ್ಟಿಗೆ ಕಾಶಿಗೂ ಕಳುಹಿಸಿದರು.

ದೇಶದ ನಾನಾಕಡೆ ಹತ್ತಾರು ಕಾರ್ಯಕ್ರಮಗಳನ್ನು ಮುಗಿಸಿ ಪಾಟ್ನಾಗೆ ಹಿಂದಿರುಗಿದಾಗ ಮತ್ತು ಜೇಪಿ ಪಾಟ್ನಾದಲ್ಲಿ ಇದ್ದಾಗಲೆಲ್ಲ ಮಹಿಳಾ ಚರಕಾ ಸಮಿತಿಯ ಕಟ್ಟಡದಲ್ಲೇ ವಾಸ್ತವ್ಯ ಮಾಡುತ್ತಿದ್ದರು. ಮಹಿಳಾ ಚರಕಾ ಸಮಿತಿಯನ್ನು ಅವರ ಪತ್ನಿ ಪ್ರಭಾವತಿ ಸ್ಥಾಪಿಸಿದ್ದರು. ಬಹಳ ದಿನಗಳ ನಂತರ ಅಲ್ಲಿಗೆ ಹೋದ ಕೂಡಲೇ ಅಲ್ಲಿಯ ಎಲ್ಲ ಜನರ ಆರೋಗ್ಯವನ್ನು ತಪ್ಪದೇ ವಿಚಾರಿಸುತ್ತಿದ್ದರು.

ಗಯಾ ಜಿಲ್ಲೆಯ ಸೋಖೋದೇವರಾ ಎಂಬ ಗ್ರಾಮ ಬಳಿ ಇದ್ದ ಸರ್ವೋದಯ ಆಶ್ರಮಕ್ಕೆ ಹೋದಾಗಲೂ ಸಹ ಅವರು ತಪ್ಪದೇ ಆಶ್ರಮ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದರು. ಆಶ್ರಮ ವಾಸಿಗಳೆಲ್ಲ ವರ್ತುಲಾಕಾರದಲ್ಲಿ ಮೌನವಾಗಿ ಕುಳಿತಿರುತ್ತಿದ್ದರು. ಮುಸ್ಸಂಜೆ ಮುಗಿದು ಕತ್ತಲಾಗುವ ಸಮಯ ಆಗುತ್ತಿದ್ದುದರಿಂದ ವರ್ತುಲದ ಮಧ್ಯೆ ಒಂದು ಲಾಟೀನನ್ನು ಇಡಲಾಗಿರುತ್ತಿತ್ತು. ಪ್ರಾರ್ಥನೆ ನಂತರ ಜೇಪಿ ದೇಶದಲ್ಲಿಯ ಅಂದಿನ ಪ್ರಚಲಿತ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದರು ಮತ್ತು ಅವುಗಳ ಬಗೆಗಿನ ತಮ್ಮ ನಿಲುವನ್ನು ತಿಳಿಸುತ್ತಿದ್ದರು. ನಂತರ ಆಶ್ರಮವಾಸಿಗಳಿಂದ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದರು. ಪ್ರಾರ್ಥನೆ ಮುಗಿದಾದ ನಂತರ ಆಶ್ರಮವಾಸಿಗಳೆಲ್ಲರೂ ಹೊಸ ಚೈತನ್ಯದೊಂದಿಗೆ ತಮ್ಮ ತಮ್ಮ

ನಿವಾಸಗಳತ್ತ ಹೆಜ್ಜೆ ಹಾಕುತ್ತಿದ್ದರು.

ಆಶ್ರಮದಲ್ಲಿ ಇದ್ದಾಗ ಜೇಪಿ ಬೆಳಿಗ್ಗೆ ಬೇಗ ಎದ್ದು ಆಶ್ರಮದ ಇಡೀ ಪರಿಸರದಲ್ಲಿ ಓಡಾಡಿಕೊಂಡು ಬರುತ್ತಿದ್ದರು. ವ್ಯವಸಾಯ ಮತ್ತು ತೋಟಗಾರಿಕೆ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಿದ್ದರು ಮತ್ತು ಸಲಹೆ ಕೊಡುತ್ತಿದ್ದರು. ಊಟದ ಸಮಯದಲ್ಲಿ ಆಶ್ರಮವಾಸಿಗಳ ಸಾಲಿನಲ್ಲಿಯೇ ಕುಳಿತು ಊಟ ಮಾಡುತ್ತಿದ್ದರು. ಜೇಪಿಯವರಿಗೆ ಡಯಾಬಿಟಿಸ್ ಇದ್ದುದರಿಂದ ಪ್ರಭಾವತಿ ಅವರಿಗೆ ತಕ್ಕುದಾದ ಅಡಿಗೆಮಾಡಿ ಬಡಿಸುತ್ತಿದ್ದರು. ಅವರ ಪಕ್ಕದಲ್ಲಿ ಕುಳಿತಿರುತ್ತಿದ್ದ ನನಗೂ ಆ ಊಟದ ಸವಿ ದೊರೆಯುತ್ತಿತ್ತು. ಆಶ್ರಮದಲ್ಲಿ ಉಳಿದುಕೊಳ್ಳಲು ಜೇಪಿಯವರಿಗಾಗಿ ಒಂದು ಪ್ರತ್ಯೇಕ ಮಣ್ಣಿನ ಮನೆಯನ್ನು ಕಟ್ಟಲಾಗಿತ್ತು. ಆ ಮನೆಯ ಅಂಗಳವನ್ನು ಗುಡಿಸುವ ಕೆಲಸವನ್ನು ನಾನು ಮಾಡುತ್ತಿದ್ದಾಗ ಜಯಪ್ರಕಾಶರು ಬಂದು ಯಾವ ರೀತಿ ಮರಳಿನಿಂದ ಕೂಡಿದ ನೆಲವನ್ನು ಗುಡಿಸಬೇಕೆಂಬುದನ್ನು ತೋರಿಸಿದರು. ಅದನ್ನು ತಾವು ಜೈಲಿನಲ್ಲಿದ್ದಾಗ ಮಾಡುತ್ತಿದ್ದುದನ್ನು ಹೇಳುತ್ತಿದ್ದರು. ಒಂದು ಸಲ ರೈಲಿನಲ್ಲಿ ಪ್ರಯಾಣ ಮಾಡುವಾಗ ರಾತ್ರಿಯಾಗಿತ್ತು. ನನಗೆ ನಿದ್ರೆ ಬಂದು ಮಲಗಿ ಬಿಟ್ಟಿದ್ದೆ. ರೈಲನ್ನು ಬದಲಾಯಿಸಬೇಕಾದ ಜಂಕ್ಷನ್ ಬಂದಾಗ ನಾನು ರೈಲಿನಿಂದ ಇಳಿಯದೆ ಇರುವುದನ್ನು ಗಮನಿಸಿ ಜಯಪ್ರಕಾಶರು ನನ್ನ ಹೆಸರನ್ನು ಕೂಗುತ್ತಾ ನನ್ನನ್ನು ಹುಡುಕುತ್ತಿದ್ದರು. ಅದೃಷ್ಟವಶಾತ್ ನನಗೆ ಎಚ್ಚರವಾಗಿ ಅವರು ಇದ್ದ ಬೋಗಿಯ ಕಡೆಗೆ ಓಡಿದೆ. ನನ್ನ ಮದುವೆಗೆ ಬರಲಾರದಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತಾ ನನಗೆ ಶುಭ ಹಾರೈಸುವ ಪತ್ರ ಬರೆಯುವುದನ್ನು ಅವರು ಮರೆಯಲಿಲ್ಲ. ಐದು ವರ್ಷಗಳ ಅವಧಿಯಲ್ಲಿ ಜಯಪ್ರಕಾಶ್ ನಾರಾಯಣರು ನನಗೆ ಹಿರಿಯಣ್ಣನಾಗಿ ಮತ್ತು ಮಾರ್ಗದರ್ಶಕರಾಗಿ ಹಾಗೂ ಸೌಮ್ಯ ವ್ಯಕ್ತಿಯಾಗಿ ಕೈಹಿಡಿದು ನಡೆಸಿದರು.

("ಹೊಸ ಮನುಷ್ಯ" ವಿಶೇಷ ಸಂಚಿಕೆಗಾಗಿ ಬರೆದ ಲೇಖನದ ಮರು ಪ್ರಕಟನೆ)



# ಗ್ರಾಮೀಣ ಜೀವನದ ಇಂದಿನ ಸ್ಥಿತಿ –ಗತಿ

– ಡಾ.ಬೋರೇಗೌಡ ಚಿಕ್ಕಮರಳಿ

ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದ ನಾನು ಈ ಸಂದರ್ಭದಲ್ಲಿ ನಮ್ಮ ಗ್ರಾಮೀಣ ಬದುಕಿನ ಸಮಕಾಲೀನ ಸ್ಥಿತಿ–ಗತಿಗಳ ಬಗೆಗೆ ನಾಲ್ಕು ಮಾತುಗಳನ್ನು ಆಡಿದರೆ ಅಪ್ರಸ್ತುತವಾಗಲಾರದು ಎಂದುಕೊಂಡಿದ್ದೇನೆ. ನಮ್ಮ ಹಳ್ಳಿಗಳು ತಮ್ಮ ತುಡಿತಗಳನ್ನು ಒಡಲೊಳಗೆ ಬಚ್ಚಿಟ್ಟುಕೊಂಡು ಹೊರಗೆ ಶಾಂತವನ್ನು ಮೆರೆದ ಜಿನಮೂರ್ತಿಗಳಂತೆ ನನಗೆ ಗೋಚರಿಸುತ್ತವೆ. ಆಗಾಗ ಸ್ಫೋಟಗಳು ಸಂಭವಿಸಿ ಸುದ್ದಿಮಾಡುತ್ತವಾದರೂ ವಿಪ್ಲವಗಳಾಗದೆ ಮತ್ತೆ ಮೌನಕ್ಕೆ ಸರಿಯುತ್ತವಾದುದರಿಂದ ಅವು ಮಾಡುವ ಸುದ್ದಿಗಳು ನಗರನಾಗರಿಕತೆಯ ಗೊಂಡಾರಣ್ಯದ ನಡುವೆ ಕಾಣಿಸುವ ಸೂಜಿ ಮೊನೆಯ ಹೊಗೆಯಂತಲ್ಲದೆ ಕಾಡ್ಗಿಚ್ಚಿನಂತಹುದಲ್ಲ. ಈ ಧಾರಣಶಕ್ತಿ ನಮ್ಮ ಹಳ್ಳಿಗಳಿಗೆ ಇಲ್ಲದೆ ಹೋಗಿದ್ದರೆ ಇತಿಹಾಸದ ಮಣ್ಣು ಸೇರಿರುವ ಸಾಮ್ರಾಜ್ಯಶಾಹಿಗಳು ತಮ್ಮ ಮೆರೆತದ ದಿವಸಗಳನ್ನು ಕಾಣುವುದು ಸಾಧ್ಯವಾಗುತ್ತಿರಲಿಲ್ಲ. ನಮ್ಮ ದೇಶದ ಜೀವನಾಡಿಯಾದ ಹಳ್ಳಿಗರ ಬದಿಕಿನ ಪ್ರಚ್ಛನ್ನ ದಾರುಣತೆಯನ್ನು ಒಳಹೊಕ್ಕು ಬಲ್ಲವರಾಗಿದ್ದುದರಿಂದಲೇ ಗಾಂಧೀಜಿಯವರ ಚಿಂತನೆ ಗ್ರಾಮಮುಖಿಯಾಯಿತು; ಗ್ರಾಮೋದ್ಧಾರದ ಆಶಯವೇ ಕೇಂದ್ರಬಿಂದುವಾಯಿತು. ಆದರೆ ಸ್ವಾವಲಂಬಿ ಬದುಕಿನ ತಳಹದಿಯ ಮೇಲೆ ಗ್ರಾಮರಾಜ್ಯವನ್ನು ಕಟ್ಟುವ ಅವರ ಕನಸು ಕನಸಾಗಿಯೇ ಉಳಿದಿದೆ. ಇದಕ್ಕೆ ಕಾರಣ ಗಾಂಧೀಜಿಯವರ ಜೊತೆಯಲ್ಲೇ ಇದ್ದು ಅವರ ಕಣ್ಣೆದುರಿಗೇ ಅಧಿಕಾರದ ಚುಕ್ಕಾಣಿ ಹಿಡಿದವರು ತೋರಿದ ಮುಂದುವರಿದ ರಾಷ್ಟ್ರಗಳನ್ನು ಅನುಕರಿಸುವ ಹಾಗೂ ಓಲೈಸುವ ಪ್ರವೃತ್ತಿ, ಸ್ವಾತಂತ್ರ್ಯ ಪಡೆದು ಅರುವತ್ತಾರು ವರ್ಷಗಳು ಕಳೆದ ನಂತರವೂ ಈ ಪ್ರವೃತ್ತಿ ಮುಂದುವರಿದಿದೆ ಮಾತ್ರವಲ್ಲ, ದ್ವಿತೀಯ

ಜಾಗತೀಕರಣದ ಹಾಗೂ ಖಾಸಗೀಕರಣದ ಹಿಡಿತಕ್ಕೆ ಸಿಕ್ಕಿ ಇತರ ಅಭಿವೃದ್ಧಿಶೀಲ ರಾಷ್ಟ್ರಗಳಂತೆ ಭಾರತದ ದೇಸೀಯತೆ ಮತ್ತು ಸಾರ್ವಜನಿಕ ವ್ಯವಸ್ಥೆ ನೆಲಕಚ್ಚುತ್ತಿದೆ. ಜನಸಂಖ್ಯಾ ವಿರಳತೆ ಹಾಗೂ ಭೋಗಜೀವನದ ಲಾಲಸೆಯಿಂದ ಕೂಡಿದ ಪಾಶ್ಚಾತ್ಯ ರಾಷ್ಟ್ರಗಳ ಬದುಕು ಕೈಗಾರಿಕಾ ಕ್ರಾಂತಿ ಮತ್ತು ಯಂತ್ರ ನಾಗರೀಕತೆಗೆ ಶರಣುಹೋಗುವುದು ಅವಶ್ಯವಿದ್ದಿರಬಹುದು; ಆದರೆ ಈ ಆವಶ್ಯಕತೆ ಭಾರತೀಯ ಬದುಕಿಗೆ ಇರಲಿಲ್ಲ. ಇಲ್ಲಿ ಮಾನವ ಶಕ್ತಿಯ ಮತ್ತು ನೈಸರ್ಗಿಕ ಸಂಪನ್ಮೂಲದ ಸಮೃದ್ಧಿ ಇತ್ತು. ಅದಕ್ಕನುಗುಣವಾದ ಸಹಜಕೃಷಿ, ಗುಡಿಕೈಗಾರಿಕೆ, ಕರಕೌಶಲ ಮೊದಲಾದ ಗ್ರಾಮಜೀವನವನ್ನಾಧರಿಸಿದ ಕಸುಬುದಾರಿಕೆಗಳಿದ್ದವು. ಕೊರತೆ ಇದ್ದುದು ಶಿಕ್ಷಣ ಮತ್ತು ವೈಜ್ಞಾನಿಕ ತಿಳುವಳಿಕೆಯದು. ಭಾರತೀಯ ಬದುಕನ್ನು ಆವರಿಸಿದ್ದ ಅಜ್ಞಾನ ಮತ್ತು ಅವೈಜ್ಞಾನಿಕತೆಯ ಭೂತಕ್ಕೆ ಜಾತಿ–ಮತ ಭಾವನೆ ಹಾಗೂ ಆರ್ಥಿಕ ಅಸಮಾನತೆ ಧೂಪ ಹಾಕುತ್ತಿದ್ದವು; ಪುರೋಹಿತಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಪೋಷಿಸಿ ರಕ್ಷಿಸುತ್ತಿದ್ದವು. ಪಾಶ್ಚಾತ್ಯರ ಧಾವಂತ ಮತ್ತು ದೇಶೀಯರ ಅಜ್ಞಾನದಿಂದ ಭಾರತವನ್ನು ಮುಕ್ತಗೊಳಿಸುವುದಕ್ಕಾಗಿಯೇ ಗಾಂಧೀಜಿಯವರು ಕೈಕಸುಬು ಆಧಾರಿತ ಮೂಲ ಶಿಕ್ಷಣ ವಿಧಾನಗಳನ್ನು ರೂಪಿಸುತ್ತಿದ್ದರು. ಅವರ ಆಶ್ರಮ ವ್ಯವಸ್ಥೆಯ ಪ್ರಯೋಗಗಳನ್ನು ಅಧ್ಯಯನ ಮಾಡಿದರೆ ಇದು ತಿಳಿಯುತ್ತದೆ. ಶಿಕ್ಷಣ, ವೈದ್ಯ, ವ್ಯವಸಾಯ ಮತ್ತು ಕೈಗಾರಿಕೆಯಲ್ಲಿ ದೇಶೀತನವನ್ನು ರೂಢಿಸುವುದು ಮತ್ತು ಪುನರುಜ್ಜೀವಿಸುವುದು ಗಾಂಧೀಜಿಯವರ ಗುರಿಯಾಗಿತ್ತು. ಇಂದು ನಮ್ಮ ದೇಶ ಎದುರಿಸುತ್ತಿರುವ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಗಾಂಧೀಜಿ ಕನಸುಕಂಡ ಗ್ರಾಮಭಾರತದಲ್ಲಿಯೇ ಇದೆ. ಆದುದರಿಂದ ನಮ್ಮ ಜನನಾಯಕರು ಮತ್ತು ಅಧಿಕಾರಿಗಳು ತಮ್ಮ ಚಿಂತನೆ ಮತ್ತು ಕ್ರಿಯಾಶೀಲತೆಯನ್ನು ಗ್ರಾಮಮುಖಿಯಾಗಿಸಬೇಕು. ಒಂದೊಂದು ಹಳ್ಳಿಯನ್ನೂ ಅಲ್ಲಿರುವ ಲೋಪದೋಷಗಳಿಂದ ಮತ್ತು ಪರಿಮಿತಿಗಳಿಂದ ಮುಕ್ತಗೊಳಿಸಿ ಪುನರ್ರೂಪಿಸುವ ಆಶಯವನ್ನು ಹೊತ್ತ ಯೋಜನೆಗಳನ್ನು ರೂಪಿಸಬೇಕು. ಗಾಂಧೀಜಿಯವರ ಚಿಂತನೆ, ಅಂಬೇಡ್ಕರರ ಹೋರಾಟ, ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿ, ಲೋಹಿಯಾ ಅವರ ಸಮಾಜವಾದ  ಇವು ದೇಶವನ್ನು ಮುನ್ನಡೆಸುವ ದಾರಿದೀವಿಗೆಗಳಾಗಬೇಕು. ಮುಂದುವರಿದ ರಾಷ್ಟ್ರಗಳ ನಿರ್ದೇಶನ, ಬಹುರಾಷ್ಟ್ರೀಯ ಕಂಪನಿಗಳ ಬೇಡಿಕೆ, ಅತಿದೊಡ್ಡ ಶ್ರೀಮಂತರು ಮತ್ತು ಉದ್ಯಮಿಗಳ ಒತ್ತಾಯಗಳಿಗೆ ಮಣಿದು ಸರ್ಕಾರಗಳನ್ನು ನಡೆಸುವ ಅಸ್ವತಂತ್ರ ಪ್ರವೃತ್ತಿಯನ್ನು ಎಲ್ಲಿಯವರೆಗೆ ನಮ್ಮ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತೊರೆಯುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಆಡಳಿತದಲ್ಲಿ ಇಚ್ಛಾಶಕ್ತಿಯಾಗಲಿ, ಪ್ರಜೆಗಳಲ್ಲಿ ಆರ್ಥಿಕ ಸಮಾನತೆಯಾಗಲಿ ಗೋಚರಿಸುವುದಿಲ್ಲ. ಜಾಗತೀಕರಣ ಮತ್ತು ಖಾಸಗೀಕರಣದ

ಮೂಲಕ ಪ್ರಚ್ಛನ್ನ ಪಾರತಂತ್ರ್ಯ ನಮ್ಮನ್ನಾಳುತ್ತಿದೆ; ದೇಸೀಯತೆಯ ನಿರ್ಬೀಜೀಕರಣ ನಿರಂತರವಾಗಿ ನಡೆಯುತ್ತಿದೆ. ರೈತರ ಆತ್ಮಹತ್ಯೆಯಂತಹ ಸಾಂಸ್ಕೃತಿಕ ದುರಂತ ಬೇರೂರುತ್ತಿದೆ. ಈ ಪ್ರವೃತ್ತಿ ನಿಲ್ಲಬೇಕು, ಸಾರ್ವಜನಿಕ ವ್ಯವಸ್ಥೆಯು ಪುನರುತ್ಥಾನವಾಗಬೇಕು. ಮುಕ್ತ ಮತ್ತು ವೈಜ್ಞಾನಿಕ ಶಿಕ್ಷಣ, ಆರ್ಥಿಕ ಸಮಾನತೆ ಮತ್ತು ಜಾತಿವಿನಾಶ  ಇವು ಅತ್ಯಂತ ಅಗತ್ಯವಾಗಿ ನಮ್ಮ ದೇಶದಲ್ಲಿ ಪೂರೈಕೆಯಾಗಬೇಕಾಗಿರುವ ಪ್ರಕ್ರಿಯೆಗಳು. ರೈತಪರ ಹೋರಾಟಗಳನ್ನು, ಜನಪರ ನಿಲುವುಗಳನ್ನು ಜೀವಂತವಾಗಿರಿಸಿಕೊಂಡಿರುವ ಪಾಂಡವಪುರದಿಂದಲೇ, ಮಂಡ್ಯ ಜಿಲ್ಲೆಯಿಂದಲೇ ಇದು ಸಾಧಿತವಾಗಲು ಉದ್ಯುಕ್ತವಾದರೆ ಅದಕ್ಕಿಂತ ಅಪ್ಯಾಯಮಾನವಾದ ಸಂಗತಿ ಇನ್ನೊಂದು ಇರಲಾರದು.

ಸುಧಾರಣೆಗೊಳ್ಳಬೇಕಾದ ಗ್ರಾಮೀಣ ಜೀವನಶೈಲಿಯ ಬಗೆಗೆ ಒಂದೆರಡು ಮಾತು. ಗ್ರಾಮಜೀವನವನ್ನು ಕುರಿತ ಕೆಲವು ಮೆಚ್ಚುಗೆಯ ಮಾತುಗಳನ್ನು ಈ ಮೊದಲು ಹೇಳಿದ್ದೇನೆ. ಅಂದರೆ ಅಲ್ಲಿ ಎಲ್ಲವೂ ಸರಿಯಾಗಿದೆ ಎಂದು ಅರ್ಥವಲ್ಲ. ಬದುಕಿಗಾಗಿ ನಿಂರಂತರ ಹೋರಾಟ, ವ್ಯವಸಾಯೋತ್ಪನ್ನಗಳ ಬೆಲೆಯ ಜೂಜಾಟ, ಸೌಲಭ್ಯಗಳು ಮತ್ತು ಅವಕಾಶಗಳ ವಂಚನೆ ಇವುಗಳಿಂದ ಗ್ರಾಮೀಣ ಬದುಕು ಸೊರಗುತ್ತಿರುವ ಬಗೆಗೆ ಅನುಕಂಪೆ ಮತ್ತು ವ್ಯಗ್ರತೆ ಮನದಲ್ಲಿ ಇದ್ದರೂ ಅಲ್ಲಿರುವ ಹಲವಾರು ಅನುಚಿತ ವಿದ್ಯಮಾನಗಳ ಬಗೆಗೆ ವಿಷಾದವೂ ಇದೆ. ಹೊಸ ಹೊಸ ಸಂವೇದನೆ, ಅನ್ವೇಷಣೆ, ಆವಿಷ್ಕಾರಗಳತ್ತ ಜಗತ್ತು ಧಾವಿಸುತ್ತಿರುವುದು ಈ ಯುಗದಲ್ಲಿಯೂ ನಮ್ಮ ಹಳ್ಳಿಗಳು ಮೌಢ್ಯತೆಯಿಂದ ಮುಕ್ತವಾಗಿಲ್ಲ; ವಿಚಾರದೀಪ್ತವೂ ವೈಜ್ಞಾನಿಕವೂ ಆದ ಸರಳ ಹಾಗೂ ಮುಕ್ತ ಬದುಕಿಗೆ ತಮ್ಮನ್ನು ಪೂರ್ಣವಾಗಿ ಒಡ್ಡಿಕೊಳ್ಳುತ್ತಿಲ್ಲ. ರಾಷ್ಟ್ರೀಯ ಭಾವನೆ ಮತ್ತು ಸಂವಿಧಾನದ ಅರಿವು ಅಲ್ಲಿ ಇನ್ನೂ ಜಾಗೃತವಾಗಬೇಕಾದ ಅಗತ್ಯವಿದೆ. ಈ ಮಿತಿಗಳಿಗೆ ಕಾರಣ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆ ಪೂರ್ಣಗೊಳ್ಳದಿರುವುದೇ ಆಗಿದೆ. ಸ್ವಾತಂತ್ರ್ಯಪೂರ್ವದಿಂದಲೂ ಶಿಕ್ಷಣವನ್ನು ಸಾರ್ವತ್ರೀಕರಿಸಲು ಭಾರತ ಚಿಂತಿಸುತ್ತಿದೆ ಮತ್ತು ಕಾರ್ಯಪ್ರವೃತ್ತವಾಗಿದೆ; ಆ ಮೂಲಕ ಶತಶತಮಾನಗಳಿಂದ ಆಗಿದ್ದ ಅನ್ಯಾಯವೊಂದನ್ನು ಸರಿಪಡಿಸಲು ಪ್ರಯತ್ನಿಸುತ್ತಿದೆ. ಸ್ವಾತಂತ್ರ್ಯಾನಂತರದಲ್ಲಿ ಇದು ತೀವ್ರಗೊಂಡು ಅನೇಕ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಕಡ್ಡಾಯ ಶಿಕ್ಷಣದ ನೀತಿನಿಯಮಗಳು ಜಾರಿಯಲ್ಲಿವೆ. ಇತ್ತೀಚೆಗೆ ಜಾರಿಗೆ ಬಂದ ಶಿಕ್ಷಣ ಹಕ್ಕು ಕಾಯಿದೆ ಈ ದಿಶೆಯಲ್ಲಿ ಒಂದು ಮಹತ್ವದ ಹೆಜ್ಜೆ. ಇಷ್ಟಾಗಿಯೂ ಯಾಕೆ ಇನ್ನೂ ನಮ್ಮ ಹಳ್ಳಿಗಳಲ್ಲಿ ಅನಕ್ಷರತೆ, ಅವಿದ್ಯೆ ನೆಲೆಗೊಂಡಿದೆ ಎಂಬುದು ಯೋಚನೆ ಮಾಡಬೇಕಾದ ಸಂಗತಿ. ಓದಿಸಿಕೊಳ್ಳುವ, ನೋಡಿಕೊಳ್ಳುವ

ಮತ್ತು ಕೇಳಸಿಗುವ ಮಾಧ್ಯಮಗಳು ಬಿರುಸುಗೊಂಡಿರುವ ಈ ಕಾಲದಲ್ಲೂ, ಇವು ಅಷ್ಟು ಪರಿಣಾಮಕಾರಿಯಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳದಿರುವುದರಿಂದಲೋ ಏನೊ, ನಮ್ಮ ಹಳ್ಳಿಗಳು ಇನ್ನೂ ತಣ್ಣಗೆ ಬದುಕುತ್ತಿವೆ. ಅಕ್ಷರವಿದ್ಯೆ ಅವೈಚಾರಿಕತೆ ಮತ್ತು ಅವಿದ್ಯೆಯನ್ನು ಸಂಪೂರ್ಣವಾಗಿ ತೊಡೆದುಹಾಕುತ್ತದೆಂಬ ನಂಬಿಕೆಯನ್ನು ಹೊಂದಲಾಗದಿರುವುದು ಮರ್ಮಘಾತಕವಾದ ಸಂಗತಿಯೇ ಸರಿ. ಅನುಕೂಲಸ್ಥರು, ವಿದ್ಯಾವಂತರು, ಯುವಕರು ಹಳ್ಳಿಗಳನ್ನು ತೊರೆದು ನಗರಗಳಲ್ಲಿ ವಾಸಿಸುವ ಪ್ರವೃತ್ತಿ ಎಂದೋ ಕಾಲಿರಿಸಿ ಆಗಿದೆ; ಕೂಲಿಕಾರ ಜನ ಕೂಡ ಹೆಚ್ಚು ಕೂಲಿ ಸಿಗುವ ಕೆಲಸಗಳನ್ನು ಅರಸಿ ನಗರಗಳಿಗೆ ವಲಸೆಹೋಗುತ್ತಿದ್ದಾರೆ. ಗ್ರಾಮೀಣರು ನಗರವಾಸಿಗಳೆನ್ನದೆ ಜನ ತಮ್ಮ ನೆಲಮೂಲ ಸಂಸ್ಕೃತಿಯ ಬಗೆಗೆ ಅಜ್ಞರಾಗಿದ್ದಾರೆ; ತಮ್ಮದಲ್ಲದ ಆಚಾರ, ವಿಚಾರ, ಕಂದಾಚಾರಗಳಿಗೆ ಮಾರುಹೋಗುತ್ತಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳು, ವಾಚನ ಸಾಮಗ್ರಿಗಳು ಇದನ್ನು ತೀವ್ರಗೊಳಿಸುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿವೆ. ಗ್ರಾಮದೇವತೆಗಳು ಹಾಗೂ ಮನೆದೇವರುಗಳ ಹಬ್ಬಗಳ ಖರ್ಚು ಸ್ವಲ್ಪ ತಗ್ಗಿದಂತೆ ಕಂಡರೂ ಧಾರ್ಮಿಕ ಆಚರಣೆಗಳಿಗಾಗಿ ಖರ್ಚು ಮಾಡುವುದನ್ನು ಜನ ನಿಲ್ಲಿಸಿಲ್ಲ. ಮದುವೆ, ನಾಮಕರಣ, ತಿಥಿ ಮೊದಲಾದ ಜೀವನ ಸಂಸ್ಕಾರಗಳ ಅಚರಣೆ ದುಬಾರಿಯಾಗುತ್ತಿವೆ. ದುಂದುಗಾರಿಕೆ, ಅಪವ್ಯಯ, ಅನೈತಿಕ ಮತ್ತು ಅನ್ಯಾಯದ ಸಂಪತ್ತಿನ ಸಂಗ್ರಹದ ಬುದ್ಧಿ ಸ್ವಚ್ಛಂದವಾಗುತ್ತಿದೆ. ಗ್ರಾಮಜೀವನದೊಳಗಿನ ಈ ಕ್ಷೋಭೆಗಳು ಕೊನೆಗಾಣಲು ಇನ್ನೆಷ್ಟು ಕಾಲ ಬೇಕು. ಅರಿವು, ಆತ್ಮಾವಲೋಕನ ಮತ್ತು ಸ್ವಯಂಜಾಗೃತಿ ಇಂತಹ ಎಷ್ಟೋ ಸಮಸ್ಯೆಗಳಿಗೆ ಪರಿಹಾರವಾಗಬಲ್ಲದು. ಆರೋಗ್ಯ ಮತ್ತು ಶಿಕ್ಷಣದಂತಹ ಮೂಲಭೂತ ಅಗತ್ಯವನ್ನು ಪೂರೈಸುವ ಸಲುವಾಗಿ ಶ್ರಮಿಕರನ್ನೂ ಸುಲಿಗೆ ಖಾಸಗೀ ವಲಯಗಳು ಗ್ರಾಮಗಳಲ್ಲೂ ತಲೆಯೆತ್ತುತ್ತಿವೆ. ಐನೂರು – ಆರುನೂರು ಜನ ಕಾರ್ಮಿಕರು ಕೆಲಸ ಮಾಡುವ ಕಾರ್ಖಾನೆಯ ಆವರಣದೊಳಗೆ ಒಂದು ಆರೋಗ್ಯ ಕೇಂದ್ರ ಸ್ಥಾಪನೆಯಾಗುತ್ತದೆ. ಆದರೆ, ಸಾವಿರ – ಒಂದೂವರೆ ಸಾವಿರ ಜನ ವಾಸು ಮಾಡುವ ಹಳ್ಳಿಗಳಿಗೆ ಇನ್ನೂ ಆರೋಗ್ಯ ಕೇಂದ್ರಗಳು ಬಂದಿಲ್ಲ. ಅಂತಹ ಹಳ್ಳಿಗಳಿಗೆ ಬಂದು ವೃತ್ತಿ ನಿರ್ವಹಿಸಲು ವೈದ್ಯರು ಸಿದ್ಧರಿರುವುದಿಲ್ಲ. ಹಳ್ಳಿಗಳಲ್ಲಿರುವ, ಅಳಿವಿನ ಅಂಚಿಗೆ ಸರಿಯುತ್ತಿರುವ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಬಗೆಗೆ ಗ್ರಾಮೀಣ ಜನತೆ ಜೋಪಾನವಹಿಸಬೇಕಾದ ತುರ್ತು ಈಗ ಬಹಳ ಅಗತ್ಯವಾಗಿದೆ. ಹಳ್ಳಿಗಳಲ್ಲೇ ಉಳಿದಿರುವ ವಿದ್ಯಾವಂತರಿಗೆ ಮತ್ತು ಯುವಕರಿಗೆ ಗ್ರಂಥಾಲಯ ಮತ್ತು ಕ್ರೀಡಾಂಗಣಗಳನ್ನು ಪೂರೈಸಬೇಕಾದುದೂ ಪ್ರತಿ ಹಳ್ಳಿಗಳಲ್ಲಿ ಪ್ರಮಾಣವರಿತು ಕಡ್ಡಾಯವಾಗಿ ಸಾಮೂಹಕ ಕಣಗಳನ್ನು ನಿರ್ಮಿಸಿ ಒಕ್ಕಣೆಗಾಗಿ ರಸ್ತೆಗೆ ಇಳಿಯುತ್ತಿರುವ

ರೈತಾಪಿಗಳನ್ನು ತಡೆಯಬೇಕಾದದೂ ತುರ್ತು ಅಗತ್ಯವಾಗಿದೆ. ಮನೆಗೊಂದು ಶೌಚಾಲಯ, ಹಳ್ಳಿಗೊಂದು(ಕನಿಷ್ಠ) ಸಾಮೂಹಿಕ ಶೌಚಾಲಯ ಎಂಬ ಪರಿಕ್ರಮ ಜಾರಿಯಲ್ಲಿದೆಯೋ ಇಲ್ಲವೋ ಎಂದು ತಿಳಿಯುವುದೇ ಕಷ್ಟ ಎಂಬ ಪರಿಸ್ಥಿತಿಯನ್ನು ನಮ್ಮ ಹಳ್ಳಿಗರು ಇನ್ನೂ ಹೋಗಲಾಡಿಸಿಕೊಂಡಿಲ್ಲ; ಊರ ಮುಂದಿನ ರಸ್ತೆಗಳ ಬದಿಯಲ್ಲಿ ಕುಳಿತು ಮಲವಿಸರ್ಜನೆ ಮಾಡುವುದನ್ನು ಬಿಟ್ಟಿಲ್ಲ. ತಮ್ಮನ್ನು ಸಂದರ್ಶಿಸಲು ಇಂಗ್ಲೆಂಡಿನಿಂದ ಬಂದ ಯುವಕನೊಬ್ಬನಿಗೆ ಭಾರತದ ಹಳ್ಳಿಯೊಂದರ ಸ್ಥಿತಿಯನ್ನು ತೋರಿಸುತ್ತಾ ಗಾಂಧೀಜಿ ರಸ್ತೆ ಬದಿಯ ಮಲವನ್ನು ತಮ್ಮ ಕೈಯಾರೆ ತೆಗೆದು ದೂರ ಹಾಕಿ ಮಣ್ಣು ಮುಚ್ಚಿದ ಹೃದಯ ವಿದ್ರಾವಕ ದೃಷ್ಯ ನಮ್ಮೆದುರಿಗೆ ಏಕೆ ನಿಲ್ಲುವುದಿಲ್ಲ? ನಮಗಾಗಿ ನಾವು ಕಣ್ಣೀರು ಸುರಿಸುವುದಲ್ಲ, ನಾಚಿಕೊಳ್ಳುವುದಿಲ್ಲ ಏಕೆ? ನಮ್ಮ ಹೆತ್ತಮ್ಮನನ್ನು ಬಯಲಿಗೆ ಕಳಿಸುವ ಧಾರುಣ ಸ್ಥಿತಿಯಲ್ಲಿ ನಾವಿನ್ನೂ ಯಾಕಿದ್ದೇವೆ? ಮತದಾನದ ಶೇಖಡವಾರು ಪ್ರಮಾಣ ನಗರಗಳಲ್ಲಿ ಕಡಿಮೆಯೂ ಹಳ್ಳಿಗಳಲ್ಲಿ ಹೆಚ್ಚೂ ಇರುವುದ ಒಂದು ವಿಪರ್ಯಾಸದ ಸಂಗತಿ. ಸಮಕಾಲೀನ ರಾಜಕಾರಣದ ಬಗೆಗಿನ ಋಣಾತ್ಮಕ ಜಾಗೃತಿಯನ್ನು ಇದು ಸೂಚಿಸುತ್ತದೆ. ಪ್ರಜಾಸತ್ತೆಯ ಬಗೆಗಿನ ಅವಜ್ಞೆ ಒಂದೆಡೆಯಾದರೆ, ಇನ್ನೊಂದೆಡೆ ಸ್ವಾರ್ಥ, ಸ್ವಜನ ಪಕ್ಷಪಾತ ಎದ್ದು ಕಾಣುತ್ತದೆ. ಚುನಾವಣಾ ಭ್ರಷ್ಟಾಚಾರ ಇಕ್ಕೆಡೆಯೂ ಇದೆ. ಈ ವಿದ್ಯಮಾನ ಪ್ರಜಾಸತ್ತೆಯ ದುರುಪಯೋಗ ಮತ್ತು ದುರಂತದ ಫಲ. ಪ್ರಜಾಸತ್ತೆ, ಜಾತ್ಯಾತೀತತೆ ಮತ್ತು ಸಮಾನತೆ – ಇವು ಸ್ವತಂತ್ರ ಭಾರತ ನಮಗಿತ್ತ ರಾಷ್ಟ್ರಜೀವನ ಮೌಲ್ಯಗಳು. ನಗರ–ಹಳ್ಳಿ ಎಂಬ ಭೇದವಿಲ್ಲದೆ ಎಲ್ಲಿಯವರೆಗೆ ಇವು ಸಾರ್ಥಕಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಭಾರತಕ್ಕೆ ಏಳಿಗೆಯೆಂಬುದಿರುವುದಿಲ್ಲ; ಜಾಗತಿಕ ನೆಲೆಯಲ್ಲಿ ತಲೆಯೆತ್ತಿ ನಿಲ್ಲುವ ನೈತಿಕ ಸ್ಥೈರ್ಯವಿರುವುದಿಲ್ಲ.

**(ದಿನಾಂಕ: ೦೫–೦೭–೨೦೧೪ರ ಶನಿವಾರ ಪಾಂಡವಪುರ ತಾಲ್ಲೂಕು ೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದ ಆಯ್ದ ಭಾಗ)**

# ಸತ್ಯಾಗ್ರಹ ಅಹಿಂಸೆಯ ಹೊಸ ಅಂಕ

– ಕೋಡಿಬೆಟ್ಟು ರಾಜಲಕ್ಷ್ಮಿ

ತಮಿಳುನಾಡಿನ ಪೂರ್ವ ಕಡಲಿನ ಅಂಚಿನಲ್ಲಿ ಇಡ್ಂದಕರೈ ಎನ್ನುವ ಹಳ್ಳಿಯಿದೆ. ಅಲ್ಲೊಂದು ಇಗರ್ಜಿ – 'ಅವರ್ ಲೇಡಿ ಆಫ್ ಲೂರ್ಡ್ಸ್ ಪ್ಯಾರಿಶ್ ಚರ್ಚ್' ಎಂದು ಅದರ ಹೆಸರು. ಅದರ ಮುಂದೆ ಸುಮಾರು ಎರಡು ಸಾವಿರ ಜನರು ಕುಳಿತುಕೊಳ್ಳಬಹುದಾದಷ್ಟು ವಿಸ್ತಾರವಾದ ತೆಂಗಿನಗರಿಯ ಚಪ್ಪರ. ಆ ಚಪ್ಪರದ ಕೆಳಗೆ ಒಂದಷ್ಟು ಜನ. ಬೆಳಗಿನಿಂದ ಸಂಜೆಯವರೆಗೆ ಅವರದು ಉಪವಾಸ ಸತ್ಯಾಗ್ರಹ. ನಾನು ಅಲ್ಲಿಗೆ ಹೋದಾಗ ಅವರ ಉಪವಾಸ ಸತ್ಯಾಗ್ರಹಕ್ಕೆ 1075ನೇ ದಿನ. ಅಂದಹಾಗೆ, ಈ ಉಪವಾಸ ಆರಂಭವಾದುದು ಮೂರು ವರ್ಷಗಳ ಹಿಂದೆ – 2011 ರ ಆಗಸ್ಟ್ 16ರಂದು. ಈ ಉಪವಾಸದ ಹಿಂದಿರುವುದು ಕೂಡುಂಕುಳಂ ಅಣುವಿದ್ಯುತ್ ಸ್ಥಾವರದ ವಿರೋಧ.

ಕೂಡಂಕುಳಂ ಅಣುವಿದ್ಯುತ್ ಸ್ಥಾವರ ವಿರೋಧಿ ಹೋರಾಟಕ್ಕೆ ಎರಡು ದಶಕಕ್ಕೂ ಹೆಚ್ಚಿನ ಇತಿಹಾಸವಿದೆ. ಸ್ವಾತಂತ್ರ್ಯ ಹೋರಾಟದ ಬಳಿಕ ನಡೆದ ಅತೀ ದೀರ್ಘವಾದ ಅಹಿಂಸಾ ಹೋರಾಟಗಳ ಪೈಕಿ ಇದೂ ಒಂದು. ಅಣುಶಕ್ತಿಯನ್ನು ವಿರೋಧಿಸುವ ಹತ್ತಾರು ಸತ್ಯಾಗ್ರಹ, ಮುಷ್ಕರಗಳು ದೇಶದ ವಿವಿಧೆಡೆಗಳಲ್ಲಿ ನಡೆದಿದ್ದರೂ ಕೂಡಂಕುಳಂ ಚಳುವಳಿಯಷ್ಟು ದೀರ್ಘವಾದ ಚಳುವಳಿಗಳು ಕಡಿಮೆ. ಇದು ಇಡೀ ದೇಶದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿರುವ ಹೋರಾಟ. ಇಂತಹ ದೀರ್ಘ ಚಳುವಳಿಗೆ ಸಾಕ್ಷಿಯಾಗಿರುವ ಕೂಡುಂಕುಳಂ ಗ್ರಾಮದ ಪಕ್ಕದ ಹಳ್ಳಿಯೇ ಇಡ್ಂದಕರೈ.

ಉಪವಾಸ ಕೂರುವ ಚಳುವಳಿಗೆ ಆಶ್ರಯದಾಣವಾಗಿದ್ದ ತೆಂಗಿನಗರಿಯ ಚಪ್ಪರವನ್ನು ಕಳೆದ ಮೂರು ವರ್ಷಗಳಲ್ಲಿ ಹೋರಾಟಗಾರರು ಶ್ರಮದಾನದ ಮೂಲಕ ನಾಲ್ಕಾರು ಬಾರಿ ಮರುನಿರ್ಮಿಸಿದ್ದಾರೆ. ಈ ಚಪ್ಪರ ಅವರ ಒಗ್ಗಟ್ಟಿನ ರಾಟದ

ಸೋಲುಗೆಲುವಿನ ರೂಪಕದಂತಿದೆ. ಚಳುವಳಿಯಲ್ಲಿ ಹುತಾತ್ಮರಾದ ನಾಲ್ವರ ಚಿತ್ರಗಳನ್ನು ಅದಲ್ಲಿ ತೂಗುಹಾಕಲಾಗಿದೆ.

**ಚಳುವಳಿಗೆ ಹಲವು ತೊರೆಗಳು:**

ಮಲೇಶ್ಯಾಸ ಬಾರ್ಬರ್‌ಶಿಪ್ ಮ್ಯಾನೇಜ್‌ಮೆಂಟ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ ಮಿಲ್ಟನ್‌ಗೆ ಕೈತುಂಬಾ ಸಂಬಳ ಸಿಗುತ್ತಿತ್ತು. ಊರಿನಲ್ಲಿ ಅವರು ಅನುಕೂಲಸ್ಥರೆಂದು ಗುರುತಿಸಿಕೊಂಡಿದ್ದರು. ಆದರೆ ಅಣು ವಿದ್ಯುತ್ ಸ್ಥಾವರ ತಮ್ಮ ಊರನ್ನು ನಾಶ ಮಾಡುತ್ತಿದೆ ಎನ್ನುವುದು ಗೊತ್ತಾದಾಗ ಮಿಲ್ಟನ್ ಕೆಲಸಬಿಟ್ಟು ಪ್ರತಿಭಟನೆಯಲ್ಲಿ ಸೇರಿಕೊಂಡರು. ಕೂಡಿಟ್ಟ ಹಣವನ್ನೆಲ್ಲ ಚಳುವಳಿಗೆ ಸುರಿದರು. ಈಗ ಜೀವನೋಪಾಯಕ್ಕಾಗಿ ಅವರು ಸಣ್ಣಪುಟ್ಟ ಕೆಲಸಗಳ ಮೊರೆ ಹೋಗಬೇಕಿದೆ. ಆ ಬಗ್ಗೆ ಮಿಲ್ಟನ್ ಅವರಿಗೆ ಬೇಸರವಿಲ್ಲ. 'ನಮ್ಮೂರಿಗೆ ಯರು ಬೇಕಾದರೂ ಬಂದು ಏನು ಬೇಕಾದರೂ ಮಾಡಬಹುದು; ನಮ್ಮ ತುತ್ತನ್ನು ಪ್ರತಿಭಟನೆಯೇ ಇಲ್ಲದೆ ಕಸಿದುಕೊಳ್ಳಬಹುದು ಎಂಬ ಆಡಳಿತದ ಉಡಾಫೆಗೆ ಈ ಚಳುವಳಿ ಸಮರ್ಥವಾದ ಉತ್ತರವನ್ನು ಕೊಟ್ಟಿದೆ' ಎಂದವರು ಭಾವಾವೇಶದಿಂದ ಹೇಳುತ್ತಾರೆ.

**<u>ಹೋರಾಟದ ಹಿಂದಣ ದಾರಿಯನ್ನು ಮಿಲ್ಟನ್ ವಿವರಿಸುತ್ತಾರೆ:</u>**

"ರಷ್ಯಾ ಜೊತೆಗಿನ ಒಪ್ಪಂದದ ಪ್ರಕಾರ, ಕೂಡುಂಕುಳಂ ಗ್ರಾಮದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪನೆಯ ವಿಚಾರವನ್ನು ಸರ್ಕಾರ ಪ್ರಸ್ತಾಪಿಸಿದ್ದು 1986ರಲ್ಲಿ. ಆಗ ಹೆಚ್ಚಿನ ಗ್ರಾಮಸ್ಥರು ಸ್ಥಾವರಕ್ಕಾಗಿ ಸ್ವ ಇಚ್ಛೆಯಿಂದ ಜಾಗ ಬಿಟ್ಟುಕೊಟ್ಟಿದ್ದರು. ಪ್ರತಿಭಟನೆ ನಡೆಯುತ್ತಿದ್ದರೂ ಅದರ ಕಾವು ಏರಲಿಲ್ಲ. ಆದರೆ ಅಲ್ಲಿನ ಚರ್ಚ್‌ಗಳ ಫಾದರ್‌ಗಳು ಅಣುವಿದ್ಯುತ್ ತಂದೊಡ್ಡಬಹುದಾದ ಸಮಸ್ಯೆಯು ಬಗ್ಗೆ ಹೇಳಲಾರಂಭಿಸಿದಾಗ ಜನರು ಚಿಂತೆಗೆ ಬಿದ್ದರು.

ಸೋವಿಯತ್ ರಷ್ಯಾ ಸರ್ಕಾರ ಪತನದೊಂದಿಗೆ ವಿದ್ಯುತ್ ಸ್ಥಾವರದ ಪ್ರಸ್ತಾಪವೂ ತಣ್ಣಗಾಯಿತು ಎಂದುಕೊಂಡರೆ, ಎಚ್.ಡಿ.ದೇವೇಗೌಡರು ಪ್ರಧಾನಿಯಾದಾಗ ರಷ್ಯಾದ ಜತೆಗಿನ ಒಪ್ಪಂದಕ್ಕೆ ಮರು ಜೀವ ತುಂಬಿದರು. 2001ರಲ್ಲಿ ಕಾಮಗಾರಿ ಮತ್ತೆ ಶುರುವಾಯಿತು. ಪ್ರತಿಭಟನೆಗಳು ನಡೆಯುತ್ತಲೇ ಇದ್ದವು. ಆದರೆ ಜಪಾನಿನ ಫುಕುಷಿಮಾ ದುರಂತದ ಸುದ್ದಿ ಕೇಳುತ್ತಲೇ ಇಡೀ ಊರೇ ಅಣುವಿದ್ಯುತ್ ಸ್ಥಾವರದ ಭೀಕರತೆಯನ್ನು ಇಲ್ಪಿಸಿಕೊಂಡು ಬೆಚ್ಚಿಬಿದ್ದಿತು. ಪ್ರತಿಭಟನೆ ಬೃಹತ್ ಚಳುವಳಿಯ ರೂಪ ತಳೆದಿದ್ದೇ ಆಗ.

2010ನೇ ಇಸವಿ ಒಂದು ರಾತ್ರಿ ಕೂಡಂಕುಳಂ ಸ್ಥಾವರದಿಂದ ಭಾರೀ ಸದ್ದು ಕೇಳಿಸಿತು. ಮಕ್ಕಳು ಬೆಚ್ಚಿಬಿದ್ದು ತೀವ್ರ ಜ್ವರಕ್ಕೆ ತುತ್ತಾದರು. ಆನರ ಎದೆ ನಡುಗಿ, ಕಿವಿಯ ಸಾಮರ್ಥ್ಯ ಕುಗ್ಗುವಂಥ ಶಬ್ಧವದು. ಈ ಸದ್ದು ಆಸುಪಾಸಿನ ಹಳ್ಳಿಗಳಾದ ಚೆಟ್ಟಿಕುಳಂ, ವೈರವಿಕಿನಾರು, ರಾಧಾಪುರಂ, ಪಳಗು, ಇಡಂದಕರೈ

ಹಳ್ಳಿಗಳ ಜನರ ಎದೆನಡುಗಿಸಿತು. ಅಂದು ಸ್ಥಾವರ ವಿರೋಧಿಸಲು ಮನೆಯಿಂದ ಹೊರಬಿದ್ದ ಜನತೆ ಇಂದಿಗೂ ವಿಶ್ರಾಂತಿ ಪಡೆದಿಲ್ಲ.

**ಬಲಪ್ರಯೋಗಕ್ಕೆ ಮಣಿಯದ ಜನಶಕ್ತಿ:**

ಕೂಡಂಕುಳಂನಲ್ಲಿ ತೆಂಗಿನ ಕಾಯಿ ವ್ಯಾಪಾರ ಮಾಡುವ ಗಣೇಶ್ ಚಳುವಳಿಯಲ್ಲಿ ಭಾಗವಹಿಸಿ ಎಂಟು ತಿಂಗಳು ಜೈಲಿನಲ್ಲಿ ಕಳೆದು ಬಂದವರು. ಹೋರಾಟದ ಕಾವಿನ ದಿನಗಳನ್ನು ಅವರು ನೆನಪಿಸಿಕೊಳ್ಳುತ್ತಾರೆ: "127 ಮಂದಿ ನಿರಂತರ 12 ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿತು. ಪ್ರತಿಭಟನಕಾರರ ತಂಡ ಮುಖ್ಯಮಂತ್ರಿಗಳನ್ನು ಹಾಗೂ ಪ್ರಧಾನಿಯನ್ನು ಭೇಟಿ ಮಾಡಿ ಮಾತುಕತೆಯನ್ನೂ ನಡೆಸಿತು. ಆದರೆ, ಅಣುಸ್ಥಾವರ ಸ್ಥಗಿತಗೊಳಿಸಬೇಕು ಎಂಬ ಬೇಡಿಕೆಯನ್ನು ಅಂದಿನ ಪ್ರಧಾನಿ ಮನಮೋಹನಸಿಂಗ್ ಮನ್ನಿಸಲಿಲ್ಲ. ಇದು ದೇಶದ ಅಗತ್ಯ ಎಂದು ಮನವರಿಕೆ ಮಾಡಿಕೊಡಲು ಯತ್ನಿಸಿದರು. ಉಪವಾಸ ಸತ್ಯಾಗ್ರಹ ಮತ್ತೆ ಆರಂಭವಾಯಿತು. ಚಳುವಳಿ 15ನೇ ದಿನಕ್ಕೆ ಕಾಲಿಟ್ಟರೂ ಸರ್ಕಾರದ ಕಡೆಯಿಂದ ಪ್ರತಿಕ್ರಿಯೆಯೇ ಇಲ್ಲ. ಆಗ ಸುಮಾರು 30 ಸಾವಿರ ಜನರು ಒಟ್ಟಾಗಿ ಕೂಡುಂಕುಳಂ ಗೇಟ್‌ನತ್ತ ತಲುಪಿ, ಸ್ಥಾವರ ಮುಚ್ಚುವಂತೆ ಆಗ್ರಹಿಸಿದರು. ಪ್ರತಿಭಟನಾಕಾರರು ಸ್ಥಾವರದ ಸಿಬ್ಬಂದಿಗೆ ಒಳ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಮೂರು ಹಗಲು, ಎರಡು ರಾತ್ರಿ ಗೇಟ್ ಮುಂದೆಯೇ ಬೀಡುಬಿಟ್ಟಿದ್ದ ಸಾವಿರಾರು ಜನರ ಪ್ರತಿಭಟನೆಯನ್ನು ಕಂಡು ಸರ್ಕಾರ ಬೆಚ್ಚಿಬಿದ್ದಿತ್ತು. ಕೂಡುಂಕುಳಂ ಸ್ಥಾವರ ಮುಚ್ಚುವುದಾಗಿ ಜಿಲ್ಲಾಡಳಿತ ಹೇಳಿತು. ಮಾತುಕತೆ ವೇಳೆ, 120 ಮಂದಿ ಸಿಬ್ಬಂದಿ ಮಾತ್ರ ನಿರ್ವಹಣೆಗಾಗಿ ಸ್ಥಾವರದೊಳಗೆ ಹೋಗಬಹುದು ಎಂದು ತೀರ್ಮಾನಿಸಲಾಯಿತು. ಆರು ತಿಂಗಳ ಕಾಲ ಸ್ಥಾವರದ ಕೆಲಸ ಸ್ಥಗಿತಗೊಂಡಿತು. ಆದರೆ, ಸ್ಥಾವರದೊಳಗೆ ಗುಪ್ತವಾಗಿ ಕೆಲಸ ನಡೆಯುತ್ತಿದೆ ಎಂಬ ಸುದ್ದಿ ಕೇಳಿ ಪ್ರತಿಭಟನೆ ಮತ್ತೆ ಶುರುವಾಯಿತು. ಸ್ಥಾವರವನ್ನು ವಿರೋಧಿಸುವುದಾಗಿ ಹೇಳುತ್ತಲೇ ಬಂದಿದ್ದ ಮುಖ್ಯಮಂತ್ರಿ ಜಯಲಲಿತಾ, ಪ್ರತಿಭಟನಾಕಾರರನ್ನೇ ಬಂಧಿಸಲು ಆದೇಶಿಸಿದರು. ಇದರಿಂದ ಇಡೀ ತಿರುನಲ್ವೇಲಿ ಜಿಲ್ಲೆಯ ಜನ ರೊಚ್ಚಿಗೆದ್ದರು. ಕೂಟಪ್ಪುಳಿ, ಪೆರುಮೊನಾಲ್, ಇಡ್‌ಂದಕರೈ, ಕೂಟಂಕುಳಿ, ಉವರಿ, ಕೂಡುತಳಿ, ಕೂಟಪ್ಪನಾಯಿ ಹಳ್ಳಿಯ ಜನರೂ ಅಹಿಂಸಾ ವಿಧಾನದ ಪ್ರತಿಭಟನೆಯನ್ನು ಸೇರಿಕೊಂಡರು. 15 ಸಾವಿರ ಜನರು ಸ್ಥಾವರದ ಗೇಟ್ ತಲುಪುವಷ್ಟರಲ್ಲಿ, ಅಲ್ಲಿ 10 ಸಾವಿರಕ್ಕೂ ಹೆಚ್ಚು ಪೋಲೀಸ್ ಪಡೆ ಗೋಡೆಯಂತೆ ನಿಂತಿತ್ತು. ಲಾಠಿ ಚಾರ್ಜ್ ನಡೆಯಿತು, ಅಶ್ರುವಾಯು ಪ್ರಯೋಗ ಮಾಡಲಾಯಿತು. ಕೂಡಂಕುಳಂ ಹಳ್ಳಿಯಲ್ಲಿ ಮನೆಗಳಿಗೆ ನುಗ್ಗಿ ಪ್ರತಿಭಟನೆಯಲ್ಲಿ ಭಾಗವಹಿಸದಂತೆ ಜನರನ್ನು ಹೊಡೆದು ಬಡಿದು ಧಮಕಿ ಹಾಕುವ ಕೆಲಸವೂ ನಡೆಯಿತು.

ಸರ್ಕಾರ ಬಲಪ್ರಯೋಗಿಸಿ 205 ಜನರನ್ನು ಬಂಧಿಸಿ ಒಂದೂವರೆ ತಿಂಗಳು

ಜೈಲಿನಲ್ಲಿ ಹಾಕಿತು. ಆದರೂ ಇತ್ತ ಉಪವಾಸ ಸತ್ಯಾಗ್ರಹ ಮುಂದುವರೆದೇ ಇತ್ತು. ಆ ಸರಣಿ ಉಪವಾಸ ಸತ್ಯಾಗ್ರಹ ಇಂದಿಗೂ ಮುಂದುವರೆದಿದೆ.

**ಹೋರಾಟಕ್ಕಾಗಿ ಒಗ್ಗಟ್ಟು:**

ಕೂಡುಂಕುಳಂನಲ್ಲಿ ಹೆಚ್ಚಿನವರು ನಾಡಾರ್ ಸಮುದಾಯಕ್ಕೆ ಸೇರಿದ ವ್ಯಾಪಾರಸ್ಥರು. ಇಡ್‌ಂದಕರ್ರೈಯಲ್ಲಿ ಮೊಗವೀರ ರೋಮನ್ ಕ್ಯಾಥೋಲಿಕ್ ಜನರು ಹೆಚ್ಚಿದ್ದಾರೆ. ಹಿಂದೆಲ್ಲ ವ್ಯಾಪಾರ ವ್ಯವಹಾರದ ಉದ್ದೇಶಕ್ಕೆ ಪರಸ್ಪರ ಕದಾಡುತ್ತಿದ್ದ ಎರಡು ಹಳ್ಳಿಯ ಜನರು, ಸ್ಥಾವರದ ಕರಣದಿಂದಾಗಿ ಒಂದಾಗಿದ್ದಾರೆ. ಇಡ್‌ಂದಕರ್ರೈ ಜನರು ಕೂಡಂಕುಳಂ ಗೇಟ್‌ಬಳಿ ಸತ್ಯಾಗ್ರಹ ನಡೆಸುತ್ತಿದ್ದಾಗ ಲಾಠಿ ಚಾರ್ಜ್ ನಡೆದ ಸುದ್ದಿಕೇಳುತ್ತಲೇ ಕೂಡಂಕುಳಂ ಜನತೆ ಸ್ಥಾವರದ ಕಾವಲು ಸಿಬ್ಬಂದಿಯ ಮೇಲೆ ಮುಗಿಬಿದ್ದ ಘಟನೆಯನ್ನು ಮೊಗವೀರರು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. 'ನಮ್ಮನ್ನು ದಮನ ಮಾಡಲು ಬಂದ ಪೋಲೀಸರ ಗಮನ ಬೇರೆಡೆ ಸೆಳೆಯದೇ ಇದ್ದಿದ್ದರೆ ಆ ರಾತ್ರಿ ಹಳ್ಳಿಯಲ್ಲಿ ಭಾರೀ ಅನಾಹುತವೇ ನಡೆಯುತ್ತಿತ್ತು' ಎಂದು ನೆನಪಿಸಿಕೊಳ್ಳುವುದನ್ನು ಮಿಲ್ಟನ್ ಮರೆಯುವುದಿಲ್ಲ.

**ಚಳುವಳಿಯ ನವೋದಯ!**

'ಹೌದು, ಹೋರಾಟವನ್ನು ದಮನಿಸುವ ಪ್ರಯತ್ನವೂ ಜನರನ್ನು ಒಂದು ಮಾಡುತ್ತದೆ' ಎಂದು ಮಾತು ಶುರು ಮಾಡುತ್ತಾರೆ ಕೂಡುಂಕುಳಂ ಹೋರಾಟದ ಮುಖಂಡ ಡಾ.ಎಸ್.ಪಿ.ಉದಯ್‌ಕುಮಾರ್. ಕೂಡಂಕುಳಂ ವಿರೋಧಿಸಿ ಆರಂಭವಾದ ಹೋರಾಟಕ್ಕೆ ಕೆಲವು ವರ್ಷಗಳ ಬಳಿಕ ಸೇರಿಕೊಂಡವರು ಉದಯ್‌ಕುಮಾರ್. ಅವರು 'ಪೀಪಲ್ಸ್ ಮೂವ್‌ಮೆಂಟ್ ಎಗೇನ್‌ಸ್ಟ್ ನ್ಯೂಕ್ಲಿಯರ್ ಎನರ್ಜಿ' (ಪಿಎಂಎಎನ್‌ಇ) ಸಂಚಾಲಕರಾಗಿ ಹೋರಾಟದ ನೇತೃತ್ವ ವಹಿಸಿಕೊಂಡಿದ್ದಾರೆ. ಎನ್‌ಜಿಒಗಳ ಮೂಲಕ ಭಾರತಕ್ಕೆ ಹೊರದೇಶದ ಹಣ ಹರಿದು ಬರುತ್ತಿದೆ ಎಂಬ ಆರೋಪದ ಮೇಲೆ ಇತ್ತೀಚೆಗೆ ದೇಶಾದ್ಯಂತ ಸುದ್ದಿಮಾಡಿದ ಗುಪ್ತಚರ ವಿಭಾಗದ ವರದಿಯಲ್ಲಿ ಉದಯ್‌ಕುಮಾರ್ ಅವರ ಹೆಸರಿದೆ. ಅವರ ವಿರುದ್ಧ ದೇಶದ್ರೋಹದ ಆರೋಪದಲ್ಲಿ 20 ಕೇಸುಗಳನ್ನು ಜಡಿಯಲಾಗಿದೆ. ವಿವಿಧ ಮಾದರಿಯ ಒಟ್ಟು 380 ಕೇಸುಗಳನ್ನು ಹಾಕಲಾಗಿದೆ. 'ಅಭಿವೃದ್ಧಿಯ ಹೆಸರಿನಲ್ಲಿ ತರುತ್ತಿರುವ ಯೋಜನೆಗಳು ಜನರ ಅನ್ನವನ್ನು ಕಸಿಯುತ್ತಿದೆ. ಯೋಜನೆಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯಬೇಕು ಎಂಬುದಾಗಿ ಆಗ್ರಹಿಸಿ ಅಹಿಂಸಾ ರೀತಿಯಲ್ಲಿ ಚಳುವಳಿ ನಡೆಸಿರುವುದಕ್ಕಾಗಿ ಈ ಕೇಸುಗಳನ್ನು ನನ್ನ ಮೇಲೆ ಹಾಕಲಾಗಿದೆ...'ಎನ್ನುತ್ತಾರೆ ಅವರು.

ಗುಪ್ತಚರ ವಿಭಾಗದ ವರದಿಯಲ್ಲಿ ದೇಶದ ವಿವಿಧೆಡೆ ಸುಸ್ಥಿರ ಅಭಿವೃದ್ಧಿಯ ಪರವಾಗಿ ಕೆಲಸ ಮಾಡುವ ಕಾರ್ಯಕರ್ತರು, ಚಳುವಳಿಗಾರರ ಹೆಸರುಗಳೇ ಇವೆ.

ಹಾಗಾಗಿ ದೇಶಾದ್ಯಂತ ನಡೆಯುವ ವಿವಿಧ ಪರಿಸರ ಪರ ಚಳುವಳಿಗಾರರೆಲ್ಲರೂ ಒಂದಾಗುವ ಕಾಲ ಬಂದಿದೆ. ಅವರೆಲ್ಲರೂ ದೆಹಲಿಯಲ್ಲಿ ಸದ್ಯವೇ ಸಮಾವೇಶ ನಡೆಸಲು ನಿರ್ಧರಿಸಿದ್ದಾರೆ. ಇಂತಹ ಯೋಜನೆಗಳಿಂದ ಆಗುವ ಹಾನಿಯ ಬಗ್ಗೆ ಜನರಿಗೆ ತಿಳಿಸುವ ಕೆಲಸ ಮಾಡುವವರನ್ನೇ ಟಾರ್ಗೆಟ್ ಮಾಡಿ ಈ ವರದಿ ತಯಾರಿಸಿರುವಂತಿದೆ. ಆದ್ದರಿಂದ ಈಗ ಅಂತಹವರೆಲ್ಲ ಒಂದಾಗಿ ಪೂರ್ವಭಾವಿ ಸಮಾವೇಶಗಳನ್ನು ಆಯಾ ರಾಜ್ಯಗಳಲ್ಲಿ ನಡೆಸುತ್ತಿದ್ದಾರೆ.

ಇದೇ ವೇಳೆಗೆ ಉದಯ್‌ಕುಮಾರ್, ತನ್ನನ್ನು ದೇಶದ್ರೋಹಿ ಎಂಬಂತೆ ಬಿಂಬಿಸಿ ಗುಪ್ತಚರ ವಿಭಾಗ ತಯಾರಿಸಿರುವ ವರದಿ ಹಾಗೂ ಅದರ ಸೋರಿಕೆ ಆಗಿರುವುದನ್ನು ಪ್ರಶ್ನಿಸಿ ಚೆನ್ನೈ ಹೈಕೋರ್ಟಿನಲ್ಲಿ ದಾವೆ ಹೂಡಿದ್ದಾರೆ.

**ಪ್ರಜಾಪ್ರಭುತ್ವಕ್ಕೆ ಅಪಚಾರ**

'ಅಹಿಂಸಾ ರೀತಿಯಲ್ಲಿ ನಡೆಯುವ ಸತ್ಯಾಗ್ರಹವನ್ನು ಸರ್ಕಾರ ದಿವ್ಯನಿರ್ಲಕ್ಷದಿಂದ ನೋಡುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯಕಾರಿ. ಹಿಂಸಾಮಾರ್ಗವನ್ನು ಆಶ್ರಯಿಸುವ ನಕ್ಸಲರ ಜೊತೆ ಮಾತುಕತೆ ನಡೆಸುವ ಸರ್ಕಾರ ಅಹಿಂಸಾ ಹೋರಾಟಗಾರರ ಜೊತೆ ಏಕೆ ಮತುಕತೆ ನಡೆಸುವುದಿಲ್ಲ? ಇದರಿಂದ 'ಹಿಂಸಾಮಾರ್ಗವನ್ನು ಅನುಸರಿಸಿದರೆ ಮಾತ್ರ ಕಾರ್ಯಸಾಧನೆ ಸಾಧ್ಯ' ಎಂಬ ತಪ್ಪು ಸಂದೇಶ ಯುವಜನತೆಗೆ ರವಾನೆಯಾಗುತ್ತಿದೆ. ಅಹಿಂಸಾ ಪ್ರತಿಪಾದಕರ ಮೇಲೆ ದೇಶದ್ರೋಹದ ಕೇಸು ಹಾಕುವುದು ಮತ್ತು ಅಂತಹ ಹೋರಾಟಗಳಿಗೆ ಬೆಂಬಲ ನೀಡುವ ಯುವಜನತೆಗೆ ಪಾಸ್‌ಪೋರ್ಟ್ ನಿರಾಕರಿಸುವ ಮೂಲಕ ಸರ್ಕಾರ ಪ್ರಮಾದವನ್ನೇ ಸೃಷ್ಟಿಸಲು ಮುಂದಾಗಿದೆ ಎನ್ನುತ್ತಾರೆ' ಉದಯ್‌ಕುಮಾರ್. ವರದಿಯಲ್ಲಿ ಇರುವ ಆರೋಪಗಳ ಬಗ್ಗೆ ಉದಯ್‌ಕುಮಾರ್ ಉತ್ತರಿಸುವುದು ಹೀಗೆ: "ನಾನು ವಿದೇಶಿ ಎನ್‌ಜಿಒ ಜೊತೆ ಕೈಜೋಡಿಸಿ ಅಣುಶಕ್ತಿ ವಿರುದ್ಧ ಕೆಲಸ ಮಾಡುತ್ತಿದ್ದೇನೆ, ಅದಕ್ಕಾಗಿ ವಿದೇಶದಿಂದ ಹಣ ಬರುತ್ತಿದೆ. ಅಮೇರಿಕ ಮತ್ತು ಜಪಾನ್ ದೇಶಗಳ ಜೊತೆಗೆ ನನ್ನ ಸಂಪರ್ಕವಿದೆ ಎಂಬಂತೆ ನನ್ನನ್ನು ಚಿತ್ರಿಸಲಾಗಿದೆ. ವಾಸ್ತವವೇ ಬೇರೆ. ನಾನು 1997ರಿಂದ 2001ರವರೆಗೆ ಮಿನ್ನೆಸೋಟಾ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ರೇಸ್ ಅಂಡ್ ಪಾವರ್ಟಿ ಎಂಬ ಸಂಸ್ಥೆಯಲ್ಲಿ ಜಾನ್ ಪಾವ್ಲ್ ಎಂಬ ನಿರ್ದೇಶಕರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದೆ. 2001ರಲ್ಲಿ ನಾನು ಭಾರತಕ್ಕೆ ಮರಳಿದಾಗ, ಅತ್ತ ಜಾನ್ ಪಾವ್ಲ್ ಅವರು ಬೇರೆ ಸಂಸ್ಥೆಗೆ ಹೋದರು. ಬಳಿಕ ಕಿರ್ವಾನ್ ಇನ್‌ಸ್ಟಿಟ್ಯೂಟ್‌ನಲ್ಲಿ ಅವರು ಕೆಲಸ ಮಾಡುತ್ತಿದ್ದಾಗ ನನಗೆ ಫೆಲೋಶಿಪ್ ನೀಡಿ ಬ್ರಿಕ್ಸ್ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರ ಸ್ಥಿತಿಗತಿ ಮತ್ತು ಬಡತನ ಕುರಿತು ಸಂಶೋಧನಾತ್ಮಕ ಬರಹಗಳನ್ನು ಬರೆಯುವಂತೆ ಹೇಳಿದರು. 2011ರವರೆಗೆ ಈ ಕೆಲಸದಲ್ಲಿ ಮುಂದುವರೆದೆ. ಆದರೆ ಗುಪ್ತಚರ ವಿಭಾಗದ ವರದಿ

ಕಿರ್ವಾನೆ ಇನ್‌ಸ್ಟಿಟ್ಯೂಟ್‌ನ್ನು ಒಂದು ಎನ್‌ಜಿಒ ಎಂದು ಹೇಳಿದೆ ಮತ್ತು ಅದಕ್ಕೆ ನಾನು ಅಣುವಿರೋಧಿ ವರದಿಗಳನ್ನು ಕಳುಹಿಸುತ್ತಿದ್ದೇನೆ ಎಂದು ಉಲ್ಲೇಖಿಸಿದೆ. ಜರ್ಮನಿ ಮೂಲದ ರಾಯ್‌ನರ್ ಎಂಬವರು ಹಿಪ್ಪಿ ಮಾದರಿಯಲ್ಲಿ ಜೀವನ ಮಾಡುತ್ತ ನಾಗರಕೋವಿಲ್‌ನ ಹೋಟೆಲ್‌ನಲ್ಲಿ ತಂಗಿದ್ದರು. ಜರ್ಮನಿಯಲ್ಲಿ ಅಣುಶಕ್ತಿಯ ಬಗ್ಗೆ ಹೆಚ್ಚಿನವರಿಗೆ ವಿರೋಧವಿದೆ. ಹಾಗಾಗಿ ರಾಯ್‌ನರ್ ನನ್ನನ್ನು ಸಂಪರ್ಕಿಸಿ ಚಳುವಳಿಯಲ್ಲಿ ಸೇರಿಕೊಂಡಿದ್ದರು. 2009ರಲ್ಲಿ ದೇಶದ ವಿವಿಧೆಡೆಯಿಂದ ಅಣಿಶಕ್ತಿ ವಿರೋಧಿ ಕಾರ್ಯಕರ್ತರು ಕೂಡುಂಕುಳಂಗೆ ಬಂದು ಸತ್ಯಾಗ್ರಹವನ್ನು ಬೆಂಬಲಿಸಿದ್ದರು. ಆಗ ಅವರೆಲ್ಲ ಭಾರತದ ನಕಾಶೆಯೊಂದನ್ನು ಬಿಡಿಸಿ ತಮ್ಮೂರನ್ನು ಅದರಲ್ಲಿ ಗುರ್ತಿಸಿ ಒಗ್ಗಟ್ಟು ಪ್ರದರ್ಶಿಸಿದ್ದರು. ರಾಯ್ ಆ ನಕಾಶೆಯ ಫೋಟೋ ತೆಗೆದು ನನಗೆ ಇಮೇಲೆ ಮಾಡಿದ್ದರು. ಗುಪ್ತಚರ ವಿಭಾಗದ ಪ್ರಕಾರ ನಾನು ಇಂತಹ ನಕಾಶೆಗಳನ್ನು ವಿದೇಶಗಳಿಗೆ ಕದ್ದು ಕಳುಹಿಸಿದ್ದೇನೆ".

**ನೈತಿಕತೆಗೆ ನೂರಾರು ಪ್ರಶ್ನೆ:**

ದೇಶದ್ರೋಹದ ಆರೋಪ ಮಾಡಿರುವ ಪ್ರಭುತ್ವದ ನೈತಿಕತೆಯ ಬಗ್ಗೆ ಉದಯ್‌ಕುಮಾರ್ ಸರಳವಾದ ತರ್ಕವೊಂದನ್ನು ಮಂಡಿಸುತ್ತಾರೆ. 'ಕೂಡುಂಕುಳಂ ಹೋರಾಟಗಾರರಿಗೆ ಹಣ ಎಲ್ಲಿಂದ ಬರುತ್ತದೆ ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಆಡಳಿತ ತನ್ನದೇ ಆದ ಉತ್ತರವೊಂದನ್ನು ಸಿದ್ಧಪಡಿಸಿದೆ. ಹೋರಾಟಕ್ಕೆ ವಿದೇಶೀ ಹಣ ಬರುತ್ತದೆ ಎಂಬ ಗುಪ್ತಚರ ವರದಿಯ ಮೂಲಕ ಹೋರಾಟದ ಬಲವನ್ನು ಕುಗ್ಗಿಸುವ ಪ್ರಯತ್ನ ನಡೆಸುತ್ತಿದೆ. ಆದರೆ ಜನರಿಗೆ ಹಣ ಕೊಟ್ಟು ಎಷ್ಟು ದಿನ ಹೋರಾಟ ನಡೆಸುವುದ ಸಾಧ್ಯ? ಚುನಾವಣೆಗೆ, ಚಿಕ್ಕಪುಟ್ಟ ಕಾರ್ಯಕ್ರಮಗಳಿಗೆ ಹಣ ಕೊಡದೇ ಕೆಲಸ ಮಾಡುವುದು ರಾಜಕೀಯ ಪಕ್ಷಗಳಿಂದ ಸಾಧ್ಯವಾಗುತ್ತಿಲ್ಲ. ಅಷ್ಟರಮಟ್ಟಿಗೆ ರಾಜಕಾರಣ ಜನರ ನಂಬಿಕೆಯನ್ನು ಕಳೆದುಕೊಂಡಿದೆ. ಅದೇ ಮಾದರಿಯಲ್ಲಿ ಆಡಳಿತಶಾಹಿ ನಮ್ಮ ಹೋರಾಟವನ್ನೂ ಅಂದಾಜು ಮಾಡುತ್ತಿದೆ. ಅಣುವಿದ್ಯುತ್ ಸ್ಥಾವರಕ್ಕೆ ಸಮುದ್ರದ ನೀರನ್ನು ಬಳಸಿ, ಬಳಿಕ ಬಿಸಿಯಾದ ನೀರನ್ನು ಸಮುದ್ರಕ್ಕೆ ಬಿಡುವ ಪ್ರಕ್ರಿಯೆ ನೇರವಾಗಿ ಇಡ್‌ಂದಕರೈ ಹಳ್ಳಿಯ ಮೀನುಗಾರರ ಬದುಕನ್ನು ಕಸಿಯುತ್ತದೆ. ಆದ್ದರಿಂದ ಹೋರಾಟ ಮಾಡದೇ ಬೇರೆ ಯಾವ ದಾರಿಯೂ ಅವರ ಮುಂದಿಲ್ಲ. ಜಾತಿ, ಧರ್ಮ, ಎಡ, ಬಲ ಪಂಥಗಳು ಎಂಬ ಯಾವುದೇ ಭಿನ್ನಾಭಿಪ್ರಾಯ ಇಲ್ಲದೇ ನಡೆಯುತ್ತಿರುವ ಈ ಹೋರಾಟವನ್ನು ಕಂಡು ಸರ್ಕಾರ ವಾಸ್ತವವನ್ನು ಅರ್ಥ ಮಾಟಿಕೊಳ್ಳುವ ಪ್ರಯತ್ನ ಮಾಡಬೇಕು. ಅದರ ಬದಲಾಗಿ ದೇಶದ್ರೋಹದ ಪ್ರಕರಣಗಳನ್ನು ಹಾಕಿ ದೇಶದ ಕಾನೂನನ್ನೇ ಅಪಹಾಸ್ಯ ಮಾಡಬಾರದು.

**ಪ್ರತಿಭಟಿಸುವ ಹಕ್ಕಿಲ್ಲವೇ..**

ಸಮಾಜ ಹಣವನ್ನು ಹಿಂಬಾಲಿಸಿದ ಓಟದಲ್ಲಿ ಮುಳುಗಿದೆ. ಆದ್ದರಿಂದ ಸಮಾಜ ಸೇವೆ, ಜನಪರ ಕಾಳಜಿ ಎಂಬ ಪರಿಕಲ್ಪನೆಗಳನ್ನು ಸಂಶಯದಿಂದ ನೋಡುವಂತಾಗಿದೆ ಎನ್ನುವುದು ಉದಯ್‌ಕುಮಾರ್ ಅವರ ಬೇಸರ. ಬ್ರಿಟೀಷರ ಕಾಲದಲ್ಲಿ ಒಂದು ಈಸ್ಟ್ ಇಂಡಿಯಾ ಕಂಪೆನಿ ಇತ್ತು. ಇಂದು ಹತ್ತಾರು ವಿದೇಶಿ ಕಂಪೆನಿಗಳ ಕೈಯಲ್ಲಿ ನಮ್ಮ ಆಡಳಿತ ಸಿಕ್ಕಿಹಾಕಿಕೊಂಡಿದೆ ಎನ್ನುತ್ತಾರೆ. ನಮ್ಮಲ್ಲಿ ಅಧಿಕಾರವುಳ್ಳವರು ಕಮಿಶನ್, ಸ್ವಾರ್ಥಕ್ಕಾಗಿ ಯೋಜನೆಗಳನ್ನು ವಿಮರ್ಶಿಸದೇ ರೂಪಿಸುತ್ತಾರೆ. ಭಾರತೀಯರ ಜೀವಕ್ಕೆ ಬೆಲೆಯಿದೆ, ಭಾರತ ಸ್ವಾವಲಂಬಿಯಾಗಿ ಬದುಕಬಹುದು ಎನ್ನವುದನ್ನು ರಾಜಕಾರಣಿಗಳು ಮರೆತೇ ಬಿಟ್ಟಿದ್ದಾರೆ. ಪ್ರಧಾನಿ, ಮುಖ್ಯಮಂತ್ರಿಗಳು ಒಂದು ಊರಿಗೆ ಬರಲಿರುವ ಯೋಜನೆಯ ಬಗ್ಗೆ ಸರ್ಕಾರಿ ಮಾಧ್ಯಮಗಳಲ್ಲಾದರೂ ಯಾಕೆ ವಿವರಿಸಿ ಉಪನ್ಯಾಸ ನೀಡುವುದಿಲ್ಲ? ನಾವು ಆರಿಸಿ ಕಳುಹಿಸಿದ ಜನರು ನಮ್ಮೂರಿಗೆ ಮಹಾಮಾರಿಗಳನ್ನೇ ತಂದು ಹಾಕುವಾಗ ಅದರ ವಿರುದ್ಧ ಅಹಿಂಸಾ ರೀತಿಯಲ್ಲಿ ಪ್ರತಿಭಟನೆ ನಡೆಸುವ ಹಕ್ಕೂ ಇಲ್ಲವೇ ಎಂದವರು ನೋವಿನಿಂದ ಪ್ರಶ್ನಿಸುತ್ತಾರೆ.

ಪ್ರಜಾಪ್ರಭುತ್ವದ ಪ್ರಮುಖ ಅಡಿಗಲ್ಲು ಅಹಿಂಸೆ. ಪ್ರಜಾಪ್ರಭುತ್ತವದ ಮೂಲಕವೇ ಆಯ್ಕೆಯಾಗುವ ಪ್ರತಿನಿಧಿಗಳು ಅಹಿಂಸೆಯನ್ನು ನಿರ್ಲಕ್ಷಿಸುತ್ತಿರುವುದು ಅತ್ಯಂತ ಅಪಾಯಕಾರಿ' ಎಂದು ಬಣ್ಣಿಸುವ ಉದಯ್‌ಕುಮಾರ್, 'ವ್ಯಕ್ತಿ ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ರೂಪಿಸುವ ಅಹಿಂಸೆ ಎಂಬ ಆಯುಧದ ಮೂಲಕವೇ ಸ್ವಾತಂತ್ರ್ಯ ಪಡೆದ ಭಾರತಕ್ಕೆ ವಿಶ್ವಮನ್ನಣೆ ಇದೆ. ಶಾಂತಿಯ ಮೂಲ ಸ್ರೋತವಾದ ಅಹಿಂಸೆಯ ಬಗ್ಗೆ ಭಾರತ ಜಗತ್ತಿಗೇ ಬೋಧಿಸುವ ಸ್ಥಾನದಲ್ಲಿದೆ ಎಂದು ನಾವು ಹೆಮ್ಮೆಪಡುತ್ತಿದ್ದೆವು. ಆದರೆ ಭಾರತದೊಳಗೆ ಅಹಿಂಸೆ ಎಂಬ ಆಯುಧಕ್ಕೆ ಈಗ ತುಕ್ಕು ಹಿಡಿಯುತ್ತಿದೆಯೇ? ಎಂದು ಪ್ರಶ್ನಿಸುತ್ತಾರೆ.

ಕೂಡುಂಕುಳಂ ಜನರ ಹೋರಾಟಕ್ಕೆ ಸದ್ಯಕ್ಕಂತೂ ಫಲಿತಾಂಶ ನಿರೀಕ್ಷಿಸುವುದು ಕಷ್ಟ. ಇಂದಲ್ಲ ನಾಳೆ ತಮ್ಮ ಸತ್ಯಾಗ್ರಹ ಫಲಿಸುತ್ತದೆ ಎನ್ನುವ ಆಶಾಭಾವದಿಂದ ಸತ್ಯಾಗ್ರಹಿಗಳ ಉಪವಾಸ ಮುಂದುವರಿಯುತ್ತಿದೆ. ಪ್ರತಿದಿನವೂ ಚಪ್ಪರದ ಫಲಕದಲ್ಲಿನ ಉಪವಾಸದ ದಿನಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ತ್ಯಾಗ, ಬಲಿದಾನ, ಸತ್ಯಾಗ್ರಹ, ಅಲಹಿಂಸೆ ಮುಂತಾದ ಮೌಲ್ಯಗಳ ಕುರಿತ ಭಾಷಣಗಳು ಎಲ್ಲೆಡೆ ಧ್ವನಿಸುವಾಗ, ಅವುಗಳನ್ನು ಜೀವಿಸುವಂತೆ ಇಡ್‌ಂದಕರೈ ಗ್ರಾಮದ ಚಪ್ಪರದ ಕೆಳಗೆ ಉಪವಾಸ ಸತ್ಯಾಗ್ರಹ ಮುಂದುವರೆದಿದೆ.

(ಸಭಾರ ಪ್ರಜಾವಾಣಿ)

# ಹೆಸರಿಗೆ ಅನ್ವರ್ಥವಾಗಿ ಬಾಳಿದ ಸುಮನಾ ವಿಶ್ವನಾಥ್

ಮೈಸೂರಿನ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸುತ್ತಿರುವ ವೇದಿಕೆಗಳಲ್ಲೊಂದಾದ "ವನಮಾಲಿ ಸೇವಾ ಟ್ರಸ್ಟ್"ನ ಪ್ರಧಾನ ಕಾರ್ಯದರ್ಶಿ ಹಾಗೂ ಮೂಲಚೇತನ ಶ್ರೀಮತಿ ಸುಮನಾ ವಿಶ್ವನಾಥ್ ಇನ್ನಿಲ್ಲವಾಗಿದ್ದಾರೆ. ಸಸಂಸ್ಕೃತಿ ಹಾಗೂ ಸಮಾಜದ ಉತ್ಕರ್ಷಕ್ಕೆ ಗಣನೀಯ ಕಾಣಿಕೆಗಳನ್ನು ನೀಡಿರುವ ವಿದ್ವಾಂಸರನ್ನು ಮತ್ತು ಸ್ವಯಂಸೇವಕರನ್ನು ಗುರುತಿಸಿ–ಗೌರವಿಸಲು, ಅಂತಯೇ ಅಶಕ್ತ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾಕೇಂದ್ರಗಳಿಗೆ ನರವು ಹಣವನ್ನು ನೀಡಲು, ಪ್ರತಿವರ್ಷವೂ ಒಂದು ಘನಸಮಾರಂಭವನ್ನು ಹಮ್ಮಿಕೊಳ್ಳುತ್ತಾ ಬಂದಿರುವ "ವನಮಾಲಿ ಸೇವಾ ಟ್ರಸ್ಟ್" ತನ್ನ ಐದನೇ ವಾರ್ಷಿಕ ಸಮಾರಂಭವನ್ನು 2014ರ ಆಗಸ್ಟ್ 9ನೇ ದಿನಾಂಕಕ್ಕೆ ನಿಗದಿಪಡಿಸಿತ್ತು. ಇದರಲ್ಲಿ ಖ್ಯಾತ ಇತಿಹಾಸಜ್ಞ ಪ್ರೊ.ಷ.ಶೆಟ್ಟರ್ ಟವರಿಗೆ "ಶ್ರೀ ವನಮಾಲಿ ಸೇವಾಪ್ರಶಸ್ತಿ"ಯನ್ನೂ ಮತ್ತು ಮೇಲುಕೋಟೆಯ ಹಿರಿಯ ಸರ್ವೋದಯ ಕಾರ್ಯಕರ್ತ ಶ್ರೀ ಸುರೇಂದ್ರ ಕೌಲಗಿಯವರಿಗೆ "ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿ ಗೌರವ ಪ್ರಶಸ್ತಿ" ಯನ್ನೂ ನೀಡುವ ಮುಖ್ಯ ಕಾರ್ಯಕ್ರಮವಿತ್ತು. ಇದರ ಸಿದ್ಧತೆಗಾಗೆಂದೇ ಭರದಿಂದ ಓಡಾಡುತ್ತಿದ್ದ ಸಮಯದಲ್ಲಿ, ಆಗಸ್ಟ್ 3ರ ಬೆಳಗ್ಗೆ ಸುಮನಾ ತನ್ನ ಸ್ಕೂಟರ್‌ನಿಂದ ಜಾರಿಬಿದ್ದು ಆಕಸ್ಮಿಕ ಸಾವಿಗೀಡಾಗಿ, ತಮ್ಮ ಅಪಾರ ಬಂಧುಮಿತ್ರವರ್ಗವನ್ನು ಧಕ್ಕೆ – ದುಃಖಗಳ ಮಡುವಿನಲ್ಲಿ ಬಿಟ್ಟುಹೋಗಿದ್ದಾರೆ.

ಪ್ರೌಢಶಾಲಾ ಶಿಕ್ಷಕ ಶ್ರೀ.ಕೆ.ಸುಂದರರಾಜು–ಶ್ರೀಮತಿ ವಿಜಯಲಕ್ಷ್ಮೀ ದಂಪತಿಗೆ 1966ರ ಜೂನ್ ಒಂದರಂದು ಚಾಮರಾಜನಗರದ ರಮಸಮುದ್ರದಲ್ಲಿ ಜನಿಸಿದ ಸುಮನಾ, ಬಾಲ್ಯದಲ್ಲಿಯೇ ತಮ್ಮ ಬಹುಮುಖಪ್ರತಿಭೆಯನ್ನು ತೋರ್ಪಡಿಸಿದ್ದರು. ಶಾಲಾಬಾಲಕಿಯಾಗಿ ಅಂರತಶಾಲಾ ಚರ್ಚಾಸ್ಪರ್ಧೆಗಳಲ್ಲಿ ಅವರು ಬಹುಮಾನಗಳನ್ನು ಗಳಿಸಿದ್ದರು ಮತ್ತು ರಾಷ್ಟ್ರೀಯ ವಿದ್ಯಾರ್ಥಿವೇತನಕ್ಕೆ ಪಾತ್ರರಾಗಿದ್ದರು. ಹಾಗೆಯೇ ಮುಂದುವರೆದು, "ಗಮಕ ಪ್ರೌಢ" ಪರೀಕ್ಷೆಯಲ್ಲಿ ಮೊದಲ ಸ್ಥಾನ ಗಳಿಸಿದರು, ಹಿಂದಿಭಾಷೆಯಲ್ಲಿ "ನಿಷ್ಣಾತ್" ಪದವಿ ಪಡೆದರು,ಮತ್ತು ಸುಗಮ ಸಂಗೀತ – ಶಾಸ್ತ್ರೀಯ ಸಂಗೀತ ಎರಡನ್ನೂ ಕಲಿತರು. ಅವರು ದೇವರನಾಮಗಳನ್ನು ಸುಮಧುರವಾಗಿ ಹಾಡುತ್ತಿದ್ದರು.

1984ರಲ್ಲಿ ಕುಟುಂಬವು ಮೈಸೂರಿಗೆ ಬಂದು ನೆಲಸಿದ್ದರಿಂದಾಗಿ, ಸುಮನಾ ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗ ಮುಂದುವರೆಸಿ, ಬಿ.ಎ. ಪದವಿ ಪಡೆದು, ಆ ಬಳಿಕ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್‌ನಲ್ಲಿ ಎಂ.ಎ. ಪದವಿ ಪಡೆದರು. ಆರೇಳು ವರ್ಷಗಳು ಮೈಸೂರಿನ ನಟರಾಜ ಕಾಲೇಜಿನಲ್ಲಿಯೂ,

2003ರಿಂದ 2011ರವರೆಗೆ ಡಾ//ದೇಜಗೌ ಅವರ ಕುವೆಂಪು ವಿದ್ಯಾವರ್ಧಕ ಕಾಲೇಜಿನಲ್ಲಿಯೂ ಇಂಗ್ಲೀಷ್ ಲೆಕ್ಚರರ್ ಆಗಿದ್ದು, 2011ರಿಂದ ಕಡೆಯವರೆಗೆ ಮೈಸೂರಿನ ಎಸ್.ಡಿ.ಎಂ.ಮಹಿಳಾ ಕಾಲೇಜಿನಲ್ಲಿ ಡಿಗ್ರಿ ತರಗತಿಗಳಿಗೆ ಲೆಕ್ಚರರ್ ಆಗಿದ್ದರು. 2011ರಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಎಂ.ಫಿಲ್.ಪಡೆದು, ಬಳಿಕ ಮೈಸೂರು ವಿಶ್ವವಿದ್ಯಾನಿಲಯದ ಪಿ.ಎಚ್.ಡಿ. ಪದವಿಗಾಗಿ, "ಇಂಡಿಯನ್ ಎಪಿಕ್ ಹೀರೋಸ್ ಆಯಂಡ್ ಇಂಡಿಯನ್ ಈಸ್ತೆಟಿಕ್ಸ್" ಶೀರ್ಷಿಕೆಯ ಪ್ರೌಢಪ್ರಬಂಧವನ್ನು ಬರೆಯುತ್ತಿದ್ದರು.

ಸುಮಾರು 2000ನೇ ಇಸವಿಯಲ್ಲಿ ಪದ್ಮಶ್ರೀ ಡಾ//ಮತ್ತೂರು ಕೃಷ್ಣಮೂರ್ತಿಯವರ ವ್ಯಾಖ್ಯಾನದ ಮೋಡಿಗೆ ಒಳಗಾಗಿ ಅವರಿಂದ ತಮ್ಮ "ಮಾನಸಪುತ್ರಿ" ಎಂದು ಕರೆಸಿಕೊಳ್ಳುವ ಮಟ್ಟಿಗೆ ಅವರ ಪ್ರೀತಿಯನ್ನು ಸಮನಾ ಗಳಿಸಿದರು. ಮುಂದೆ, ಭಾರತೀಯ ವಿದ್ಯಾಭವನ ಕೇಂದ್ರವನ್ನು ಸ್ಥಾಪಿಸುವ ಕಾರ್ಯದ ಸಮಯದಲ್ಲಿ ಮತ್ತು ಹೊಸಹಳ್ಳಿ ಕೇಶವಮೂರ್ತಿಯವರೊಡನೆ ಕುಮಾರವ್ಯಾಸ ಭಾರತದ ವಾಚನ-ವ್ಯಾಖ್ಯಾನಗಳನ್ನು ನೀಡುವ ಸಂದರ್ಭಗಳಲ್ಲಿ ಮತ್ತೂರರು ಮೈಸೂರಿಗೆ ಬಂದಾಗಲೆಲ್ಲಾ ಅವರಿಗೆ ಸುಮನಾ ಮತ್ತು ಪತಿ ವಿಶ್ವನಾಥ್ ಅನ್ಯಾದೃಶ ಸೇವೆ ಸಲ್ಲಿಸುತ್ತಿದ್ದರು. ಈ ನಿಕಟ ಬಾಂಧವ್ಯದಿಂದಾಗಿ, ಸುಮನಾ ಮತೂರರ ಆತ್ಮಕಥಾಗಾರ್ತಿಯಾಗಿಬಿಟ್ಟರು. ಮತ್ತೂರರಿಂದಲೇ ಅವರ ಜೀವನಚರಿತ್ರೆಯನ್ನು ಹೇಳಿಸಿ, ಸುಮಾರು 20 ಕ್ಯಾಸೆಟ್‌ಗಳಲ್ಲಿ ರೆಕಾರ್ಡ್ ಮಾಡಿಕೊಂಡು, "ಮತ್ತೂರ್‌ಜೀ ಜೀವನಗಾಥೆ" ಎಂಬ ಪುಸ್ತಕವನ್ನು ಬರೆದರು. ಈ ಪುಸ್ತಕವು ಅದ್ಭುತವಾಗಿ ಮುದ್ರಣಗೊಂಡು, ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ "ಮತ್ತೂರು ಕೃಷ್ಣಮೂರ್ತಿ – ರಾಜಲಕ್ಷ್ಮೀ" ದಂಪತಿ ಸನ್ಮಾನ ಸಹಿತ ಲೋಕಾರ್ಪಿತವಾಗಿ, ಎಲ್ಲೆಡೆಯಿಂದ ಪ್ರಶಂಸೆ ಪಡೆಯಿತು.

ಸುಮನಾ ಇದಕ್ಕೂ ಮುಂಚೆಯೇ ಮತ್ತೂರರು ಮತ್ತು ಅವರ 15–20 ಆಪ್ತರೊಡನೆ ಉತ್ತರಭಾರತ ಪ್ರವಾಸವನ್ನು ಕೈಗೊಂಡು, ಅದರ ಅನುಭವವನ್ನು ಹಂಚಿಕೊಳ್ಳಲು "ಮತ್ತೂರರೊಂದಿಗೆ ಕಾಶೀಯಾತ್ರೆ" ಎಂಬ ಪುಸ್ತಕ ಬರೆದಿದ್ದರು. ಪುಸ್ತಕ ಬರೆಯಲು ಸುಮನಾ ಮಾಡಿದ ಪ್ರಥಮ ಪ್ರಯತ್ನವಿದು. ಇದಾದಮೇಲೆ, "ಗಮಕ ಗಂಧರ್ವ"(ಹೊಸಹಳ್ಳಿ ಕೇಶವಮೂರ್ತಿಗಳ ಜೀವನಚರಿತ್ರೆ), "ತುಂಗೆಯ ಮಡಿಲಲ್ಲಿ"(ಮತ್ತೂರು ವೇ//ಬ್ರಂ//ಶ್ರೀ// ಮಾರ್ಕಂಡೇಯ ಅವಧಾನಿಗಳ ಜೀವನಚರಿತ್ರೆ) ಮತ್ತು "ಗಮಕಕಲಾಭೂಷಣ"(ತಿಪಟೂರು ಎಚ್.ಕೆ.ರಾಮಸ್ವಾಮಿಯವರ ಜೀವನಚರಿತ್ರೆ) ಎಂಬ ಪುಸ್ತಕಗಳ ಸರಣಿಯನ್ನೇ ಅವರು ರಚಿಸಿದರು. ಇದಕ್ಕೆ ಪೂರಕವಾಗಿ, "ಬದುಕು-ಬರಹ" ಶೀರ್ಷಿಕೆಯಡಿಯಲ್ಲಿ, ಮತ್ತೂರು ಕೃಷ್ಣಮೂರ್ತಿ, ಸುಜನಾ ಮತ್ತು ದೇಜಗೌ ಅವರ ಸಂಕ್ಷಿಪ್ತ ಜೀವನಚರಿತ್ರೆಗಳನ್ನೂ ಅವರು ಬರೆದರು.

"ಸಂಯುಕ್ತ ಕರ್ನಾಟಕ" ದಿನಪತ್ರಿಕೆಯ "ಗಾಂಧಿ ಉಪನಿಷತ್" ಎಂಬ ಶೀರ್ಷಿಕೆಯಡಿಯಲ್ಲಿ, ಮತ್ತೂರರು ಗಾಂಧೀಜಿ ಜೀವನದಲ್ಲಿನ ಹೃದಯಸ್ಪರ್ಶಿ ಘಟನೆಗಳನ್ನು ಬರೆಯಲಾರಂಭಿಸಿದನಂತರ ಅವರಿಗೆ ಬಿಡುವಿಲ್ಲದಂತಾದ ಕಾರಣ, ಸುಮನಾ ತಾವೇ ಗಾಂಧೀಜಿಯವರನ್ನು ಕುರಿತ ಅನೇಕ ಪುಸ್ತಕಗಳಲ್ಲಿ ಅಂತಹ ಘಟನೆಗಳನ್ನು ಹುಡುಕಿಕೊಟ್ಟು, ಒಂದು ಸಾವಿರಕ್ಕೂ ಹೆಚ್ಚು ಅಂತಹ ಲೇಖನಗಳನ್ನು

ಪ್ರಕಟವಾಗಲು ಮತ್ತೂರರಿಗೆ ನೆರವಾದರು. ಈ ಲೇಖನಗಳು 12 ಸಂಪುಟಗಳಲ್ಲಿ ಪ್ರಕಟಗೊಂಡಿವೆ; ಇಂಗ್ಲೀಷ್ ಭಾಷೆಗೂ ಅನುವಾದಗೊಂಡಿವೆ.

ಭಾರತದ ಪ್ರಧಾನಮಂತ್ರಿಗಳಾಗಿದ್ದ ಶ್ರೀ.ಪಿ.ವಿ.ನರಸಿಂಹರಾವ್ ಅವರು ತಾವು ಬರೆದ "ಇನ್‌ಸೈಡರ್" ಕಾದಂಬರಿಯನ್ನೂ, ಮತ್ತು ಕಂಚಿ ಕಾಮಕೋಟಿಪೀಠಸ್ಥರಾಗಿದ್ದ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳ ನೂರಾರು ಇಂಗ್ಲೀಷ್ ಪ್ರವಚನಗಳ 8 ಸಂಪುಟಗಳನ್ನೂ ಕನ್ನಡಕ್ಕ ಅನುವಾದ ಮಾಡುವ ಕಾರ್ಯಕ್ಕೆ ಮತ್ತಊರರು ಪ್ರಧಾನ ಸಂಪಾದಕರಾದಾಗ, ಆ ಅಗಾಧ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತ ಸುಮನಾ, ತಾವೂ ಆ ಸಂಪುಟಗಳಲ್ಲಿ ಒಂದು ಭಾಗವನ್ನು ಭಾಷಾಂತರಿಸಿದ್ದಲ್ಲದೆ, ಪ್ರಸಿದ್ಧ ಭಾಷಾಂತರಕಾರರನ್ನೂ ಆ ಉದ್ಯಮಕ್ಕೆ ಒಪ್ಪಿಸಿ, ಆ ಮಹತ್ತಾದ ಯೋಜನೆಯನ್ನು ನಿಗದಿತ ಅವಧಿಯಲ್ಲೇ ಅಚ್ಚುಕಟ್ಟಾಗಿ ಪೂರೈಸಿಕೊಟ್ಟರು. ಭಾರತೀಯ ವಿದ್ಯಾಭವನದ ಸ್ಥಾಪಕರಾದ ಶ್ರೀ.ಕೆ.ಎಂ.ಮುನ್ಷಿ ಯವರ ಎರಡು ಪುಸ್ತಕಗಳನ್ನು ಕೂಡ ಸುಮನಾ ಕನ್ನಡಕ್ಕೆ ಅನುವಾದಿಸಿದರು. ಭಾಷಾಂತರದ ಹಲವು ಕಾರ್ಯಗಳಲ್ಲಿ ಸುಮನಾ ತಮ್ಮ ತಂದೆಯವರನ್ನೂ ತೊಡಗಿಸಿಕೊಂಡಿದ್ದರು.

ಮತ್ತೂರರು 06.10.2011 ದಿನಾಂಕದಂದು ನಿಧನರಾದ ಮೇಲೆ, ಅವರ ನೆನಪನ್ನು ಶಾಶ್ವತಗೊಳಿಸಲು ಅವರ ಅಭಿಮಾನಿಗಳಿಂದ ಲೇಖನಗಳನ್ನು ಬರೆಸಿ, "ಹೀಗಿದ್ದರು ಮತ್ತೂರ್‌ಜೀ" ಎಂಬ ಸಂಕಲನವನ್ನು ಸುಮನಾ ತಮ್ಮ ಸಂಪಾದಕತ್ವದಲ್ಲಿ ರಚಿಸಿ, ಶ್ರೀಮತಿ ವಿಜಯಲಕ್ಷ್ಮೀಯವರಿಂದ ಪ್ರಕಟಪಡಿಸಿದರು.

ರೇಡಿಯೋ-ಟಿ.ವಿ. ಕಾರ್ಯಕ್ರಮಗಳಲ್ಲೂ ಸಕ್ರಿಯ ಪಾತ್ರವಹಿಸಿದ್ದ ಸುಮನಾ, ವನಮಾಲಿ ಸೇವಾ ಟ್ರಸ್ಟ್ ಪ್ರಶಸ್ತಿಗೆ ಭಾಜನರಾದ ಮಹಾಮಹೋಪಾಧ್ಯಾಯ ಡಾ.ಎನ್.ರಂಗನಾಥ ಶರ್ಮರನ್ನು ಮೈಸೂರು ಆಕಾಶವಾಣಿಗಾಗಿ ಸಂದರ್ಶಿಸಿದ್ದರು; "ಶಂಕರ" ವಾಹಿನಿಗಾಗಿ ಮತ್ತೂರರೊಡನೆ ಸಂದರ್ಶನ ನಡೆಸಿಕೊಟ್ಟಿದ್ದರು; ಮೈಸೂರು ಆಕಾಶವಾಣಿಯಲ್ಲಿ ಕೆಲವು ವಿಚಾರಗೋಷ್ಠಿಗಳಲ್ಲಿಯೂ ಭಾಗವಹಿಸಿದ್ದರು; ಮತ್ತು ಎಫ್‌ಎಮ್-15 ರೇಡಿಯೋದಲ್ಲಿ ವನಮಾಲಿ ಟ್ರಸ್ಟ್‌ನ ಪರಿಚಯವನ್ನು ಮಾಡಿಕೊಟ್ಟರು.

ಚೈತನ್ಯದ ಚಿಲುಮೆಯಾಗಿ, ಸ್ನೇಹಮಯಿಯಾಗಿ, ಜನೋಪಕರಿಯಾಗಿ, ಉತ್ತಮ ಲೇಖಕಿ-ಅನುವಾದಕಿ-ಶಿಕ್ಷಕಿ-ಉಪನ್ಯಾಸಕಿ-ಸಂಘಟಕಿ-ಸಂದರ್ಶಕಿ ಹಾಗೂ ಗೃಹಿಣಿಯೂ ಆಗಿ, ನಿತ್ಯನಗುಮೊಗದಿಂದ ಮಿನುಗಿದ ಸುಮನಾ, ಅಲ್ಪಾಯುಸ್ಸಿನಲ್ಲೇ ಅತಿಶಯ ಬೆಳಕನ್ನು ಬೀರಿ, ತಾವು ಸ್ಪರ್ಶಿಸಿದ ಜೀವಗಳೆಲ್ಲಕ್ಕೂ ಒಂದು ವಿಶಿಷ್ಟ ಜೀವನೋತ್ಸಾಹವನ್ನೂ, ಸ್ನೇಹಸೌರಭವನ್ನೂ, ಸವಿನೆನಪುಗಳ ಬೊಕ್ಕಸವನ್ನೂ ಬಳುವಳಿಯಾಗಿತ್ತು, "ಸುಮನಾ" ಎಂಬ ಶ್ರೇಷ್ಠ ಹೆಸರಿಗೆ ಅನ್ವರ್ಥವಾಗಿ ಹಾಗೂ "ವನಮಾಲಿ" ಯು ಮೆಚ್ಚುವಂತೆ ಬಾಳಿ, ಈಗ ಥಟ್ಟನೆ ನಮ್ಮ ನಡುವಿನಿಂದ ಮರೆಯಾಗಿದ್‌ದಾರೆ.

ಸುಹಾಸಿನಿ-ಸುಮಧುರಭಾಷಿಣಿ-ಸುಗುಣಭೂಷಣಿ ಸುಮನಾರಂಥವರು ಮತ್ತೆ ಮತ್ತೆ ಹುಟ್ಟಿ ಬಂದು ನಾಳಿನ ಬಾಳಿಗೆ ಹದುಳ-ಹಸನು-ಹರುಷ ತರುತ್ತಿರಲಿ!

**ಸುಮನಾ ಅಭಿಮಾನಿ ಬಳಗ, ಮೈಸೂರು**

# ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘದ ಮಹಾಮಂತ್ರಿ ಶೇಕ್ ಹುಸೇನ್ ಮತ್ತು ಮಂತ್ರಿ ವಿಜಯ್ ಕುಮಾರ್ ತಮ್ಮ 2014 ಆಗಸ್ಟ್ 1ನೇ ತಾರೀಖಿನ ಪತ್ರದ ಮೂಲಕ ದೇಶದಲ್ಲಿಯ ಎಲ್ಲ ಸರ್ವೋದಯ ಮಂಡಲಗಳ ಅಧ್ಯಕ್ಷರುಗಳಿಗೆ ಮತ್ತು ಜಿಲ್ಲಾ ಸರ್ವೋದಯ ಮಂಡಲ ಅಧ್ಯಕ್ಷರುಗಳಿಗೆ ಈ ರೀತಿ ಪತ್ರ ಬರೆದಿದ್ದಾರೆ. ನೀವೆಲ್ಲರೂ ಸರ್ವೋದಯ ಆಂದೋಲನದ ಸಮರ್ಪಿತ ಜೊತೆಗಾರರು. ತನು-ಮನ-ಧನದಿಂದ ಸಮಾಜ ಮತ್ತು ದೇಶದ ನಿರ್ಮಾಣದಲ್ಲಿ ತೊಡಗಿದ್ದೀರಿ. ಇಂದು ಪ್ರತಿಯೊಂದು ಕ್ಷಣವನ್ನು ಉಪಯೋಗಿಸುತ್ತಾ ನಮ್ಮ ಗುರಿ ಸಾಧಿಸುವುದಕ್ಕಾಗಿ ಕ್ರಿಯಾಶೀಲರಾಗಬೇಕಾಗುವುದು. ಇಲ್ಲವಾದಲ್ಲಿ ಸಮಯ ಯಾರ ನಿರೀಕ್ಷಣೆಯಲ್ಲಿಯೂ ನಿಲ್ಲುವುದಿಲ್ಲ. ನಿಮ್ಮೆಲ್ಲರಿಗೂ ನಿಮ್ಮದೇ ಬಿಡುವಿಲ್ಲದ ಕೆಲಸಗಳಿವೆ. ಆದರೂ ಕೂಡ ಆ ಬಿಡುವಿಲ್ಲದ ಸಮಯದಲ್ಲಿಯೇ ಸಂಘಟನೆಯನ್ನು ಬಲಪಡಿಸುವುದಕ್ಕಾಗಿ ಸುಬದ್ಧವಾದ ಕಾರ್ಯಕ್ರಮ ತಯಾರಿಸಬೇಕು. ಮೊದಲನೆಯದಾಗಿ ಯಾವ ಸರ್ವೋದಯ ಮಂಡಲಗಳ ಸಂಘಟನೆಯಾಗಿ ಮೂರು ವರ್ಷ ಆಗಿ ಹೋಗಿವೆಯೋ ಕೂಡಲೇ ಮಂಡಲದ ಪುನರ್ ಘಟನೆಯ ದಿನಾಂಕವನ್ನು ನಿಶ್ಚಯಿಸಿ ಸರ್ವಸೇವಾ ಸಂಘಕ್ಕೆ ತಿಳಿಸಬೇಕು. ಈಗಾಗಲೇ ಪುನರ ಸಂಘಟಿತವಾಗಿರುವ ಅಧ್ಯಕ್ಷರು ಸಂಘಟನೆ ಬಗ್ಗೆ ವಿಚಾರ ಮಾಡಬೇಕು ಮತ್ತು ದೂರದೃಷ್ಟಿಯನ್ನು ಇಟ್ಟುಕೊಂಡು ಒಂದು ವರ್ಷದ ಕಾರ್ಯಕ್ರಮ ರಚಿಸಬೇಕು ಹಾಗೂ ನಮಗೂ ಕೂಡ ತಿಳಿಸಬೇಕು. ಸರ್ವಸೇವಾ ಸಂಘದ ಕಾರ್ಯಸಮಿತಿಯ ಮುಂದಿನ ಸಭೆಯ ವೇಳೆಗೆ ಒಂದು ವರ್ಷದ ಕಾರ್ಯಕ್ರಮ ರಚಿಸಿಕೊಂಡು ಬಂದಲ್ಲಿ ಸಂಘಟನೆಗೆ ಬಹಳ ಪ್ರಯೋಜನವಾಗುವುದು. ಸಂಘಟನೆ ಇದ್ದರೆ ಮಾತ್ರ ನಾವು ಮತ್ತು ನಮ್ಮ ಅಸ್ತಿತ್ವ ಕಾರ್ಯಕ್ರಮದಲ್ಲಿ ಲೋಕಸೇವಕರು, ಸರ್ವೋದಯ ಮಿತ್ರರುಗಳು ಶಿಬಿರ ಮತ್ತು ಶಾಂತಿಸೇನೆಯ ಒಂದು ಶಿಬಿರದ ದಿನಾಂಕವನ್ನು ನಿಶ್ಚಯಿಸಿ 2014 ಡಿಸೆಂಬರ್ 7 ಮತ್ತು 8 ದಿನಾಂಕದಲ್ಲಿ ಕೌಸಾನಿಯ ಸಭೆಗೆ ತರಬೇಕು ಅಥವಾ ಮೊದಲೇ ಪತ್ರದ ಮೂಲಕ ಕಳುಹಿಸಿದ್ದಲ್ಲಿ ಒಳ್ಳೆಯದು.

ನೀವು ಗಾಂಧೀ, ವಿನೋಬಾ, ಜಯಪ್ರಕಾಶರ ಉತ್ತರಾಧಿಕಾರಿ, ಸಹ ಕಾರ್ಯಕರ್ತರಾಗಿದ್ದೀರಿ. ವೇಗವಾಗಿ ಕೆಲಸಮಾಡಿ ಸಂಘಟನೆಯ ದಶ ಮತ್ತು ದಿಶೆಯನ್ನು ಗಟ್ಟಿಮಾಡುವಿರೆಂದು ಆಶಿಸುತ್ತೇನೆ.

*****

ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಸರ್ವೋದಯ ಮಿತ್ರರು ಆಗಸ್ಟ್ 15 ಮತ್ತು 16ರಂದು ಸಭೆ ಸೇರಿ ವಿಚಾರ ವಿನಿಮಯ ನಡೆಸಿದರು. ಮೈಸೂರು ಸಭೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಗಾಂಧೀ ಭವನದಲ್ಲಿ ನಡೆಯಿತು. ಗಾಂಧೀ ಭವನದ ನಿರ್ದೇಶಕರಾದ ಡಾ// ಬಸವರಾಜ್ ಉಪಸ್ಥಿತರಿದ್ದರು. ಮಂಡ್ಯದ ಸಭೆ ಮಿತ್ರರಾದ ಜಿ.ಟಿ.ವೀರಪ್ಪನವರ ಮನೆಯಲ್ಲಿ ನಡೆಯಿತು.

*****

ಸ್ವಾತಂತ್ರೋತ್ಸವದ ಸಂದರ್ಭದಲ್ಲಿ ಸರ್ವೋದಯ ಮಂಡಲದ ಅಧ್ಯಕ್ಷರು ಮೈಸೂರಿನ ಕೌಟಿಲ್ಯ ಮತ್ತು ಗೋಪಾಲಸ್ವಾಮಿ ಶಿಶುವಿಹಾರ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯೋತ್ಸವದ ಬಗ್ಗೆ ಮಾತನಾಡಿದರು.

# ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೊಸ ಜೀವನ ದಾರಿ ಕೇಂದ್ರದಲ್ಲಿ ಮೈಸೂರಿನ ಡೆಮಾಸ್ಟ್ರೇಷನ್ ಶಾಲೆಯ ಮಕ್ಕಳು, ತ್ರೀವೇಣಿಯವರ ನೇತೃತ್ವದಲ್ಲಿ ೨೫ ವಿದ್ಯಾರ್ಥಿಗಳು ಒಂದು ದಿನದ ಶಿಬಿರ ನಡೆಸಿದರು. ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸಂತೋಷ್ ಕೌಲಗಿ, ಮನು, ಮೋಹನ್ ರವರುಗಳು ಭಾಗವಹಿಸಿದ್ದರು.

*******

ಹೆಚ್ಚಿನ ಚಿಕಿತ್ಸೆಗಾಗಿ ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದ ಶ್ರಾವಣಿ ಎಂಬ ದತ್ತು ಕೇಂದ್ರದ ಮಗುವಿಗೆ ಮೇಲುಕೋಟೆಯ ಯುವಕ ಮತ್ತು ಜನಪದ ವಿದ್ಯಾಲಯದ ವಿದ್ಯಾರ್ಥಿಯಾಗಿದ್ದ ಅರೆಯರ್ ಶ್ರೀರಾಮಶರ್ಮಾರವರ ಮಗ ಎ.ಎಸ್.ಪಾರ್ಥಸಾರಥಿಯವರು ರಕ್ತದಾನ ಮಾಡಿದರು ಮತ್ತು ಇತ್ತೀಚೆಗೆ ದತ್ತು ಸೇವಾ ಕೇಂದ್ರಕ್ಕೆ ಮೂರು ವರ್ಷದ ಅಮೂಲ್ಯ ಎಂಬ ಹೆಣ್ಣು ಮಗು ದತ್ತು ಕೇಂದ್ರದಲ್ಲಿ ಆಶ್ರಯ ಪಡೆಯಿತು ಮತ್ತು ಮಂಡ್ಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಇವರ ವತಿಯಿಂದ ಹನ್ನೆರಡು ದಿನಗಳ ಗಂಡು ಮಗುವನ್ನು ದತ್ತು ಕೇಂದ್ರಕ್ಕೆ ದಾಖಲಿಸಿಕೊಳ್ಳಲಾಯಿತು. ಮಗುವಿಗೆ ಆನಂದ ಎಂದು ನಾಮಕರಣ ಮಾಡಲಾಯಿತು.

*******

ಬೆಂಗಳೂರಿನಲ್ಲಿರುವ ಟ್ರಸ್ಟಿನ ಅಭಿಮಾನಿಗಳಾದ ನರಸಿಂಹ ಪ್ರಸಾದ್ ಕುಟುಂಬದವರು ಟ್ರಸ್ಟಿಗೆ ಭೇಟಿಕೊಟ್ಟರು. ಚಿಕ್ಕಮರಳಿ ಬೋರೇಗೌಡರವರು, ಛಾಯಾಪತಿ ಅಡ್ವೋಕೇಟ್ ತಾರಾರವರು ಟ್ರಸ್ಟಿಗೆ ಭೇಟಿ ಕೊಟ್ಟರು.

# ಜನಪದ ನಿಲಯದ ಅಂತರಂಗದಲ್ಲಿ – ೧೨೫



ಜಯಪ್ರಕಾಶ್ ನಾರಾಯಣರ ಸಂಪರ್ಕದಿಂದಾಗಿ ಬಿಹಾರಿನ ಸೋಕೋ ದೇವ್ರದಲ್ಲಿಯ ಸರ್ವೋದಯ ಆಶ್ರಮಕ್ಕೆ 1954 ರಲ್ಲಿ ಹೋದಾಗ ಆಶ್ರಮ ಪ್ರವೇಶಿಸುತ್ತಿದ್ದಂತೆಯೇ ಬಿಳಿ ಖಾದಿ ಜುಬ್ಬ ಮತ್ತು ಕಚ್ಚೆ ಪಂಚೆ ಉಟ್ಟ ತುಸು ಕುಳ್ಳಾಕೃತಿಯ ಅರೆ ಬಕ್ಕ ತಲೆಯ ನಗುಮುಖದ ವ್ಯಕ್ತಿಯೊಬ್ಬರು ನಮ್ಮನ್ನು ಆಲಂಗಿಸಿಕೊಂಡು ಆಶ್ರಮಕ್ಕೆ ಸ್ವಾಗತಿಸಿದರು. ಅವರೆ ಮುಂದೆ ನಲ್ವತ್ತು ವರ್ಷಗಳ ಕಾಲ ನನ್ನ ಹಿರಿಯಣ್ಣನಂತೆ ಇದ್ದ ತ್ರಿಪುರಾರಿಶರಣ್ ಸಿಂಗ್. ಸಮಾಜವಾದಿ ಪಕ್ಷವನ್ನು ಬಿಟ್ಟು ಜಯಪ್ರಕಾಶ್ ನಾರಾಯಣರೊಂದಿಗೆ ಸರ್ವೋದಯ ಆಂದೋಲನವನ್ನು ಸೇರಿದಂಥ ಯುವಕ. ಇನ್ನೂ ಸಮಾಜವಾದಿ ವಿಚಾರದ ಗುಂಗಿನಿಂದ ಹೊರಗೆ ಬರಲಾರದೆ ಒದ್ದಾಡುತ್ತಿದ್ದ ವ್ಯಕ್ತಿ. ಕರ್ನಾಟಕದಿಂದ ಹೋದಾಗ ಕೇವಲ ಇಪ್ಪತ್ತು ವರ್ಷದವನಾಗಿದ್ದ ನನಗೆ ಹೊಸ ಸ್ಥಳದ, ಹೊಸ ಜನರ ಮತ್ತು ಹೊಸ ಭಾಷೆಯ ಹಾಗೂ ಹೊಸ ನಡೆ ನುಡಿಗಳ ಮಧ್ಯೆ ಯಾವ ಬಿಕ್ಕಟ್ಟು ಇಲ್ಲದಂತೆ ಮಿಡಿತಗೊಳ್ಳಲು ಸಹಾಯ ಮಾಡಿದವರು ತ್ರಿಪುರಾರಿ ಶರಣ್. ಅಲ್ಲಿಗೆ ಹೋದ ಹೊಸದರಲ್ಲಿ ಹಾಕಿಕೊಂಡಿದ್ದ ಮುಂಬೈ ನಗರದ ಬಟ್ಟೆ ಬರೆಗಳನ್ನು ಕಳಚಿ ಖಾದಿ ಪಂಚೆ ಅದೂ ಕೂಡ ಬಿಹಾರದಲ್ಲಿಯ ಪದ್ಧತಿಯಂತೆ ಕಚ್ಚೆ ಪಂಚೆ ಹಾಕುವುದನ್ನು ಜುಬ್ಬ ತೊಡುವುದನ್ನು ಅಭ್ಯಾಸ ಮಾಡಿಸಿದ ತ್ರಿಪುರಾರಿ ಅವರನ್ನು ಎಂದಿಗೂ ಮರೆಯುವಂತಿಲ್ಲ. ಎಲ್ಲಿಯವರೆಗೆ ಖಾದಿ ಬಟ್ಟೆ ಮತ್ತು ಪಂಚೆ ತೊಡುತ್ತೇನೊ ಅಲ್ಲಿಯವರೆಗೆ ತ್ರಿಪುರಾರಿ ನನ್ನ ಜೀವನದ ಮತ್ತು ಭಾವನೆಯ ಮತ್ತು ವಿಚಾರದ ಭಾಗವಾಗಿರುತ್ತಾರೆ. ನನ್ನ ಜೀವನದ ಭಾಗವಾಗಿದ್ದ ತ್ರಿಪುರಾರಿ ಶರಣರವರು ಕಳೆದ ವರ್ಷವಷ್ಟೇ ತೀರಿಕೊಂಡರು. ಆಗ ಅವರಿಗೆ ಸುಮಾರು 86 ವರ್ಷವಾಗಿತ್ತು. ಕೆಲವು ವರ್ಷಗಳ ಹಿಂದೆ ಅವರ ಆರೋಗ್ಯ ಸರಿಯಾಗಿದ್ದಾಗ . ಮತ್ತು ಅವರು ಚಟುವಟಿಕೆಯಿಂದಿದ್ದಾಗ ಬಿಹಾರ ಸರ್ಕಾರ ಅವರನ್ನು ಬಿಹಾರ ರಾಜ್ಯ □ ಖಾದಿ ಗ್ರಾಮೋದ್ಯೋಗ ಮಂಡಳಿಗೆ ಅಧ್ಯಕ್ಷರನ್ನಾಗಿ ನಿಯೋಜಿಸಿತ್ತು. ಈ ಮೊದಲು ಅವರು ಅಖಿಲ ಭಾರತ ಖಾದಿ ಆಯೋಗದ ಖಾದಿ ಪ್ರಮಾಣ ಪತ್ರ ಕೊಡುವ ಸಮಿತಿಯ ಸದಸ್ಯರಾಗಿದ್ದರು. ಅವರು ಆ ಸಮಿತಿಯ ಸದಸಯರಾಗಿದ್ದಾಗಲೇ ಮೇಲುಕೋಟೆಗೂ ಬಂದು ಜನಪದ ಸೇವಾ ಟ್ರಸ್ಟಿನ ಕಾರ್ಯಕ್ರಮ ಹಾಗೂ ಧ್ಯೇಯೋದ್ದೇಶಗಳನ್ನು ತಿಳಿದುಕೊಂಡು ಅವುಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಜನಪದ ಸೇವಾ ಟ್ರಸ್ಟಿಗೂ ಖಾದಿ ಉತ್ಪಾದನೆಯ ಪ್ರಮಾಣ ಪತ್ರ ದೊರೆಯುವಂತೆ ಮಾಡಿದರು. ಅಂದಿನಿಂದ ಟ್ರಸ್ಟಿನಲ್ಲಿ ಪ್ರಾರಂಭವಾದ ಖಾದಿ ಕೆಲಸ ಇದುವರೆಗೂ ನಡೆದುಕೊಂಡು ಬರುತ್ತಿದೆ.

ಟ್ರಸ್ಟಿನಲ್ಲಿಯ ಖಾದಿಯ ಉದ್ಯಮಕ್ಕೆ 60 ವರ್ಷಗಳಿಗೂ ಮಿಕ್ಕ ಇತಿಹಾಸವಿದೆ. ತ್ರಿಪುರಾರಿ ಮತ್ತು ನಾನು ಆಶ್ರಮದಲ್ಲಿ ಒಂದೇ ಮನೆಯಲ್ಲಿ ಇರುತ್ತಿದ್ದೆವು. ಅವರು ನನ್ನ ಆರೋಗ್ಯದ ಬಗ್ಗೆ ಸದಾ ಕಾಳಜಿ ವಹಿಸುತ್ತಿದ್ದರು. ನಾನು ಆಶ್ರಮದ ಪಕ್ಕದ ಹಳ್ಳಿಗಳಿಗೆ ರಾತ್ರಿ ಪಾಠಶಾಲೆ ನಡೆಸುವುದಕ್ಕೆ ಹೋದಾಗ ರಾತ್ರಿ ತಡವಾಗಿ ಆಶ್ರಮಕ್ಕೆ ಹಿಂದಿರುಗುತ್ತಿದ್ದೆ. ತ್ರಿಪುರಾರಿ ಅವರು ನನಗಾಗಿ ಸಾಮೂಹಿಕ ಅಡುಗೆ ಮನೆಯಿಂದ ಊಟ ಮತ್ತು ಹಾಲು ತಂದಿಟ್ಟಿರುತ್ತಿದ್ದರು. ಅಲ್ಲಿ ಅತೀ ಚಳಿ ಇರುತ್ತಿದ್ದುದರಿಂದ ನನಗೆ ವಿಶೇಷ ಹೊದಿಕೆಗಳನ್ನು ಕೊಡಿಸಿದ್ದರು. ಹಿಂದಿ ಭಾಷೆಯನ್ನು ಹೇಗೆ ಸರಿಯಾಗಿ ಉಪಯೋಗಿಸಬೇಕೆಂಬುದನ್ನು ಹೇಳಿಕೊಡುತ್ತಿದ್ದರು. ನನಗೆ ಒಂದು ಸಲ ಮಲೇರಿಯಾ ಜ್ವರ ಬಂದು ತುಂಬಾ ನಿಶಕ್ತನಾಗಿ ಹಾಸಿಗೆ ಹಿಡಿದಾಗ ಅವರು ಮಾಡಿದ ಸೇವೆ ಅಷ್ಟಿಷ್ಟಲ್ಲ. ತಾಯಿಯ ಹೃದಯ ಮತ್ತು ಅಣ್ಣನ ಹೃದಯ ಅವರ ಸೇವೆಯಲ್ಲಿ ಕಾಣಬರುತ್ತಿತ್ತು ಮತ್ತು ಅದರ ಸ್ಪರ್ಷ ಆಗುತ್ತಿತ್ತು. ಒಮ್ಮೆ ನಾನು ಆಶ್ರಮದ ಸಾರ್ವಜನಿಕ ಅಡುಗೆಮನೆಯ ವ್ಯವಸ್ಥಾಪಕನಾಗಿ ಜವಾಬ್ದಾರಿವಹಿಸಿಕೊಳ್ಳಬೇಕಾಗಿ ಬಂತು. ಲೆಕ್ಕ ಪತ್ರವನ್ನು ಇಡಬೇಕಾಗಿತ್ತು. ಲೆಕ್ಕ ಪತ್ರ ಇಡುವ ಕ್ರಮ ನನಗೆ ಪರಿಚಯವಿರಲಿಲ್ಲ. ಆಗ ತ್ರಿಪುರಾರಿ ಅವರು ನನ್ನ ಸಹಾಯಕ್ಕೆ ಬಂದು ಬಹಳ ಉಪಕಾರ ಮಾಡಿದರು. ಉಳಿದಂತೆ ಊಟದ ವ್ಯವಸ್ಥೆ, ದೀಪದ ವ್ಯವಸ್ಥೆ ಇತ್ಯಾದಿಗಳನ್ನು ವೆನ್ನಾಗಿ ನಿರ್ವಹಿಸಿ ಶಶ್ರಮವಾಸಿಗಳೆಲ್ಲರ ಮನ್ನಣೆ ಪಡೆದಿದ್ದೆ. ಅದರ ಶ್ರೇಯಸ್ಸು ತ್ರಿಪುರಾರಿ ಅವರಿಗೂ ಸಲ್ಲುತ್ತದೆ. 1959 ರ ನಂತರ ಕರ್ನಾಟಕಕ್ಕೆ ಬಂದು ಮೇಲುಕೋಟೆಯಲ್ಲಿ ನೆಲೆಸಿದೆ. ಶ್ರೀ ಕೃಷ್ಣ ಶಿಸುವಿಹಾರದ ಸ್ಥಾಪನೆ ಮತ್ತು ಅದರ ಕಾರ್ಯಚಟುವಟಿಕೆಗಳ ಮೂಲಕ ಗಿರಿಜಾರವರ ಪರಿಚಯವಾಗಿ ಶ್ರೀರಂಗಪಟ್ಟಣದ ಆಗನ ಕಾಲದ ಕಾವೇರಿ ಹೊಳೆಯ ದಂಡೆಯ ಮೇಲಿದ್ದ ಕೃಷ್ಣಮೂರ್ತಿ ಬಂಗಲೆಯಲ್ಲಿ ಮದುವೆ ನಡೆಯಿತು. ಆಗ ತ್ರಿಪುರಾರಿ ಶರಣ್ ನನ್ನ ಮದುವೆಯಲ್ಲಿ ಹಾಜರಿರಲು ದೂರದ ಬಿಹಾರದಿಂದ ಬಂದಿದ್ದರು. ತಮ್ಮ ಮನೆಯ ಸಂಭ್ರಮದಷ್ಟೇ ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಿವಾಹದ ಆನಂತರವೂ ಮೇಲುಕೋಟೆಗೆ ನಾಲ್ಕೈದು ಬಾರಿ ಬಂದು ಹೋದರು. ಜಯಪ್ರಕಾಶ್ ನಾರಾಯಣರು ಸ್ಥಾಪಿಸಿದ್ದ ಗ್ರಾಮ ನಿರ್ಮಾಣ ಮಂಡಲ ಎಂಬ ಸಂಸ್ಥೆಯ ಕಾರ್ಯದರ್ಶಿಯಾಗಿ ಬಿಹಾರದಲ್ಲಿ ಖಾದಿ ಕೆಲಸವನ್ನು ಬೆಳೆಸಿದರು. ಆ ರಾಜ್ಯದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದರು. ರೇಷ್ಮೆ ಕೃಷಿ ಮತ್ತು ಕೈಗಾರಿಕೆಯನ್ನು ಅಭ್ಯಸಿಸಲು ತ್ರಿಪುರಾರಿ ರಾಮನಗರ, ಚನ್ನಪಟ್ಟಣ, ಕೊಳ್ಳೆಗಾಲ ಮುಂತಾದೆಡೆಗಳಲಲ್ಲ ಸುತ್ತಾಡಿದ್ದರು. ಆ ರಾಜ್ಯದ ಅನೇಕ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಅವರು ಮಾಡಿದ ಕೆಲಸಗಳನ್ನು ಪರಿಗಣಿಸಿ ಅವರಿಗೆ ರಾಜ್ಯ ಸರ್ಕಾರವು "ಬಿಹಾರ ರತ್ನ" ಎಂಬ ಪ್ರಶಸ್ತಿಯನ್ನು ಕೊಟ್ಟು ಪುರಸ್ಕರಿಸಿತು. ತ್ರಿಪುರಾರಿ ಶರಣ್ ಸಿಂಗರಂಥ ಆತ್ಮೀಯ ಮಿತ್ರ, ಸೇವಾ ಕಾರ್ಯದ ಸಹೋದರ, ಒಂದೇ ವಿಚಾರದ ಸಹ ಪಥಿಕನನ್ನು ಕಳೆದುಕೊಂಡ ಜೀವನ ಶುಶ್ಕವಾಗಿದೆ. ಜನಪದ ಸೇವಾ ಟ್ರಸ್ಟ್ ತ್ರಿಪುರಾರಿಯವರನ್ನು ಸದಾ ಜ್ಞಾಪಕದಲ್ಲಿ ಇಟ್ಟುಕೊಂಡಿರುತ್ತದೆ.

"ಜನಪದ ವಿಚಾರ"

ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ. ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ 15ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ
ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..........................................................................

..................................................................................

..................................................................................

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 316344/ 299854
e-mail : janapada@yahoo.com - Web : janapada.net
Printed at Sanketh Mudrna, Melkote